ಪುಸ್ತಕ ಪ್ರಪಂಚ

ಸಂಪುಟ ೪೪ ಡಿಸೆಂಬರ್ ೧೯೯೩ ಸಂಚಿಕೆ ೪



ವಿಷಯ ಸೂಚಿಕೆ

ಮುಖಚಿತ್ರ: **ಮಹಾಮಸ್ತಕಾಭಿಷೇಕ**

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಡಿಸೆಂಬರ್ ೧, ೧೯೯೩ ಸಂಚಿಕೆ ೪

ಮಹಾಮಸ್ತಕಾಭಿಷೇಕ

ಕರ್ನಾಟಕದ ಇತಿಹಾಸದಲ್ಲಿ ಶ್ರವಣಬೆಳಗೊಳಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಶ್ರವಣಬೆಳಗೊಳದ ಪ್ರಾಚೀನತೆ ಕ್ರಿ. ಪೂ. ೪ನೇ ಶತಮಾನಕ್ಕಿಂತಲೂ ಹಿಂದಕ್ಕೆ ಹೋಗುತ್ತದೆ. ಕಾರಣಾಂತರದಿಂದ ಸಾಮ್ರಾಟ್ ಚಂದ್ರಗುಪ್ತನೊಡನೆ ಶ್ರುತಕೇವಲಿ–ಭದ್ರಬಾಹುಮುನಿಯು ತಮ್ಮ ಸಂಘದೊಡನೆ ಉತ್ತರದೇಶದಿಂದ ದಕ್ಷಿಣಕ್ಕೆ ಕ್ರಿ. ಪೂ. ೪ನೇ ಶತಮಾನದಲ್ಲಿ ಬಂದರು. ಅವರು ತಪಸ್ಸು ಮಾಡಿ ಸ್ವರ್ಗಸ್ಥರಾದ ಸ್ಥಳವನ್ನು ಈಗಲೂ ಶ್ರವಣಬೆಳಗೊಳದ ಚಿಕ್ಕಬೆಟ್ಟ ಅಥವಾ ಚಂದ್ರಗಿರಿಯಲ್ಲಿ ನೋಡಬಹುದು. ಚಂದ್ರಗಿರಿಯ ಗುಹೆಯಲ್ಲಿ ಶ್ರುತಕೇವಲಿ ಭದ್ರಬಾಹುಮುನಿ ಸ್ವರ್ಗಸ್ಥರಾದುದರಿಂದ ಅದು ಭದ್ರಬಾಹು–ಗುಹೆ ಎಂದೇ ಪ್ರಸಿದ್ಧವಾಗಿದೆ. ಅಲ್ಲಿ ಅವರ ಪಾದಚಿಹ್ನೆಗಳು ಈಗಲೂ ಇವೆ. ಈ ಗುಹೆ ಜೈನರಿಗೆ ಧಾರ್ಮಿಕ ದೃಷ್ಟಿಯಿಂದ ಪೂಜ್ಯವಾಗಿರುವಂತೆಯೇ ಇತಿಹಾಸಕಾರರಿಗೆ ಚಾರಿತ್ರಿಕದೃಷ್ಟಿಯಿಂದ ಗಮನಾರ್ಹವಾಗಿದೆ. ಶ್ರವಣಬೆಳಗೊಳವೊಂದರಲ್ಲಿಯೇ ಸುಮಾರು ಐದುನೂರು ಶಿಲಾಶಾಸನಗಳಿವೆ. ಊರಲ್ಲಿ ಹಾಗೂ ಬೆಟ್ಟಗಳಲ್ಲಿ ಹಲವಾರು ಜೈನಬಸದಿಗಳಿವೆ. ಇವೆಲ್ಲವೂ ಕರ್ನಾಟಕದ ಧಾರ್ಮಿಕ, ಐತಿಹಾಸಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿವೆ.

ಶ್ರವಣಬೆಳಗೊಳ ಕ್ರಿ. ಶ. ಹತ್ತನೇ ಶತಮಾನದಿಂದೀಚೆಗೆ, ಚಾಮುಂಡರಾಯನಿಂದ ಗೊಮ್ಮಟ ವಿಗ್ರಹ ನಿರ್ಮಾಣವಾದಂದಿನಿಂದ ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಆದರೆ ಅದಕ್ಕೂ ಮೊದಲೇ ಸುಮಾರು ಸಾವಿರದ ನಾಲ್ಕುನೂರು ವರ್ಷಗಳಿಗೂ ಮೊದಲು ಅದು ಮುನಿಗಳಿಗೆ ತಪಸ್ಸು ಮಾಡಿ

ಸಲ್ಲೇಖನ ಸ್ವೀಕರಿಸಿ ಮುಡಿಪಲು ಮತ್ತು ಹಾಗೆ ಮುಡಿಪಿದವರ ನಿಸಿದಿಗೆಯನ್ನು ವಂದಿಸಲು ಬರುವವರಿಗೆ ಆಕರ್ಷಕ ಕ್ಷೇತ್ರವಾಗಿತ್ತು. ಕರ್ನಾಟಕವನ್ನು ಆಳಿದ ತಲಕಾಡಿನ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಈ ಅತಿಶಯ ಕ್ಷೇತ್ರದೊಡನೆ ಸಂಬಂಧವಿಟ್ಟುಕೊಂಡಿದ್ದುದು ಕಂಡು ಬರುತ್ತದೆ. ಹೀಗಾಗಿ ಶ್ರವಣಬೆಳಗೊಳವು ಕರ್ನಾಟಕದ ಪ್ರಮುಖ ಚಾರಿತ್ರಿಕ ಕೇಂದ್ರವಾಗಿದೆ.

ಶ್ರವಣಬೆಳಗೊಳದ ಗೋಮಟೇಶ್ವರ ಭಗವಾನ್ ಬಾಹುಬಲಿಮೂರ್ತಿಗೆ ಹನ್ನೆರಡುವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕವು ರೂಢಿಯಂತೆ ನಡೆಯುವುದು. ಈ ಮಹಾಮೂರ್ತಿಯನ್ನು ಚಾಮುಂಡರಾಯ ಏಕೆ ನಿರ್ಮಾಣ ಮಾಡಿಸಿದ, ಈ ಸುಂದರ, ಸ್ಫುರದ್ರೂಪಿ ಮನ್ಮಥಾಕಾರ ಯಾರಿರಬಹುದು ಎಂಬುದು ಕುತೂಹಲವನ್ನು ಮೂಡಿಸುವ ವಿಚಾರಗಳಾಗಿವೆ. ಜೈನಪರಂಪರೆಯಂತೆ ಮನುಗಳಲ್ಲಿ ಹದಿನಾಲ್ಕನೆಯವನು ನಾಭಿರಾಜ. ಇವನ ಪುತ್ರ ಋಷಭದೇವ. ಯಶಸ್ವತೀ ಮತ್ತು ಸುನಂದಾ ಎಂಬ ಚೆಲುವೆಯರೇ ಇವನ ರಾಣಿಯರು. ಋಷಭನಾಥನು ಯಶಸ್ವತಿಯಲ್ಲಿ ಭರತನೇ ಮೊದಲಾಗಿ ನೂರ ಒಂದು ಮಕ್ಕಳನ್ನೂ, ಸುನಂದೆಯಲ್ಲಿ ಬಾಹುಬಲಿ ಮತ್ತು ಸುಂದರಿ ಎಂಬ ಎರಡು ಮಕ್ಕಳನ್ನು ಪಡೆದನು. ಯಶಸ್ವತೀ ರಾಣಿಯಲ್ಲಿ ಹುಟ್ಟಿದ ಹಿರಿಯ ಮಗನೇ ಪ್ರಸಿದ್ಧನಾದ ಭರತ ಚಕ್ರವರ್ತಿ, ಅವನಿಂದ ಮೊತ್ತಮೊದಲು ಆಳ್ವಿಕೆಗೊಳಗಾದ ಈ ಭೂಖಂಡವು ಭರತಖಂಡ ಎಂಬ ಹೆಸರನ್ನು ಪಡೆದಿದೆ. ತಂದೆಯಾದ ಋಷಭನಾಥನು ಎಲ್ಲ ಮಕ್ಕಳಿಗೆ ಸಕಲವಿದ್ಯೆಗಳನ್ನು ಕಲಿಸಿ, ನಯ-ವಿನಯ ಸಂಪನ್ನರನ್ನಾಗಿ ಮಾಡಿದನು. ಭರತ-ಬಾಹುಬಲಿಗಳಿರ್ವರೂ ತಮ್ಮ ಬುದ್ಧಿ, ಬಲ, ಸೌಂದರ್ಯಕಾಯಗಳಿಂದ ಋಷಭನಾಥನಿಗೆ ಪ್ರೀತಿಪಾತ್ರರಾಗಿದ್ದರು. ಹಲವಾರು ವರ್ಷಗಳ ನಂತರ ಋಷಭನಾಥನಿಗೆ ಸಂಸಾರದಲ್ಲಿ ವೈರಾಗ್ಯ ಮೂಡಿತು. ರಾಜ್ಯವನ್ನು ಮಕ್ಕಳಿಗೆ ಹಂಚಿ ಜಿನದೀಕ್ಷೆ ತೆಗೆದುಕೊಂಡು ತಪೋರಾಜ್ಯವನ್ನು ಹೊಂದಿದನು. ಭರತನು ಅಯೋಧ್ಯೆಯನ್ನು ಆಳುತ್ತಿದ್ದಾಗ ಋಷಭನಾಥನಿಗೆ ಕೇವಲ ಜ್ಞಾನವಾಯಿತು. ಭರತನ ಆಯುಧ ಶಾಲೆಯಲ್ಲಿ ಚಕ್ರರತ್ನ ಉದ್ಭವಿಸಿತು. ಭರತ ಇದರಿಂದ ವಿಶ್ವವಿಜೇತನಾಗುವೆನೆಂದು ತಿಳಿದು, ಋಷಭನಾಥನನ್ನು ಮೊದಲು ಪೂಜಿಸಿ ಬಳಿಕ ಚಕ್ರರತ್ನವನ್ನೂ ಪೂಜಿಸಿ ಒಂದು ಶುಭದಿನದಂದು ದಿಗ್ವಿಜಯಕ್ಕೆ ಹೊರಟನು. ಭೂಮಂಡಲದ ಆರು ಖಂಡಗಳ

ಎಲ್ಲ ರಾಜರನ್ನೂ ಗೆದ್ದು ಬಂದನು. ತಾನು ಚಕ್ರವರ್ತಿ ಎಂದು ತಿಳಿದು ಅಯೋಧ್ಯೆಗೆ ಮರಳಿದನು. ಆದರೆ ಚಕ್ರರತ್ನ ಅಯೋಧ್ಯೆಯನ್ನು ಪ್ರವೇಶಿಸಲಿಲ್ಲ, ಇದಕ್ಕೆ ಕಾರಣವನ್ನು ಪುರೋಹಿತರನ್ನು ಕೇಳಲು, ನಿನಗೆ ತಲೆಬಾಗದಿರುವ ಇನ್ನೂ ನೂರುಮಂದಿ ಸೋದರರು ಇರುವರಲ್ಲಾ ಎಂದರು. ಭರತನು ಅವರಿಗೆ ದೂತರನ್ನಟ್ಟಿ ತನಗೆ ಶರಣಾಗಲು ಹೇಳಿದನು. ಆದರೆ ಯಾರೂ ಭರತನಿಗೆ ತಲೆಬಾಗದೆ, ತಂದೆಯ ಋಜುಮಾರ್ಗವೇ ನಮ್ಮದೆಂದು ಬಾಹುಬಲಿಯ ಹೊರತಾಗಿ ಎಲ್ಲ ಸೋದರರೂ ಋಷಭನಾಥನ ಬಳಿ ದಿಗಂಬರ ಮುನಿದೀಕ್ಷೆ ಕೈಗೊಂಡರು. ಆದರೆ, ಪೌದನಪುರವನ್ನಾಳುತ್ತಿದ್ದ ಬಾಹುಬಲಿ ಹೆಸರಿಗೆ ತಕ್ಕಂತೆ ಭುಜಬಲದಲ್ಲಿ ಅಸಮಾನಶೂರ, ಮಹಾಸ್ವಾಭಿಮಾನಿ, ತಂದೆ ಕೊಟ್ಟ ರಾಜ್ಯವನ್ನು ಅಣ್ಣನಿಗೊಪ್ಪಿಸೆನು, ತನ್ನನ್ನು ಎದುರಿಸಲು ಭರತನು ಯುದ್ಧಕ್ಕೆ ಸಿದ್ಧನಾಗಲಿ ಭರತನ ದೂತನಿಗೆ ಹೇಳಿ ಎಂದು ಹೇಳಿಕಳುಹಿಸುವನು. ಧೂತನು ಬಾಹುಬಲಿಯ ಮಾತುಗಳನ್ನು ಭರತನಿಗೆ ತಿಳಿಸುತ್ತಲೇ ಭರತನು ಯುದ್ಧ ಸಿದ್ಧತೆಯನ್ನು ಮಾಡಿದನು. ಅಷ್ಟರಲ್ಲಿ ಉಭಯಬಲಗಳ ಮಂತ್ರಿಗಳು ಒಂದೆಡೆ ಸೇರಿ—'ಈ ಮಹಾಬಲಿಗಳು ಚರಮಶರೀರಿಗಳು, ಯುದ್ಧದಲ್ಲಿ ಅನ್ಯಾಯವಾಗಿ ಅಪಾರಸೈನ್ಯವು ನಾಶಹೊಂದುವುದು ಸರಿಯಲ್ಲ ಅವರೇ ಪರಸ್ಪರ ಯುದ್ಧಮಾಡಿ ವಿಕ್ರಮವನ್ನು ಸಾಧಿಸಲಿ' ಎಂದು ವಿಚಾರಮಾಡಿ ಆ ಮಹಾಬಲಿಗಳ ಮುಂದೆ ಈ ವಿಚಾರವನ್ನು ಮುಂದಿಟ್ಟರು. ಭರತ–ಬಾಹುಬಲಿಗಳು ಅದನ್ನು ಮನ್ನಿಸಿ ಯುದ್ಧಕ್ಕೆ ಸಿದ್ಧರಾದರು. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳೆಲ್ಲದರಲ್ಲೂ ಬಾಹುಬಲಿಯೇ ಮೇಲುಗೈ ಸಾಧಿಸಿದನು. ಸೋತ ಭರತನು ಅವಮಾನದಿಂದ ಕೋಪಗೊಂಡು ಬಾಹುಬಲಿಯ ಮೇಲೆ ಚಕ್ರ ಪ್ರಯೋಗಮಾಡಿದನು. ಅದು ಚರಮಶರೀರಿಯಾದ ಬಾಹುಬಲಿಯ ಸುತ್ತ ಪ್ರದಕ್ಷಿಣೆ ಬಂದು ಭುಜದಬಳಿ ನಿಂತಿತು. ಆಗ ಉಭಯಸೈನ್ಯವು, ರಾಜಾಧಿರಾಜರೂ ಭರತನ ಈ ತುಚ್ಛಕಾರ್ಯವನ್ನು ಧಿಕ್ಕರಿಸಿದರು, ಬಾಹುಬಲಿಯನ್ನು ಕೊಂಡಾಡಿದರು. ಷಟ್ಖಂಡ ಭೂಮಂಡಲಕ್ಕೆ ತನಗೆ ಸೋತುನಿಂತ ಅಣ್ಣನ ಮುಖವನ್ನು ನೋಡಿ ತನ್ನಿಂದ ಅಣ್ಣನಿಗೆ ಅವಮಾನವಾಯಿತಲ್ಲಾ ಎಂದು ಬಾಹುಬಲಿಯು ಬಹಳವಾಗಿ ನೊಂದನು. ಈ ರಾಜ್ಯವ್ಯಾಮೋಹವೇ ಸೋದರರಾದ ನಮ್ಮ ನಡುವೆ ಪರಸ್ಪರ ಯುದ್ಧ, ಅವಮಾನವನ್ನು ಮಾಡಿಸಿದೆ. ಇಂತಹ ರಾಜ್ಯಸಿರಿಗೆ ಧಿಕ್ಕಾರವಿರಲಿ ಎಂದು ಸಮಸ್ತ ರಾಜ್ಯವನ್ನು ಅಣ್ಣನಿಗೊಪ್ಪಿಸಿ, ನಮಸ್ಕರಿಸಿ ತಾನು ತಪಸ್ಸಿಗೆ ಹೊರಟೆನು ಎಂದನು. ಇದನ್ನು ಆಲಿಸಿದ ಭರತೇಶನು ತನ್ನನ್ನು ತಾನೇ ನಿಂದಿಸಿ,

ಬಹುದೀನ ವಚನಗಳಿಂದ ತಮ್ಮನನ್ನು ಸಮಾಧಾನಪಡಿಸಲು ಯತ್ನಿಸಿದನು. ದೃಢವೈರಾಗ್ಯದ ಸಂಕಲ್ಪ ತಳೆದ ಬಾಹುಬಲಿ ವಿಚಲಿತನಾಗದೆ ವೃಷಭಸ್ವಾಮಿಯ ಬಳಿಬಂದು ಸಕಲಸಂಗವನ್ನೂ ತ್ಯಾಗಮಾಡಿ ದಿಗಂಬರದೀಕ್ಷೆ ತೆಗೆದುಕೊಂಡು ಉಪವಾಸ ವ್ರತದಿಂದ ತಪಸ್ಸಿಗೆ ನಿಂತನು. ವರ್ಷ ಪೂರ್ತಿಯಾದರೂ ಅವನಿಗೆ ಕೇವಲ ಜ್ಞಾನ ಉದಿಸಲಿಲ್ಲ, ಇದರಿಂದ ಚಿಂತಿತನಾದ ಭರತನು ಋಷಭನಾಥನ ಬಳಿ ಬಂದು ಬಾಹುಬಲಿಯ ತಪಸ್ಸನ್ನು ಕುರಿತು ಹೇಳುತ್ತಾ ಅವನಿಗೆ ಕೇವಲ ಜ್ಞಾನ ಉದಿಸಿಲ್ಲ ಏಕೆ ಎಂದು ಕೇಳಿದನು. ಋಷಭನಾಥ–ಬಾಹುಬಲಿಯ ಮನಸ್ಸಿನಲ್ಲಿ ತಾನು ಅಣ್ಣನ ನೆಲದಲ್ಲಿ ನಿಂತು ತಪಸ್ಸು ಮಾಡುತ್ತಿರುವೆನಲ್ಲಾ ಎಂಬ ಸೂಕ್ಷ್ಮ ಮಾನಕಷಾಯವು ಕಾಡುತ್ತಿದೆ ಎಂದು ತಿಳಿಸಿದನು. ಕೂಡಲೆ ಭರತನು ಬಾಹುಬಲಿಯ ಬಳಿ ಬಂದು 'ಸ್ವಾಮಿ ನೀನೇ ಗೆದ್ದ ಭೂಮಿಯನ್ನು ನನಗೆ ನೀಡಿರುವ ನೆಲ ಇದು ಈ ಚಿಂತೆ ಬಿಟ್ಟು ನಿನ್ನ ಆತ್ಮನಲ್ಲಿ ತನ್ಮಯನಾಗೆಂದು ಅವನ ಚರಣಗಳಿಗೆ ನಮಿಸಿದನು. ಆ ಕೂಡಲೆ ಮಾನಕಷಾಯವು ಬಾಹುಬಲಿಯ ಮನಸ್ಸಿನಿಂದ ದೂರವಾಗಲು ಕೇವಲ ಜ್ಞಾನ ಉಂಟಾಯಿತು. ಬಳಿಕ ವಿವಿಧ ದೇಶಗಳಲ್ಲಿ ವಿಹರಿಸುತ್ತಾ ಸನ್ಮಾರ್ಗೋಪದೇಶ ಮಾಡುತ್ತಾ ಆಯುಷ್ಯ ಅವಸಾನದ ಕಾಲದಲ್ಲಿ ಕೈಲಾಸಪರ್ವತಕ್ಕೆ ಬಂದು ಪರಮಧ್ಯಾನದಿಂದ ಶಾಶ್ವತ ಸುಖದ ಆವಾಸಸ್ಥಾನವಾದ ಮುಕ್ತಿಯನ್ನು ಪಡೆದನು.

ಷಟ್ಖಂಡವನ್ನು ಗೆದ್ದ ಭರತೇಶನ ಮೇಲೆ ವಿಜಯ ಸಾಧಿಸಿ ಷಟ್ಖಂಡ ಭೂಮಿಗೆ ಅಧಿಪತಿಯಾದರೂ ಅದನ್ನು ತ್ಯಾಗ ಮಾಡಿದಂತ ತ್ಯಾಗಮೂರ್ತಿ ಸ್ವರೂಪನಾದ ಬಾಹುಬಲಿಯ ಮೂರ್ತಿ ನಿರ್ಮಾಣದ ಘಟನೆಯೂ ಕುತೂಹಲ ಮೂಡಿಸುವ ವಿಷಯವಾಗಿದೆ. ಸುಮಾರು ಸಾವಿರ ವರ್ಷಗಳಷ್ಟು ಹಿಂದೆ ಕರ್ನಾಟಕವನ್ನು ಆಳಿದ ಪ್ರಸಿದ್ಧ ಗಂಗವಂಶದ ರಾಜ ರಾಚಮಲ್ಲನ ಮಂತ್ರಿ ಚಾಮುಂಡರಾಯ ನಾಗಿದ್ದನು. ಜಿನಭಕ್ತ, ವಿದ್ವಾಂಸ, ಶೂರ–ವೀರನೂ ಆಗಿದ್ದ ಅವನ ತಾಯಿ ಕಾಳಲಾದೇವಿ. ಇವಳು ಜಿನಧರ್ಮ ಪರಾಯಣೆ, ಜೈನ ಮುನಿಗಳಿಂದ ಭರತ ಚಕ್ರಿಯು ಪೌದನಪುರದಲ್ಲಿ ನಿರ್ಮಿಸಿದ್ದ ಭಗವಾನ್ ಬಾಹುಬಲಿಯ ಸುಂದರ ವಾದ ವಿಗ್ರಹದ ವಿಷಯವನ್ನು ಕೇಳಿದಳು. ಆ ವಿಗ್ರಹವನ್ನು ನೋಡಲೇ ಬೇಕೆಂಬ ಆಸಕ್ತಿ ಅವಳಲ್ಲಿ ಮೂಡಿ, ಅದರ ದರ್ಶನ ಆಗುವವರೆಗೆ ಆಹಾರ ಸೇವಿಸುವುದಿಲ್ಲ ಎಂದು ವ್ರತ ಕೈಗೊಂಡಳು. ಆಗ ಇದನ್ನು ತಿಳಿದ ಚಾಮುಂಡರಾಯ ತಾಯಿಯ ಆಶೆ ಈಡೇರಿಸಲೆಂದು ತಾಯಿಯನ್ನು ಕರೆದು ಕೊಂಡು ಪೌದನಪುರಕ್ಕೆ ಹೊರಟನು. ಬಹುದೂರ ಪ್ರಯಾಣಿಸುತ್ತಾ

ಬೆಳಗೊಳಕ್ಕೆ ಆಗಮಿಸಿ ಅಲ್ಲಿನ ಚಿಕ್ಕಬೆಟ್ಟದಲ್ಲಿ ರಾತ್ರಿ ತಂಗಿದರು. ಚಾಮುಂಡರಾಯ ಮಲಗಿರಲು ಬೆಳಗಿನ ಜಾವ ಸ್ವಪ್ನದಲ್ಲಿ ಒಬ್ಬಳು ದೇವತೆ ಕಾಣಿಸಿಕೊಂಡು—'ಪೌದನಪುರವು ಕಾಡಿನಿಂದ ಕ್ರೂರಪ್ರಾಣಿಗಳಿಂದ ಅಗಮ್ಯ ವಾಗಿದೆ. ಜಿನಭಕ್ತನಾದ ನಿನಗೆ ಬಾಹುಬಲಿಯ ದರ್ಶನ ಎದುರಿಗಿನ ದೊಡ್ಡ ಬೆಟ್ಟದಲ್ಲಿ ಆಗುವುದು, ನಾಳೆ ಚಿಕ್ಕಬೆಟ್ಟದಲ್ಲಿ ನಿಂತು ದೊಡ್ಡಬೆಟ್ಟದತ್ತ ಬಾಣ ಪ್ರಯೋಗ ಮಾಡು ಬಾಣ ಬೀಳುವ ನೆಲೆಯಲ್ಲಿ ಬಾಹುಬಲಿ ಸ್ವಾಮಿ ಇರುವನು' ಎಂದು ದೇವತೆ ಮಾಯವಾಯಿತು. ಬೆಳಗಾಗುತ್ತಲೇ ಚಾಮುಂಡರಾಯ ಬಹು ಭಕ್ತಿಯಿಂದ ಜಿನಪೂಜೆ ಮಾಡಿ ಸ್ವಪ್ನದಲ್ಲಿ ದೇವತೆ ಹೇಳಿದಂತೆ ಬಾಣ ಪ್ರಯೋಗ ಮಾಡಿದನು, ಬಾಣವು ದೊಡ್ಡಬೆಟ್ಟದ ತುದಿಯ ಬಂಡೆಗೆ ನಾಟಿತು. ಉತ್ತಮ ಶಿಲ್ಪಿಗಳನ್ನು ಕರೆಸಿ ಸುಂದರಾಕಾರದ ಭಗವಾನ್ ಬಾಹುಬಲಿಯ ವಿಗ್ರಹವನ್ನು ಆ ಬಂಡೆಯಲ್ಲಿ ಕಡೆಸಿದನು. ಇಂತಹ ಮಹಾ ಮೂರ್ತಿಯನ್ನು ಕಡೆಸಿದ ಚಾಮುಂಡರಾಯನಿಗೆ ಸ್ವಾಭಾವಿಕವಾಗಿಯೇ ಗರ್ವ ಮೂಡಿತು. ಮಹಾಮೂರ್ತಿಗೆ ಮಸ್ತಕಾಭಿಷೇಕ ಮಾಡಲು ಎಲ್ಲ ರೀತಿಯ ಸಿದ್ಧತೆಗಳನ್ನು ನಡೆಸಿದನು, ಶುಭದಿನದಂದು ಮಸ್ತಕಾಭಿಷೇಕವನ್ನು ಮಾಡಿದನು. ಆದರೆ ಅಭಿಷೇಕಧಾರೆ ಮೂರ್ತಿಯ ಕೊರಳಿಂದ ಕೆಳಗಿಳಿಯಲಿಲ್ಲ, ಸೋತು ಸುಣ್ಣವಾದ ಚಾಮುಂಡರಾಯ ನಿಟ್ಟುಸಿರು ಬಿಡುತ್ತಿರುವಾಗ ಮುದುಕಿ ಯೊಬ್ಬಳು ಬಿಳಿಗುಳ್ಳಕಾಯಿಯಲ್ಲಿ ಹಾಲನ್ನು ಹಿಡಿದುಕೊಂಡು ಚಾಮುಂಡರಾಯನ ಬಳಿ ಬಂದು ತಾನು ಅಭಿಷೇಕ ಮಾಡುವುದಾಗಿ ಕೇಳಿ ಕೊಂಡಳು. ಚಾಮುಂಡರಾಯನೂ ಅಪ್ಪಣೆ ಕೊಟ್ಟನು. ಮುದುಕಿ ಮೂರ್ತಿಗೆ ಅಭಿಷೇಕ ಮಾಡುತ್ತಿದ್ದಂತೆ ಹಾಲಧಾರೆಯು ಮಸ್ತಕದಿಂದ ಪಾದಪರ್ಯಂತ ಹರಡಿ ಅಕ್ಷಯವಾಯಿತು. ಮುದುಕಿಯ ಮಹತ್ವಕ್ಕೆ ಚಾಮುಂಡರಾಯ ಬೆರಗಾಗಿ ಭಕ್ತಿಯಿಂದ ಅವಳ ಪಾದಕ್ಕೆರಗಿ ತನ್ನ ಗರ್ವವನ್ನು ಮಸ್ತಕದಿಂದ ಇಳಿಸಿದನು. ಹೀಗೆ ಬಿಳಿಯಗುಳ್ಳದಿಂದ ಅಭಿಷೇಕವು ಪೂರ್ಣವಾದ ಕಾರಣ ಆ ಊರು 'ಬಿಳಿಗುಳ'ವಾಯಿತು.

ಶ್ರವಣಬೆಳಗೊಳದ ಮೂರ್ತಿ ಸುಮಾರು ೫೭ ಅಡಿ ಎತ್ತರವುಳ್ಳದ್ದು. ಅಂತಹ ಮೂರ್ತಿಗೆ ದಿನವೂ ಅಭಿಷೇಕ ಮಾಡಲು ಸಾಧ್ಯವಾಗುವುದಿಲ್ಲ. ಮಂದಿರ ಗಳಲ್ಲಿರುವ ಮೂರ್ತಿಗಳಿಗೆ ಸಾಮಾನ್ಯವಾಗಿ ದಿನವೂ ಅಭಿಷೇಕ ಮಾಡಲಾಗು ತ್ತದೆ. ಆದರೆ ಬೃಹದಾಕಾರದ ಮೂರ್ತಿಗೆ ಅಭಿಷೇಕ ಮಾಡುವುದು ಕಷ್ಟದ ಕಾರ್ಯ ಹಾಗೂ ಅಪಾರ ವೆಚ್ಚವೂ ಮಾಡಬೇಕಾಗಿರುವುದರಿಂದಲೂ ಅದು

ಅಸಾಧ್ಯವಾದ ಕೆಲಸ. ಈ ಕಾರಣಕ್ಕಾಗಿ ಮಹಾಮೂರ್ತಿಗಳಿಗೆ ಪ್ರತಿದಿನ ಪಾದಪೂಜೆಯನ್ನು ಮಾಡಲಾಗುತ್ತದೆ. ಇದರಿಂದ ದೈನಿಕಪೂಜೆ ನಿರಂತರ ನಡೆಯುವುದು. ಬೃಹದಾಕಾರದ ಮೂರ್ತಿಯ ಅಭಿಷೇಕವನ್ನು ಯಾವುದಾದರೂ ವರ್ಷಗಳ ಮಿತಿಯನ್ನು ಹಾಕಿ ಆಯಾ ನಿಯಮಿತ ವರ್ಷಗಳಲ್ಲಿ ಮಾತ್ರ ಮಾಡಲಾಗುತ್ತದೆ. ಅದರಂತೆ ಬೆಳಗೊಳದ ಮಹಾಮೂರ್ತಿಗೆ ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ಮಾಡಲಾಗುತ್ತದೆ. ಮಸ್ತಕಾಭಿಷೇಕ ಎಂದರೆ ದೇವಮೂರ್ತಿಗೆ ತಲೆಯಿಂದ ಪಾದದವರೆಗೆ ಮಂಗಳದ್ರವ್ಯಗಳಿಂದ ಮಾಡುವ ಸ್ನಾನಕ್ರಿಯೆಯಾಗಿದೆ. ಇಂತಹ ಸ್ನಾನಕ್ರಿಯೆ ಅಥವಾ ಅಭಿಷೇಕವನ್ನು ಮಹಾಮೂರ್ತಿಗಳಿಗೆ ಸರಳವಾಗಿ ಸುಲಲಿತವಾಗಿ ಮಾಡುವುದು ಅಸಾಧ್ಯ. ಮಹಾಮೂರ್ತಿಯ ಅಭಿಷೇಕಕ್ಕಾಗಿ ಅಪಾರಧನ, ವಸ್ತುಗಳು ಅವಶ್ಯವಾಗಿರುತ್ತದೆ. ಆದ್ದರಿಂದ ಅವುಗಳ ಸಂಗ್ರಹಕ್ಕಾಗಿ ಸಾಕಷ್ಟು ಕಾಲಾವಕಾಶವೂ ಬೇಕಾಗುವುದು. ಅದರಂತೆ ಹನ್ನೆರಡು ವರ್ಷಗಳಿಗೊಮ್ಮೆ ಶ್ರವಣಬೆಳಗೊಳದ ಗೋಮಟೇಶ್ವರ ಭಗವಾನ್ ಬಾಹುಬಲಿಯ ಮೂರ್ತಿಗೆ ಮಹಾಮಸ್ತಕಾಭಿಷೇಕ ಮಾಡುವ ಪದ್ಧತಿ ನಡೆದುಬಂದಿದೆ. ಹೆಚ್ಚಿನ ಪ್ರಮಾಣದ ಧನ, ವಸ್ತು, ಜನಗಳೂ ಕೂಡಿ ಮಾಡತಕ್ಕಂತಹ ಮಹಾ-ಅಭಿಷೇಕವೇ 'ಮಹಾಮಸ್ತಕಾಭಿಷೇಕ'ವಾಗಿದೆ. ಈ ಪದದ ಬಳಕೆಯೂ ಬೆಳಗೊಳದ ಬಾಹುಬಲಿಯ ಮೂರ್ತಿಗೆ ಮಾಡಲಾಗುವ ಮಹಾ-ಅಭಿಷೇಕದಿಂದಲೇ ಬಂದಿರುವುದಾಗಿದೆ.

ಬಾಹುಬಲಿಯ ಮೂರ್ತಿಗೆ 'ಗೊಮ್ಮಟೇಶ್ವರ' ಎಂಬ ಹೆಸರೂ ಇದೆ. ಇದು ಚಾಮುಂಡರಾಯನ ಕಾರಣವಾಗಿ ಬಂದ ಹೆಸರು. ಚಾಮುಂಡರಾಯನ ಮತ್ತೊಂದು ಹೆಸರು 'ಗೊಮ್ಮಟ' ಎಂದು. ಗೊಮ್ಮಟ ಎಂದರೆ ಸುಂದರ, ಮಂಗಳ ಎಂಬ ಹಲವಾರು ಅರ್ಥಗಳಿವೆ. ಅದರಂತೆ ಚಾಮುಂಡರಾಯನ ಸುಂದರ, ಆಕಾರ, ರೂಪಗಳನ್ನು ಹೊಂದಿದ್ದ ಕಾರಣ ಅವನನ್ನು ಗೊಮ್ಮಟ ಎಂದೇ ಕರೆಯಲಾಗುತ್ತಿತ್ತು. ಹಾಗೇ ಗೊಮ್ಮಟ ಅರ್ಥಾತ್ ಚಾಮುಂಡರಾಯ ನಿರ್ಮಿಸಿದ ದೇವನೇ, ಈಶ್ವರನೇ, ಗೊಮ್ಮಟದೇವ, ಗೋಮ್ಮಟೇಶ್ವರಮೂರ್ತಿ ಆಗಿದೆ.

ಎನ್. ಸುರೇಶ್‌ಕುಮಾರ್



ದಿ|| ಮರಿಗೌಡರು

ನಿಸರ್ಗಾರಾಧಕ ಮರಿಗೌಡರು

ಜನನ ೧೯೧೫– ಮರಣ ೧೯೭೪

ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಗುರುತಿನ ವ್ಯಕ್ತಿಯೊಬ್ಬ ನನ್ನ ಬಳಿ ಕುಳಿತನು. ಅವನು ಹಳ್ಳಿಯವ. ಮಧ್ಯಮವರ್ಗದವನು ಸಾಧಾರಣವಾಗಿ ಓದು ಬರಹ ಬಲ್ಲವನು. 'ಎಲ್ಲಿಗೆ ಹೋಗಿದ್ದೆ ?' ಎಂದು ಕೇಳಿದೆ. 'ನನ್ನ ಳಿಯನಿಗೊಂದು ನೌಕರಿ ಹುಡುಕುತ್ತಿದ್ದೇನೆ?' 'ಏನು ಓದಿದ್ದಾನೆ? ಮನೆಯಲ್ಲಿ ಆಸ್ತಿಪಾಸ್ತಿ ಇಲ್ಲವೆ ?' 'ಎಸ್.ಎಸ್.ಎಲ್.ಸಿ. ಓದಿದ್ದಾನೆ. ಅವನ ಪಾಲಿಗೆ ಐದಾರೆಕರೆ ಜಮೀನೂ ಬಂದಿದೆ. ಎಷ್ಟೇ ಜಮೀನಿದ್ದರೂ ಬೆಳಗಿನಿಂದ ಸಂಜೆಯತನಕ ಗಂಡ ಹೆಂಡಿರು ಮೈಮುರಿಯ ದುಡಿಯಬೇಕು. ದುಡಿದರೂ ಹೊಟ್ಟೆ ಬಟ್ಟೆಗೆ ನೇರ. ಮಳೆ ಇಲ್ಲದಿದ್ದರಂತು ಸಾಲ ಸೋಲ ಮಾಡಬೇಕು. ನೌಕರಿ ಸುಖ ಇಲ್ಲ. ಏನೋ ಒಂದು ಅಟೆಂಡರ್ ಕೆಲಸ ಸಿಕ್ಕಿದರೆ ಸಾಕು. ಮಳೆ ಇಲ್ಲದ ಬೆಳೆ ಅದು. ನನ್ನ ಮಗಳು ಸುಖವಾಗಿರ್ತಾಳೆ' ಎಂದವನು ಸರಸರನೆ ನುಡಿದನು.

ಹಳ್ಳಿಯಲ್ಲಿ ಶ್ರೀಮಂತನೆನಿಸಿಕೊಂಡವನು ಸಹ ಒಬ್ಬ ಅಧಿಕಾರಿಯ ಸುಖ ಸಂತೃಪ್ತಿಗಳನ್ನನುಭವಿಸಲಾರ. ಅಧಿಕಾರಿಗೆ ಕುಳಿತರೂ ಸಂಬಳ, ನಿಂತರೂ ಸಂಬಳ, ಮಲಗಿದರೂ ಸಂಬಳ, ನಿವೃತ್ತಾನಂತರ ಪಿಂಚಣಿ. ಅವನಿಗಿರುವ ಸೌಲಭ್ಯ ಸೌಕರ್ಯಗಳು ಬೇರೆಯವರಿಗಿಲ್ಲ. ಅವನಿಗಿರುವ ಮರ್ಯಾದೆ ಇತರರಿಗೆ ಅಲಭ್ಯ. ಆದ್ದರಿಂದಲೇ ಹೊಲ ಮನೆ ಮಾರಿ ನೌಕರಿ ಸಂಪಾದಿಸಲು ಜನ ಹಾತೊರೆಯುತ್ತಾರೆ. ಇಂಥ ಅಸಮತೆಯಿಂದ ದೇಶಕ್ಕೆ ಅಭದ್ರತೆ, ಸಮಾಜದಲ್ಲಿ ಅಶಾಂತಿ.

ಅಧಿಕಾರ ಸ್ಥಾನ ಕೆಟ್ಟದ್ದಲ್ಲ. ಅದು ಸಮಾಜದ ಅನಿವಾರ್ಯಾಂಗ. ಸಮಾಜದ ಏಳ್ಗೆಗಾಗಿ, ಸಾಮಾನ್ಯ ಜನರ ಹಿತಕ್ಕಾಗಿ, ಕಸಬುದಾರರ ಮೇಲ್ಮೆಗಾಗಿ ಹಗಲಿರುಳು ಚಿಂತಿಸುತ್ತ, ದುಡಿಯುವ, ಸೃಜನಶೀಲ ಸಾಮರ್ಥ್ಯವುಳ್ಳ ಅಧಿಕಾರಿ ಬೇಕೇ ಬೇಕು. ವಿದ್ಯೆಯಲ್ಲಿ ಹಿಂದಿರುವ ಮಕ್ಕಳಿಗಾಗಿ ಪರಿತಪಿಸುವ, ದಾರಿ ತಪ್ಪಿದ ಯುವಕರಿಗಾಗಿ ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸುವ ಪ್ರಾಧ್ಯಾಪಕ ಬೇಕು. ರೈತರ ಕ್ಷೇಮಕ್ಕಾಗಿ ಸದಾ ಕಾರ್ಯನಿರತರಾಗಿರುವ ಇಂಜಿನಿಯರ್ ಹಾಗೂ ಕೃಷಿ ತಜ್ಞರು ಬೇಕೇ ಬೇಕು. ಕಿತಾಪತಿ ಕಿತ್ತಾಟ ಕಚ್ಚಾಟ ದುರಹಂಕಾರಗಳನ್ನು ವಿಸರ್ಜಿಸಿ ದೇಶದ ಕ್ಷೇಮಕ್ಕಾಗಿ ಹಗಲಿರುಳೂ

ದುಡಿಯುವ ಸರ್ವಸಮತಾ ಭಾವನೆಯು ಮಂತ್ರಿಯೂ ಬೇಕು. ಆದರೆ ಇಂದಿನ ದಿನಗಳಲ್ಲಿ ಎಲ್ಲವೂ ವಿಪರೀತವಾಗಿದೆ, ವಿಪರ್ಯಾಸವಾಗಿದೆ. ಪ್ರಾಮಾಣಿಕವಾಗಿ ದುಡಿಯುವ ಅಧಿಕಾರಿಗಳು ಮಂತ್ರಿಗಳು ಇಲ್ಲವಾಗಿ ಎಲ್ಲೆಲ್ಲಿಯೂ ಸಂಶಯದ ಭಯದ ಅಂಧಕಾರದ ವಾತಾವರಣ ಸೃಷ್ಟಿಯಾಗಿದೆ.

ಇಂಥ ಉಸಿರು ಕಟ್ಟಿಸುವ ವಾತಾವರಣದಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಅಧಿಕಾರಿ ರೈತರಿಗೆ ದಾರಿದೀಪವಾಗಿ, ಶ್ರೀಸಾಮಾನ್ಯರಿಗೆ ಆದರ್ಶಜ್ಯೋತಿಯಾಗಿ ಕಾಣಿಸಿಕೊಳ್ಳುತ್ತಾನೆ. ಅಂಥ ವಿರಳ ವ್ಯಕ್ತಿಗಳಲ್ಲಿ ಮಾರಗೊಂಡನಹಳ್ಳಿ ಹೊಂಬೇಗೌಡರ ಮಗ ಮರೀಗೌಡರೊಬ್ಬರು. ಅವರು ಬಿಎಸ್‌ಸಿ ಪದವೀಧರರಾದ ಕೂಡಲೇ ಮನಸ್ಸು ಮಾಡಿದ್ದರೆ ಪ್ರೊಬೆಷನರಿ ಹುದ್ದೆಯನ್ನು ಗಿಟ್ಟಿಸಿಕೊಂಡು ದೊಡ್ಡ ಅಧಿಕಾರಿಯಾಗಿ ಮೆರೆಯಬಹುದಿತ್ತು. ವಿಜ್ಞಾನದಲ್ಲಿ ವಿಶೇಷ ಪರಿಣತಿಯನ್ನು ಪಡೆದು, ತಾನು ಗಳಿಸಿದ ಅನುಭವವನ್ನು ಹಾಗೂ ವಿದ್ಯೆಯನ್ನು ಸಾಮಾನ್ಯ ಜನರ ಯೋಗಕ್ಷೇಮಕ್ಕಾಗಿ, ರೈತರ ಏಳ್ಗೆಗಾಗಿ ಬಳಸಬೇಕೆಂಬುದೇ ಅವರ ಮಹತ್ವಾಕಾಂಕ್ಷೆಯಾಗುತ್ತದೆ, ಜೀವನದ ಏಕೈಕ ಗುರಿಯಾಗುತ್ತದೆ. ಅರ್ಧಂಬರ್ಧ ಜ್ಞಾನ ಸಂಪಾದನೆಯಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಆದ್ದರಿಂದಲೇ ಅವರು ದೇಶ ವಿದೇಶಗಳಲ್ಲಿ ಜ್ಞಾನ ಭಿಕ್ಷುವಿನಂತೆ ಸಾಧನಾನಿರತರಾಗಿ, ಪರ್ಯಟನ ಮಾಡಿ ಮಾಸ್ಟರ್ ಪದವಿ ಮತ್ತು ಪಿಎಚ್‌ಡಿ ಪದವಿಗಳನ್ನು ಸಂಪಾದಿಸುತ್ತಾರೆ. ಅಪಾರ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಉನ್ನತ ಪದವಿಗಳನ್ನು ಪಡೆದ ಅವರು ರಾಷ್ಟ್ರದ ಯಾವ ವಿಶ್ವವಿದ್ಯಾನಿಲಯದಲ್ಲಾದರೂ ಪ್ರಾಧ್ಯಾಪಕರಾಗಬಹುದಿತ್ತು. ಅಂಥ ಆಶೆ ಆಮಿಷಗಳನ್ನು ಗೆದ್ದು, ರೈತರ ಅಭ್ಯುದಯವೇ ರಾಷ್ಟ್ರದ ಅಭ್ಯುದಯವೆಂದು ನಂಬಿ, ಆಗಿನ ಕಾಲಕ್ಕೆ ತೋಟಗಾರಿಕೆ ಇಲಾಖೆ ಸಣ್ಣದಾದರೂ ತಮ್ಮ ಸೇವಾಕ್ಷೇತ್ರಕ್ಕಾಗಿ ಅದನ್ನೇ ಆರಿಸಿಕೊಳ್ಳುತ್ತಾರೆ. ತೋಟಗಾರಿಕಾ ಪ್ರಜ್ಞೆಯ ಪ್ರಸಾರದಿಂದ ರೈತಾಪಿ ವರ್ಗದ ಆರ್ಥಿಕ ಪರಿಸ್ಥಿತಿ ಸುಧಾರಣೆಗೊಳ್ಳುವುದಲ್ಲದೆ, ದೇಶಕ್ಕೆ ಪೌಷ್ಟಿಕ ಆಹಾರವೊದಗುತ್ತದೆಂದವರು ಬಲ್ಲರು.

ಉದ್ಯಾನ ಇಲಾಖೆಯನ್ನು ಪ್ರವೇಶಿಸಿದೊಡನೆಯೇ ಅವರು ಪಾದ್ರಿಯ ಶ್ರದ್ಧೆಯಿಂದ ದೇಶದ ಮೂಲೆ ಮೂಲೆಯಲ್ಲಿ ಸುತ್ತಾಡಿ, ರೈತರನ್ನು ಭೇಟಿ ಮಾಡಿ, ತರಕಾರಿ ಹಣ್ಣು ಹಂಪಲು ಬೆಳೆಗಳ ಮಹತ್ವವನ್ನೂ ಪ್ರಯೋಜನವನ್ನೂ ವಿವರಿಸುತ್ತಾರೆ. ರೈತರಿಗೂ ತಮಗೂ ಅಂತರವಿರಬಾರದೆಂಬ ದೃಷ್ಟಿಯಿಂದ ಅವರು ಸರಳ ಜೀವನವನ್ನು ನಡಸುತ್ತಾರೆ. ಮಾತು, ಉಡುಪು ಮತ್ತು ನಡೆವಳಿ

ಗಳ ಸರಳತೆಯಿಂದಾಗಿ ರೈತರು ಅವರನ್ನು ಪ್ರೀತಿಸುತ್ತಾರೆ, ನಂಬುತ್ತಾರೆ, ಅವರ ಮಾತನ್ನು ಕೇಳುತ್ತಾರೆ. ರೈತರ ಕೊಳೆಬಟ್ಟೆಯಾಗಲಿ ಬೆವರಾಗಲಿ ಗೌಡರಿಗೆ ಅಸಹ್ಯವಾಗಿ ಕಾಣುವುದಿಲ್ಲ. ರೈತರ ಕುರಿಕೊಪ್ಪಲುಗಳಲ್ಲಿ, ದನದ ಹಟ್ಟಿಗಳಲ್ಲಿ ಕೋಳಿ ಕೊಟ್ಟಿಗೆಗಳಲ್ಲಿ ಅವರು ಸಲೀಸಾಗಿ ಓಡಾಡುತ್ತಾರೆ. ರೈತರು ಊಟಕ್ಕೆ ಕರೆದಾಗ ಮುಖ ಸಿಂಡರಿಸಿಕೊಳ್ಳದೆ ಅವರು ಕೊಟ್ಟಿದ್ದನ್ನು ಗೌಡರು ಬೇಸರಿಕೆಯಿಲ್ಲದೆ ಸ್ವೀಕರಿಸುತ್ತಾರೆ.

ಸರ್ಕಾರದ ಕೇಂದ್ರೀಕರಣ ನೀತಿಯಿಂದಾಗಿ, ಅಧಿಕಾರಿ ಪ್ರಭುತ್ವದ ದರ್ಪದಿಂದಾಗಿ, ಇಲಾಖೆಯ ಮುಖ್ಯಾಧಿಕಾರಿಗಳಿಗೆ ಸಾಕಷ್ಟು ಅಧಿಕಾರ ಇಲ್ಲವಾಗಿ ಅನೇಕ ಅಭಿವೃದ್ಧಿ ಯೋಜನೆಗಳು ಕುಂಠಿತಗೊಳ್ಳುತ್ತವೆಂಬ ಡಾ. ಮರೀಗೌಡರ ಅಭಿಪ್ರಾಯ ನ್ಯಾಯವಾದದ್ದೇ. ಯಾವಾಗ ಬಿತ್ತಬೇಕು, ಯಾವಾಗ ಕಳೆ ತೆಗೆಯಬೇಕು, ಯಾವಾಗ ನೀರು ಹಾಕಬೇಕು, ಯಾವಾಗ ಗೊಬ್ಬರ ಹಾಕಬೇಕು ಎಂಬ ಸಂಗತಿ ಮರಿಗೌಡರಿಗೆ ಗೊತ್ತೇ ಹೊರತು, ವಿಧಾನಸೌಧದ ಪಂಖದಡಿ ಕುಳಿತ, ರಾಗಿಮರವೊ ಪೈರೊ ಎಂಬ ಸಂಗತಿಯನ್ನರಿಯದ ಕಡತದ ಹುಳು ಕಿಟ್ಟೂರಾಯನಿಗಲ್ಲ. ನಿಸರ್ಗ ಕ್ರಿಯೆಗಳು ಸರ್ಕಾರಿ ನಿಯಮಗಳನ್ನನುಸರಿಸುವುದಿಲ್ಲ, ವಿಧಾನಸೌಧದ ಅಧಿಕಾರಿಗಳ ಮರ್ಜಿಗೆ ತಕ್ಕಂತೆ ಹೆಜ್ಜೆ ಹಾಕುವುದಿಲ್ಲ. ಅವುಗಳಿಗೆ ತಕ್ಕಂತೆ ಕೃಷಿಕ ತನ್ನ ಬದುಕನ್ನು ಹಸನಗೊಳಿಸಿಕೊಳ್ಳಬೇಕಾಗುತ್ತದೆ. ಹಸನಗೊಳಿಸಿಕೊಳ್ಳಲಿಲ್ಲ, ಕೇಡು ತಪ್ಪದು. ತೆಂಗಿನ ಮರಗಳಿಗೆ ರೋಗ ಬಂದಾಗ ಕೂಡಲೇ ಇಲಾಜು ಮಾಡಬೇಕು. ವಿಧಾನಸೌಧದಲ್ಲಿ ತಿಂಗಳುಗಟ್ಟಳೆ ವರ್ಷಗಟ್ಟಳೆ ತೂಕಡಿಸುವ, ಮೇಜಿನಿಂದ ಮೇಜಿಗೆ ಹೋದಾಗ ವಿಶ್ರಾಂತಿ ಪಡೆಯುವ ಕಡತಗಳಿಗಾಗಿ ಉದ್ಯಾನಾಧಿಕಾರಿ ಕಾದು ಕುಳಿತರೆ, ತೆಂಗು ನಿರ್ನಾಮವಾಗುತ್ತದೆ. ಕೆಂಪು ಪಟ್ಟಿಯ ಕಡತಗಳಾಗಲಿ, ಅವುಗಳೊಡನೆ ವ್ಯವಹರಿಸುವ ಪ್ರಭುತ್ವ ದರ್ಪವಾಗಲಿ ಮರಿಗೌಡರಿಗೆ ಹಿಡಿಸುವುದಿಲ್ಲ. ಈ ಕಾರಣಕ್ಕಾಗಿ ಅವರು ವಿಧಾನಸೌಧದ ಕೆಂಪುಪಟ್ಟಿಯ ಅಧಿಕಾರಿಗಳೊಡನೆ ಅವ್ಯಾಹತವಾಗಿ ಹೋರಾಟ ನಡೆಸಬೇಕಾಗುತ್ತದೆ. ಕೊನೆಕೊನೆಗೆ ಯಾರಿಗೂ ಸೊಪ್ಪು ಹಾಕದೆ, ಯಾರಿಗೂ ಮಣಿಯದೆ ತೋಟತುಡಿಕೆ ರಕ್ಷಣೆಯ ದೃಷ್ಟಿಯಿಂದ ರೈತಕ್ಷೇಮ ಕಾತರತೆಯಿಂದ ಅವರು ಸರ್ಕಾರಿ ನಿಯಮಗಳಿಗೆ ಅತೀತರಾಗಿ ವರ್ತಿಸುತ್ತಾರೆ. ಪ್ರಭುತ್ವದರ್ಪಕ್ಕೆ ಸವಾಲಾಗಿ ಪರಿಣಮಿಸುತ್ತಾರೆ. ಕೊನೆಯತನಕ ಸ್ವಾಭಿಮಾನವನ್ನು ಉಳಿಸಿಕೊಳ್ಳುತ್ತಾರೆ. ಅದರಿಂದಾಗಿಯೇ ಮರಿಗೌಡರು ನಾಡಿನ ಪ್ರತಿಯೊಬ್ಬ ರೈತನಲ್ಲಿಯೂ ತೋಟಗಾರಿಕೆ ಪ್ರಜ್ಞೆಯನ್ನು ಮೂಡಿಸುವಲ್ಲಿ ಸಫಲರಾದದ್ದು.

ರೈತನಿಗೆ ಮುಫತ್ತಾಗಿ ಸಸಿಗಳನ್ನು ಕೊಟ್ಟರೆ ಸರ್ಕಾರಕ್ಕೆ ನಷ್ಟವಾಗದು, ಒಂದು ಹತ್ತಾಗಿ, ಹತ್ತು ನೂರಾಗಿ ರಾಷ್ಟ್ರಕ್ಕೆ ಅಪಾರ ಲಾಭಪ್ರದವಾಗುತ್ತದೆಂಬ ನೂತನ ಆರ್ಥಿಕ ನೀತಿಯನ್ನು ರೂಪಿಸಿ, ಫಲಕ್ರಾಂತಿಗೆ ನಾಂದಿ ಹಾಡಿದವರು ಅವರು. ಸಸಿ ಒಣಗಿದಾಗ ರೈತ ಕಣ್ಣೀರಿಟ್ಟಾನು ಎಂಬ ನಿಜವನ್ನು ಜಗತ್ತಿಗೆ ತೋರಿಸಿಕೊಟ್ಟವರೇ ಈ ರೈತಬಂಧುಗಳು.

ಇಂಡಿಯಾ ದೇಶದ ತೋಟಗಾರಿಕೆಯ ಇತಿಹಾಸದಲ್ಲಿ ಅನೇಕ ಅಪೂರ್ವ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಜಾರಿಗೊಳಿಸಿ, ಹಲವು ಮೊತ್ತ ಮೊದಲುಗಳನ್ನು ಸ್ಥಾಪಿಸಿದ ಕೀರ್ತಿ ಮರಿಗೌಡರಿಗೆ ಸಲ್ಲಬೇಕಾಗಿದೆ. ಒಣ ಬೇಸಾಯ ಪದ್ಧತಿಯನ್ನು ಜಾರಿಗೆ ತಂದವರು ಅವರು; ಸಸಿ ಬೆಳೆಗಾರರನ್ನು ಸಂಘಟಿಸಿದವರು ಅವರು; ತರಕಾರಿ ಹಣ್ಣು ಹಂಪಲುಗಳ ಮಾರಾಟ ಯೋಜನೆಯನ್ನು ರೂಪಿಸಿ, ಆ ಯೋಜನೆಯ ಫಲ ತೋಟಗಾರರಿಗೆ ದೊರೆಯುವಂತೆ ಏರ್ಪಾಡು ಮಾಡಿದವರು ಅವರು; ತೋಟಗಾರಿಕೆ ಪತ್ರಿಕೆಯನ್ನು ಪ್ರಕಟಿಸಿ, ಅದರಲ್ಲಿ ತಾವೂ ಲೇಖನಗಳನ್ನು ಬರೆದು, ತೋಟಗಾರಿಕೆ ಜ್ಞಾನ ರೈತ ಜೀವನದ ನಾಡಿನಾಡಿಗಳಲ್ಲಿ ಹರಿಯುವಂತೆ ಕ್ರಮ ಕೈಕೊಂಡವರು ಅವರು. ಅವರು ಕೆಲಸಗಾರರೇ ಹೊರತು ಮಾತುಗಾರರಲ್ಲ. ತಾರತಮ್ಯ ಜ್ಞಾನವಿಲ್ಲದೆ ಜನರನ್ನು ನಂಬಿಬಿಡುತ್ತಿದ್ದರೆನ್ನುವ ಆರೋಪವೂ ಅವರ ಮೇಲಿದೆ. ಆಡಳಿತದಲ್ಲಿಯೂ ಬಿಗಿಸಾಲದೆಂಬ ಮಾತೂ ಇದೆ. ಆದರೆ ಅವರ ದೇಶ ಹಿತಸಾಧನಾಕಾಂಕ್ಷೆ, ರೈತ ಪ್ರೇಮ, ಔದಾರ್ಯ, ನಿಷ್ಕಪಟ ಮನೋಧರ್ಮ, ಪರೋಪಕಾರ ಬುದ್ಧಿ, ನಿಸರ್ಗಸ್ನೇಹ, ಕರ್ತವ್ಯ ಪರಾಯಣತೆ, ಮಾನವೀಯತೆ-ಇವು ಅವರ ಎಲ್ಲ ಕೊರತೆಗಳನ್ನು ಮುಚ್ಚಿಬಿಡುತ್ತವೆ. ಅವರು ಕೆಂಪು ಪಟ್ಟಿಯ ವಿರೋಧಿ; ನಿಯಮ ಸರಪಳಿಯ ಶತ್ರು. ಅವರ ಪಾಲಿಗೆ ರೈತರೇ ದೇವರು, ನಿಸರ್ಗವೇ ದೇವಾಲಯ, ದುಡಿಮೆಯೇ ಪೂಜೆ. ಅವರ ಈ ಧೋರಣೆಗೆ ಕುವೆಂಪು ಅವರ ಪ್ರಭಾವವೇ ಮೂಲಕಾರಣ. ಬಾಲ್ಯದಲ್ಲಿಯೇ ತಮ್ಮ ಸರ್ವಗುರುವೆಂದು ಕಾಯಾ ವಾಚಾ ಮನಸಾ ಸ್ವೀಕರಿಸಿದ ಕುವೆಂಪು ಅವರಲ್ಲಿ ಅನನ್ಯ ಭಕ್ತಿ. ಕುವೆಂಪು ಮೂರಕ್ಷರವೇ ಅವರ ತಾರಕ ಮಂತ್ರ.

ಯಾರಿಂದಾದರೂ ಕೃಷಿ ಕ್ಷೇತ್ರಕ್ಕೆ ಅಥವಾ ಉದ್ಯಾನ ಕ್ಷೇತ್ರಕ್ಕೆ, ತನ್ಮೂಲಕ ಕೃಷಿಕರಿಗೆ ಒಳ್ಳೆಯದಾಗುತ್ತದೆಂದಾದರೆ, ಗೌಡರು ತಮ್ಮ ಸರ್ವಶಕ್ತಿಯನ್ನು ವಿನಿಯೋಗಿಸಿ ಅವರಿಗೆ ಸಹಾಯ ಮಾಡುತ್ತಾರೆ. ಅವನೊಬ್ಬ ತೋಟಗಾರಿಕೆ ಇಲಾಖೆಯ ಅಧಿಕಾರಿಯಿರಬಹುದು, ಸಸಿ ಬೆಳೆಗಾರನಿರಬಹುದು, ತರಕಾರಿ

ಅಥವಾ ಹಣ್ಣು ಹಂಪಲು ಮಾರಾಟಗಾರನಿರಬಹುದು, ಸಸ್ಯ ವಿಜ್ಞಾನಿಯಾಗಿರಬಹುದು, ಅವನನ್ನು ಬೆನ್ನುತಟ್ಟಿ, ಹುರಿದುಂಬಿಸಿ, ಸರ್ವಸಹಕಾರ ನೀಡುತ್ತಾರೆ. ಅಂಥವರಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಡಾ|| ಮನಮೋಹನ್ ಅವರೂ ಒಬ್ಬರು. ಡಾ|| ಮರಿಗೌಡರ ಪ್ರತಿಭೆ ಹಾರೈಸಿ ಹಾರೈಸಿ ಕಂಡುಕೊಂಡು ಮತ್ತೊಂದು ಪ್ರತಿಭೆ ಮನಮೋಹನ್. ಅವರ ಜೀವಾವಧಿಯಲ್ಲಿ ಮನಮೋಹನ್‌ರಷ್ಟು ಎತ್ತರಕ್ಕೆ ಬೆಳೆದವರು ಮತ್ತೊಬ್ಬರಿಲ್ಲ. ಆದ್ದರಿಂದ ಗೌಡರಿಗೆ ಅವರ ಬಗ್ಗೆ ಹೆಮ್ಮೆ. ಯಾವನಾದರೂ ರೈತ ತೋಟ ಮಾಡುತ್ತೇನೆಂದು ತಮ್ಮ ಹತ್ತಿರಕ್ಕೆ ಬಂದದ್ದಾದರೆ ಅವನನ್ನಪ್ಪಿಕೊಂಡು, ಅವನಿಗಾಗಿ ಏನು ಬೇಕಾದರೂ ಸಹಾಯ ಮಾಡಿಯಾರು. ಅವರೇ ಖುದ್ದಾಗಿ ರೈತನ ಜಮೀನಿಗೆ ಹೋಗಿ ಗಿಡ ನೆಡಿಸಿ ಬಂದಾರು.

ಮೈಯಲ್ಲಿ ತ್ರಾಣವಿರುವತನಕ ಮರಿಗೌಡರು ತಮ್ಮ ಸ್ವಧರ್ಮವನ್ನು ತ್ಯಜಿಸಿದವರಲ್ಲ. ರಾಜಕೀಯ ಕೈಸನ್ನೆಯ ಮೂಲಕ ಕರೆಯುತ್ತಿದ್ದರೂ ಅವರು ಆ ಕಡೆಗೆ ಮುಖ ಸಹ ತಿರುಗಿಸಲಿಲ್ಲ. ರೈತರ ತೋಟ ತುಡಿಕೆಗಳಿಗೆ ಹೋಗಿ ಅವರೊಡನೆ ಸಂಪರ್ಕ ಬೆಳೆಸುತ್ತಾರೆ; ಪ್ರಯೋಗಶಾಲೆಯಲ್ಲಿ ವಿಜ್ಞಾನಿಗಳೊಡನೆ ಬೆರೆತು ಹೊಸ ಹೊಸ ತಳಿಗಳ ಸೃಷ್ಟಿಯಲ್ಲಿ ನಿರತರಾಗುತ್ತಾರೆ. ಅವರ ಒಂದು ಗ್ರಂಥದ ಹೆಸರು ಸಸ್ಯಾರಾಧನೆ. ಅವರ ಗುಣಧರ್ಮವನ್ನು ಜೀವನ ಮರ್ಮವನ್ನು ಪ್ರತಿಬಿಂಬಿಸುವ ಹೆಸರದು. ಅಂಥ ಅಧಿಕಾರಿ—ವಿಜ್ಞಾನಿ ಭರತಖಂಡದಲ್ಲಿ ದುರ್ಲಭ.

ಮಹಾಪುರುಷರ ಮಹಿಮೆಯನ್ನು ಮರಣದಲ್ಲಿ ಮನಗಾಣಬಹುದು. ಅವರು ಬದುಕಿದ್ದಾಗ ಎಂತೋ ಮರಣಕಾಲದಲ್ಲಿಯೂ ಹಿರಿತನವನ್ನೆ ಮೆರೆಯುತ್ತಾರೆ. ಹೋರಾಟವೇ ಅವರ ಬದುಕಿನ ವ್ಯಾಪಾರವಾಗಿತ್ತಷ್ಟೆ. ನೀರ್ಮನೆಯಲ್ಲಿ ನಡೆದ ಸಣ್ಣ ಅಪಘಾತಕ್ಕಾಗಿ ಅವರು ರುಗ್ಣಶಯ್ಯೆಯಲ್ಲಿ ಮಲಗಿರುತ್ತ ಎರಡು ಮೂರು ವರ್ಷ ಮೃತ್ಯುವಿನೊಡನೆ ಹೋರಾಟ ನಡಸುತ್ತಾರೆ. ತಾವು ಯಾವಾಗಲೂ ಎಂಥ ಸಂದರ್ಭದಲ್ಲಿಯೂ—ಸತ್ತಮೇಲೂ ಸಹ—ಇತರರಿಗೆ ಹೊರೆಯಾಗಬಾರದು, ನೋವಾಗಬಾರದೆಂಬುದೇ ಅವರ ಸಂಕಲ್ಪವಾಗಿತ್ತು. ತಮ್ಮ ಸಂಕಲ್ಪವನ್ನವರು ೧೯೮೪–೮೫ರಲ್ಲಿಯೇ ಉಯಿಲಿನ ರೂಪದಲ್ಲಿ ಬರೆದು ಲಕೋಟೆಯೊಂದರಲ್ಲಿಟ್ಟು ತಾವು ಸಾಯುತ್ತಿದ್ದಂತೆಯೇ ಅದನ್ನು ತೆರೆದು ನೋಡಿ, ಅಲ್ಲಿ ಹೇಳಿರುವಂತೆಯೇ ತಮ್ಮ ಅಪರ ಕರ್ಮಗಳನ್ನು ನೆರವೇರಿಸಬೇಕೆಂದು ಬಂಧುಗಳಿಗೆ ಆದೇಶ ನೀಡಿದ್ದರು. ಆ ಆದೇಶದ ಸಾರಾಂಶವಿಷ್ಟು: 'ನಾನು ಸತ್ತನಂತರ ನನ್ನ ಉಡುಪನ್ನು

ಬದಲಾಯಿಸಬೇಡಿ. ಸ್ನಾನ ಇತ್ಯಾದಿ ಶುದ್ಧಿಕರ್ಮಗಳು ಬೇಡ. ಯಾರಿಗೂ ಹೇಳಬೇಡಿ. ಹೇಗಿರುತ್ತೇನೋ ಹಾಗೆ ಸಂಸ್ಕಾರ ಮಾಡಿ. ನನ್ನ ಬೂದಿಯನ್ನು ಯಾವ ಹೊಳೆಗೂ ನದಿಗೂ ಹಾಕಿ ಕಲುಷಿತಗೊಳಿಸಬೇಡಿ. ಯಾವುದಾದರೂ ಒಂದು ಗಿಡದ ಬುಡಕ್ಕೆ ಹಾಕಿದರೆ ಸಾಕು.'

ಅವರು ಬದುಕಿದ್ದಾಗ ಯಾರಿಗೂ ತೊಂದರೆ ಕೊಡಲಿಲ್ಲ; ಗಿಡಕ್ಕೆ ನೋವಾದರೂ ಮರುಗುತ್ತಿದ್ದರು. ಸತ್ತಮೇಲಾದರೂ ತಮ್ಮಿಂದ ಯಾರಿಗೂ ತೊಂದರೆಯಾಗಬಾರದೆಂದೇ ಈ ಮಹಾಪುರುಷನ ಮಹದಾಸೆ. ವಸ್ತ್ರಾಂತರ ಶುದ್ಧಿಕಾರ್ಯಗಳಿಂದಾಗಿ ಶವಸಂಸ್ಕಾರ ವಿಳಂಬವಾಗಬಾರದು. ಆತ್ಮ ವಿಶ್ವದಲ್ಲಿ ವಿಲೀನಗೊಂಡಕೂಡಲೇ ದೇಹ ಪಂಚಭೂತಗಳೊಳಗೆ ಸೇರಿಕೊಳ್ಳಬೇಕು. ದೂರದಿಂದ ದುಗುಡಿಸುತ್ತ ಬರುವ ನೆಂಟರಿಷ್ಟರಿಗೆ ತೊಂದರೆಯಾಗಬಾರದು. ಕಳೆಯಿಲ್ಲದ ದೇಹವನ್ನು ನೋಡಿ ಆಗಬೇಕಾದ್ದೇನು? ತಮ್ಮ ದೇಹದ ಬೂದಿಯಿಂದ ಹೊಳೆಯ ನೀರು ಕಲುಷಿತಗೊಳ್ಳಬಾರದೆಂಬ ಅವರ ಅಪೂರ್ವ ಮಹದಾಲೋಚನೆ ನೆಹರೂ ಅಂಥವರಿಗೂ ಹೊಳೆಯುವಂಥದಲ್ಲ. ಅದು ಗಿಡಕ್ಕೆ ಗೊಬ್ಬರವಾಗಲೆಂಬ ಇಚ್ಛೆ ಅವರ ಮನೋಧರ್ಮಕ್ಕನುಗುಣವಾಗಿದೆ. ಅವರ ಸಸ್ಯ ಪ್ರೇಮದ ಮಹತ್ತಿಗೆ ಅವರ ಮರಣವೂ ಸಾಕ್ಷಿಯೊದಗಿಸುತ್ತದೆ. ಒಂದಲ್ಲ ಒಂದು ದಿನ ಮಣ್ಣಾಗುವ ತಮ್ಮ ಶವದ ಮೇಲೆ ಸಮಾಧಿ ಕಟ್ಟಿಸಿಕೊಳ್ಳಬೇಕೆನ್ನುವ ಸಾಮಾನ್ಯ ಜನರೇ ಜಗತ್ತಿನಲ್ಲಿ ತುಂಬಿಕೊಂಡಿರುವಾಗ, ಅದನ್ನಪೇಕ್ಷಿಸದೆ ಗಿಡಕ್ಕೆ ಗೊಬ್ಬರವಾಗುವ ಆಸೆಯನ್ನು ಪೂರೈಸಿಕೊಂಡ ಮರಿಗೌಡರು ಅಸಾಮಾನ್ಯರೇ ಸರಿ. ಅವರು ರುಗ್ಣಶಯ್ಯೆಯಲ್ಲಿದ್ದಾಗ ತಮ್ಮ ಸುಖವನ್ನು ತೊರೆದು, ಶ್ರದ್ಧಾನಿಷ್ಠೆ ಭಕ್ತಿಗಳಿಂದ ಅವರನ್ನು ಉಪಚರಿಸಿ, ಸತ್ತಮೇಲೂ ಅವರ ಅಪೇಕ್ಷೆಯನ್ನು ಪೇಕ್ಷಿಸದೆ, ಅವರ ಉಯಿಲನ್ನು ತೃಣವಾಗಿ ಕಡೆಗಣಿಸದೆ, ಅವರ ಇಚ್ಛೆಯನ್ನು ತ್ರಿಕರಣ ಶುದ್ಧಿಯಾಗಿ ನೆರವೇರಿಸುವ ಮೂಲಕ ಆದರ್ಶ ಪುರುಷನೊಬ್ಬನಿಗೆ ವಿಶೇಷ ರೀತಿಯಲ್ಲಿ ಗೌರವವನ್ನು ಸಲ್ಲಿಸಿದ ಅವರ ಬಂಧುಗಳ ಆದರ್ಶ ಅನುಕರಣೀಯುವಾಗಿದೆ.

ದೇಜಗೌ

ಅರಣ್ಯನಾಶವನ್ನು ಹೇಗೆ ತಡೆಗಟ್ಟಬಹುದು ?

'ಅರಣ್ಯ ರೋದನ' ನುಡಿಕಟ್ಟಿನ ಧ್ವನ್ಯರ್ಥವೇನೇ ಇರಲಿ ಇಂದು ಅದರ ವಾಚ್ಯಾರ್ಥ ತೀವ್ರವಾಗಿ ಮಾನವನನ್ನು ಕುಟುಕುತ್ತಿದೆ: ಅರಣ್ಯ ರೋದಿಸುತ್ತಿದೆ, ಅರಣ್ಯ ನಶಿಸುತ್ತಿದೆ, ಅರಣ್ಯ ತನ್ನದೇ ಭಾಷೆಯಲ್ಲಿ ಮಾನವನಿಗೆ ಎಚ್ಚರಿಕೆಯ ನುಡಿಗಳನ್ನು ತಿಳಿಸುತ್ತಿದೆ. ಅರಣ್ಯ—ಜೀವಸಂಕುಲ ಸಂಬಂಧ ಸೃಷ್ಟಿಯ ಒಂದು ಅವಿಭಾಜ್ಯ ಬಾಂಧವ್ಯ. ಇದರಲ್ಲಿ ಅರಣ್ಯದ ಪಾತ್ರವೇ ಪ್ರಮುಖ: ಜೀವಸಂಕುಲವಿರದಿದ್ದರೆ ಅರಣ್ಯ ಉಳಿಯದಿರಬಲ್ಲುದು, ಆದರೆ ಅರಣ್ಯವಿರದಿದ್ದರೆ ಜೀವಸಂಕುಲ ಖಾತ್ರಿ ಉಳಿಯಲಾರದು. ಅರಣ್ಯವೇ ಜೀವಿಯ ಹೆರುಮನೆ, ಬೆಳೆವ ತಾಣ, ಕಾಪಾಡುವ ನೆಲೆ ಮತ್ತು ರಕ್ಷಕ ನಿವಾಸ.

ಅರಣ್ಯ ನಾಶವನ್ನು ಹೇಗೆ ತಡೆಗಟ್ಟಬಹುದು, ಮುಖ್ಯವಾಗಿ ನೇರವಾಗಿ ಅರಣ್ಯವನ್ನೇ ಅವಲಂಬಿಸಿರುವ ರೈತಾಪಿ ಹಾಗೂ ಗಿರಿಜನರ ಜೀವನವನ್ನು ಅರಣ್ಯ ಪೋಷಣೆಯೊಂದಿಗೆ ಹೇಗೆ ತಳುಕುಹಾಕಬಹುದು, ನಾಗರಿಕತೆಯ ಏಳ್ಗೆಯಲ್ಲಿ ಅರಣ್ಯದ ಹೊಣೆ ಏನು ಮತ್ತು ಈ ನಿಟ್ಟಿನಲ್ಲಿ ಸರ್ಕಾರದ ಪಾತ್ರವೇನು ಎಂಬ ಸಂಗತಿಗಳನ್ನು ಸಂಕ್ಷೇಪವಾಗಿ ವಿವರಿಸುವ ಲೇಖನ.

—ಸಂಪಾದಕ

ಕರ್ನಾಟಕದ ಶೇ. ೨೦.೧೬ರಷ್ಟು ಪ್ರದೇಶ ಅರಣ್ಯ ಇಲಾಖೆಯ ಆಡಳಿತಕ್ಕೊಳಪಟ್ಟಿದೆ. ಇದರಲ್ಲಿ ಹಲವಾರು ವರ್ಗದ ಕಾಡುಗಳಿರುವುವಲ್ಲದೇ ಶೇಕಡಾ ೫೦ರಷ್ಟು ಬರೀ ಬರಡಾದ ಪ್ರದೇಶವೂ ಅಡಗಿದೆ. ಜನಸಂಖ್ಯೆ ಏರಿದಂತೆ, ದನಕರುಗಳ ಸಂಖ್ಯೆಯೂ ಏರುತ್ತಿದ್ದು, ಇವರುಗಳ ಬೇಡಿಕೆ ಪೂರೈಸಲು ಅರಣ್ಯಗಳಿಗೆ ಸಾಧ್ಯವಾಗುತ್ತಿಲ್ಲ. ಕಾಡುಗಳ ಸಾಂದ್ರತೆ ಕಡಿಮೆಯಾಗಿ, ಪ್ರದೇಶಗಳು ಬರಡಾಗುತ್ತ ಬರುತ್ತಿವೆ. ಇದನ್ನು ಮನಗಂಡು ಅರಣ್ಯ ಇಲಾಖೆ ಹಲವಾರು ಹೊಸ ಯೋಜನೆಗಳನ್ನು ಕಾರ್ಯಗತಮಾಡುತ್ತಿದೆ. ಇವು ಜನರಿಗೆ ಬೇಕಾಗುವ ಉರುವಲು ಕಟ್ಟಿಗೆ, ಮೇವು, ಸಣ್ಣನಾಟ ಮೊದಲಾದವನ್ನು ಒದಗಿಸುತ್ತವೆ. ಗಿರಿಜನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹಣ್ಣುಹಂಪಲು ತೋಟ ಬೆಳೆಸುವುದು, ಮರಗಳ ಪಟ್ಟ ಕೊಡುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವರಿಗೆ ಉದ್ಯೋಗ ಒದಗಿಸಲು ಅವರನ್ನು ಕಾವಲು ಪಡೆಗಳಲ್ಲಿ ಸೇರಿಸಿಕೊಂಡಿವೆ. ಈ ರೀತಿ ನಾನಾ ಅರಣ್ಯ ಅಭಿವೃದ್ಧಿ ಯೋಜನೆಗಳಿಂದ ಜನರಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅವುಗಳ ಸೂಕ್ಷ್ಮ ಪರಿಚಯ ಮಾಡಿಕೊಳ್ಳೋಣ.

೧. ಗಿರಿಜನರು ಸ್ವಾಭಾವಿಕವಾಗಿ ಅರಣ್ಯದಲ್ಲೇ ವಾಸಿಸುವವರು. ಅವರಿಗೆ ಕಾಡನ್ನು ಬಿಟ್ಟರೆ ಬೇರೆ ಆಧಾರವೇ ಇಲ್ಲ. ಆದ್ದರಿಂದ ಅವರ ವಸತಿಗಳನ್ನು (ಪೋಡು) ಅರಣ್ಯಗಳ ಮಧ್ಯದಿಂದ ಅಥವಾ ಇತರ ಅರಣ್ಯ ಪ್ರದೇಶಗಳ ಒಳಗಿನಿಂದ ಸ್ಥಳಾಂತರಿಸಿ, ಕಾದಿಟ್ಟ ಅರಣ್ಯಗಳ ಎಲ್ಲೆಗಳಲ್ಲಿ ಅವರಿಗೆ ಅನುಕೂಲವಾಗುವಂತೆ ಮನೆಗಳನ್ನು ಕಟ್ಟಿಸಿ, ಕುಡಿಯುವ ನೀರಿಗೋಸ್ಕರ ಕೊಳವೆ ಬಾವಿಗಳನ್ನೂ ತೆಗೆಸಿ, ಅವರು ಅಲ್ಲೇ ವಾಸಿಸುವ ವ್ಯವಸ್ಥೆ ಮಾಡಿದೆ. ಇದರಿಂದ ಅವರಿಗೆ ಬೇಕಾಗುವ ಸೌಕರ್ಯಗಳಾದ ಶಾಲೆ, ದವಾಖಾನೆ, ಕೈಗಾರಿಕಾ ಶೆಡ್ಡು ಮೊದಲಾದವನ್ನು ಒಂದೇ ಕಡೆ ಕಲ್ಪಿಸಲು ಅನುಕೂಲವಾಗುತ್ತದೆ. ಅರಣ್ಯದಲ್ಲಿ ಕೆಲಸವಿಲ್ಲದ ಸಮಯದಲ್ಲಿ ಪಕ್ಕದ ಹಳ್ಳಿಗಳಿಗೆ ಹೋಗಿ ದಿನಗೂಲಿಯನ್ನು ಮಾಡಲು ಅನುಕೂಲವಾಗುವುದು. ಗಿರಿಜನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ತಲಾ ಒಂದು ಎಕರೆ ಅರಣ್ಯ ಜಮೀನನ್ನು ನಿಗದಿಪಡಿಸಿ, ಅಲ್ಲಿ ಹಣ್ಣಿನ ಗಿಡಗಳನ್ನು ಅರಣ್ಯ ಇಲಾಖೆಯವರೇ ಬೆಳೆಸಿ, ಜಾಗವನ್ನು ಅವರಿಗೇ ಗುತ್ತಿಗೆ ಕೊಟ್ಟಂತೆ ಮಾಡಲಾಗಿದೆ. ಆ ಪ್ರದೇಶಗಳು ಸರ್ಕಾರಿ ಕಾದಿಟ್ಟ ಅರಣ್ಯಗಳಾಗಿಯೇ ಉಳಿಯುವುವಲ್ಲದೆ ಹಣ್ಣಿನ ಮರಗಳಿಂದ ಸಿಗುವ ಹಣ್ಣು ಹಂಪಲ ಮೊದಲಾದವನ್ನು ಮಾತ್ರ ಅವರು ಉಪಯೋಗಿಸಲು ಅವಕಾಶವಿದೆ. ಇದಲ್ಲದೆ ಸರ್ಕಾರಿ ಪ್ರದೇಶಗಳಲ್ಲಿ ಹಣ್ಣು ಬಿಡುತ್ತಿರುವ ಹುಣಸೇ ಮರಗಳನ್ನು ಗುರ್ತಿಸಿ ಪಕ್ಕದ ಗಿರಿಜನರಿಗೆ ಪಟ್ಟ ಕೂಡ ಕೊಡಲಾಗಿದೆ. ಇದರಿಂದ ಒಂದು ಹುಣಸೇ ಮರದಿಂದ ಸಾಧಾರಣ ರೂ. ೫೦೦–೧೦೦೦ ವರ್ಷಕ್ಕೆ ಆದಾಯ ಬರುವ ನಿರೀಕ್ಷೆ ಇದೆ. ಗಿರಿಜನ ವಿಧವೆಯರಿಗೆ ಹಸುಗಳನ್ನು ಮುಫತ್ತಾಗಿ ಕೊಡಲಾಗಿದೆ. ಅಲ್ಲದೆ ಬೊಂಬು ಕೆಲಸಗಾರರಿದ್ದರೆ ಅಂತಹವರಿಗೆ ತಿಂಗಳೊಂದಕ್ಕೆ ೫೦ ಬಿದಿರುಗಳನ್ನು ಸಹ ಒದಗಿಸಲಾಗಿದೆ.

ಅರಣ್ಯದಲ್ಲಿ ದೊರಕುವ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಗಿರಿಜನರನ್ನೇ ನೇಮಿಸಲಾಗಿದೆ. ಅವರನ್ನೆಲ್ಲ ಒಂದುಗೂಡಿಸಿ ಲ್ಯಾಂಪ್ (LAMP Societies) ಸದಸ್ಯರನ್ನಾಗಿ ಮಾಡಿ ಅವರು ಸಂಗ್ರಹಿಸಿದ ಕಿರು ಅರಣ್ಯ ಉತ್ಪನ್ನಗಳಿಗೆ ಯುಕ್ತ ಬೆಲೆ ದೊರೆಯುವಂತೆ ಮಾಡುವುದಲ್ಲದೆ, ಅವನ್ನು ನಿಗದಿತ ಬೆಲೆಗೆ ಮಾರಲು ಲ್ಯಾಂಪ್ ಸೊಸೈಟಿಯವರು ಬಹಿರಂಗ ಹರಾಜು ಮಾಡಿ ಅಧಿಕ ಲಾಭಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗಿರಿಜನರಿಗೆ ಉದ್ಯೋಗ ದೊರಕಿಸುವ ಮತ್ತು ಅವರು ಕಾಡು ಗಸ್ತು ಮಾಡುವಲ್ಲಿ ಹೆಚ್ಚಿನ ಮಾಹಿತಿ ಪಡೆದಿರುವುದನ್ನು ಉಪಯೋಗಿಸಿಕೊಳ್ಳುವ ಸಲುವಾಗಿ, ಅವರನ್ನು

ಅರಣ್ಯ ಇಲಾಖೆಯವರು ಕಳ್ಳಬೇಟೆ ತಡೆಗಟ್ಟುವ ಪಡೆಗೆ ಆಯ್ಕೆ ಮಾಡಿಕೊಂಡು ಕಾಡಿನಲ್ಲಿ ಅದನ್ನು ಬಹಳಷ್ಟು ತಡೆಯುವಂತೆ ಮಾಡಿದ್ದಾರೆ. ಬೇಸಿಗೆಯಲ್ಲಿ ಅರಣ್ಯಗಳಲ್ಲಿ ಬೀಳುವ ಬೆಂಕಿಯನ್ನು ತಡೆಗಟ್ಟಲು ಮತ್ತು ಬಿದ್ದಲ್ಲಿ ನಂದಿಸಲು ವರ್ಷಂಪ್ರತಿ ಜನವರಿ ತಿಂಗಳಿನಿಂದ ಮೇ ತಿಂಗಳ ಆಖೈರಿ ತನಕ ಗಿರಿಜನರನ್ನೇ ಬೆಂಕಿ ಕಾವಲುಗಾರರಾಗಿ ನೇಮಿಸಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲೇ ಸಾಧಾರಣ ೨೫೦ಕ್ಕೂ ಹೆಚ್ಚು ಇಂತಹ ಗಿರಿಜನ ಕಾವಲುಗಾರರಿದ್ದಾರೆ. ಇಲಾಖೆಯ ಇತ್ತೀಚೆಗಿನ ಆದೇಶದಂತೆ ಗಿರಿಜನ ಯುವಕರನ್ನು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ, ಅವರನ್ನೇ ಅರಣ್ಯ ವೀಕ್ಷಕರ ಖಾಯಂ ಹುದ್ದೆಗಳಿಗೆ ಆಯ್ಕೆ ಮಾಡುವ ವ್ಯವಸ್ಥೆಯನ್ನು ಸಹ ಅರಣ್ಯ ಇಲಾಖೆ ಮಾಡಿದೆ. ಇದರಿಂದ ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕಿನಲ್ಲಿರುವ ಸೋಲಿಗ ಜನಾಂಗದವರಿಗೂ, ಹೆಗ್ಗಡದೇವನಕೋಟೆ ಮೊದಲಾದ ಕಡೆ ನೆಲೆಸಿರುವ ಗಿರಿಜನರಾದ ಜೇನುಕುರುಬ ಮತ್ತು ಕಾಡು ಕುರುಬರಿಗೂ ಅನುಕೂಲವಾಗುತ್ತದೆ. ಅರಣ್ಯ ಪ್ರದೇಶದಲ್ಲಿ ದೊರಕುವ ಜಿಂಕೆ ಮತ್ತು ಕಡವೆಗಳ ಕೊಂಬುಗಳನ್ನು ಗಿರಿಜನರಿಂದ ಸಂಗ್ರಹಿಸಿ ಕರಕುಶಲ ಕೈಗಾರಿಕಾ ನಿಗಮದ ಮೂಲಕ ಕರಕುಶಲ ಕರ್ಮಿಗಳಿಗೆ ವಿತರಿಸಲಾಗುತ್ತಿದೆ. ಗಿರಿಜನರಿಗೆ ಸಂಗ್ರಹಣೆ ಮಾಡಿದಲ್ಲಿ ಕೆ. ಜಿ. ಯೊಂದಕ್ಕೆ ೧೨ರೂ. ಕೊಡಲಾಗುತ್ತಿದೆ.

೨. ಮೇದರು ಹಾಗೂ ಬುರುಡು ಜನಾಂಗದವರು ಬಿದಿರಿನ ಕೆಲಸಗಳಲ್ಲಿ ನುರಿತವರು. ಅವರಿಗೆ ಬೇರೆ ಕಸಬು ಗೊತ್ತಿಲ್ಲ. ಆದ್ದರಿಂದ ಅವರ ಕೈಕಸಬುಗಳಿಗೆ ಪ್ರತಿಯೊಂದು ಕುಟುಂಬಕ್ಕೂ ತಿಂಗಳೊಂದಕ್ಕೆ ೫೦ ಬಿದಿರುಗಳನ್ನು ಸರ್ಕಾರಿ ನಿಗದಿತ ಬೆಲೆಗೆ ಹಂಚಲಾಗುತ್ತಿದೆ. ಇದರಿಂದ ಮಂಡ್ಯ, ಮೈಸೂರು ಮೊದಲಾದ ಕಡೆ ನೆಲೆಸಿರುವ ಮೇದರುಗಳಿಗೆ ಬಹಳ ಅನುಕೂಲವಾಗಿದೆ. ಇವರು ಬುಟ್ಟಿಗಳನ್ನು ಮತ್ತು ರೇಷ್ಮೆಗೂಡಿಗೆ ಬೇಕಾದ ಚಾಕಿಗಳನ್ನು ಹೆಣೆದು ಮಾರಾಟ ಮಾಡಿ ಜೀವಿಸುತ್ತಾರೆ.

೩. ಮನೆ ಕಟ್ಟಲು ಮರ ಬೇಕೇ ಬೇಕು. ಆದರೆ ಈಗಿನ ಮಾರುಕಟ್ಟೆಯಲ್ಲಿ ಅದರ ಬೆಲೆ ಗಗನಕ್ಕೇರಿದೆ. ಸಾಗುವಾನಿ ನಾಟಗಳು ಸಿಗುವುದೇ ಅಪರೂಪ. ಆದ್ದರಿಂದಲೇ ಈಗ ಸರ್ಕಾರ ಯಥೇಚ್ಛವಾಗಿ ನಾಟಗಳನ್ನು ಆಮದು ಮಾಡಿಕೊಳ್ಳಲು ಸುಂಕ ಮೊದಲಾದವನ್ನು ಕಡಿಮೆ ಮಾಡಿದೆ. ಇದರಿಂದ

ಬೆಲೆಯನ್ನು ಹಿಡಿತದಲ್ಲಿಡಲು ಅನುಕೂಲವಾಗುವುದು. ಇದೂ ಅಲ್ಲದೆ ಸರ್ಕಾರಿ ನಾಟಾ ಡಿಪ್ರೋಗಳಲ್ಲಿ ಮನೆ ಕಟ್ಟುವವರಿಗೆ ಅರಣ್ಯ ಇಲಾಖೆ ನಿಗದಿತ ಬೆಲೆಯಲ್ಲಿ ಬೇಕಾದ ಜಾತಿಯ ನಾಟಗಳನ್ನು ಮಂಜೂರು ಮಾಡುತ್ತದೆ. ಆದರೆ ಬರೇ 'ಸಿ' ತರಗತಿಯ ನಾಟ ಅದರಲ್ಲೂ ಸಾಗುವಾನಿಯಾದರೆ ೧೫೦ ಸೆಂ. ಮೀ. ಸುತ್ತಳತೆಯುಳ್ಳ ಮತ್ತು ಇತರೆ ಜಾತಿಯವುಗಳಾದರೆ ೨೦೦ ಸೆಂ. ಮೀ. ಗೆ ಮೀರದ ಸುತ್ತಳತೆಯುಳ್ಳ ನಾಟಗಳನ್ನು ಮಾತ್ರ ಮಂಜೂರು ಮಾಡಲಾಗುವುದು. ಈ ನಿಗದಿತ ಬೆಲೆ ಸಾಧಾರಣ ಮಾರುಕಟ್ಟೆಯ ಬೆಲೆಗಳಿಗಿಂತ ಕಡಿಮೆ. ಸುಮಾರು ೫ ರಿಂದ ೧೦ಘ.ಮೀ.ನಷ್ಟು ನಾಟಾಗಳನ್ನು ಮಂಜೂರು ಮಾಡುವ ವ್ಯವಸ್ಥೆಯಿದೆ. ಬೀಟೆ ಮರಗಳು ಅತೀ ಬೆಲೆಯುಳ್ಳ ಜಾತಿಯ ಮರಗಳಾಗಿದ್ದು, ಅವು ಖಾಸಗಿ ಜಮೀನಿನಲ್ಲೂ (ಮುಖ್ಯವಾಗಿ ಮಲೆನಾಡಿನಲ್ಲಿ) ಸ್ವಾಭಾವಿಕವಾಗಿ ಬೆಳೆದುಬರುತ್ತಿವೆ. ಅದರ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಈಗ ಯಾರ ಜಮೀನಿನಲ್ಲೇ ಬೆಳೆದಿರಲಿ ಅದನ್ನು ಮಾರಾಟ ಮಾಡಬೇಕಾದರೆ ಅರಣ್ಯ ಇಲಾಖೆಯನ್ನು ಸಂಪರ್ಕಿಸಿ ಪಕ್ಕದ ಸರ್ಕಾರಿ ನಾಟ ಸಂಗ್ರಹಾಲಯಕ್ಕೆ ಇಲಾಖೆಯ ಮೂಲಕ ಒಯ್ದು, ಅಲ್ಲಿ ಬಹಿರಂಗ ಹರಾಜು ಮಾಡಿ ಅದರಿಂದ ಬರುವ ಆದಾಯವನ್ನು (ಅದರ ಕೆಲಸಗಳಿಗೆ ಆದ ಖರ್ಚುಗಳನ್ನು ಕಡಿತಗೊಳಿಸಿ) ಆಯಾ ಜಮೀನುದಾರರಿಗೆ ಕೊಡಲಾಗುವುದು. ಇದರಿಂದ ಬೀಟೆ ಮರಗಳ ಮಾರಾಟದ ಹಕ್ಕನ್ನು ಮಾತ್ರ ಅರಣ್ಯ ಇಲಾಖೆ ವಹಿಸಿಕೊಂಡಿದೆ. ಗಂಧದ ಮರಗಳು ಸ್ವಾಭಾವಿಕವಾಗಿ ಬಯಲು ಪ್ರದೇಶಗಳಲ್ಲಿ ಬೆಳೆದುಬರುತ್ತಿವೆ. ಇವನ್ನು ಎಣ್ಣೆ ತೆಗೆಯಲು, ಕೆತ್ತನೆ ಕೆಲಸ, ಪೂಜೆ ಮೊದಲಾದವುಗಳಲ್ಲಿ ಉಪಯೋಗಿಸುತ್ತಾರೆ. ಆದರೆ ಎಲ್ಲಿ ಬೆಳೆದಿದ್ದರೂ ಅದು ಸರ್ಕಾರಕ್ಕೆ ಸೇರಿದ ಸ್ವತ್ತೆಂದು ಮಹಾರಾಜರ ಕಾಲದಿಂದಲೇ ಘೋಷಿಸಲ್ಪಟ್ಟಿದೆ. ಆದರೆ ಈಗ ಖಾಸಗಿ ಜಮೀನಿನಿಂದ ಗಂಧದ ಮರಗಳನ್ನು ಅರಣ್ಯ ಇಲಾಖೆ ತೆಗೆದು ಉಪಯೋಗಿಸಿದ ಪಕ್ಷದಲ್ಲಿ ಅದಕ್ಕೆ ನಿಗದಿಪಡಿಸಿದ ಬೆಲೆಯ ಶೇಕಡಾ ೭೫ ರಷ್ಟನ್ನು ಬೋನಸ್ ಎಂದು ಆಯಾ ಜಮೀನಿನವರಿಗೆ ಹಿಂತಿರುಗಿಸುವ ವ್ಯವಸ್ಥೆ ಇದೆ. ಇದರಿಂದ ಖಾಸಗಿ ಜಮೀನಿನವರು ಗಂಧದ ಗಿಡಗಳು ಬೆಳೆಯುವಂತೆ ಪ್ರೋತ್ಸಾಹಿಸಿ ಹೆಚ್ಚಿನ ಲಾಭ ಪಡೆಯಬಹುದು. ಕೆತ್ತನೆಗಳಿಗೆ, ಪೂಜೆ ಮೊದಲಾದ ಕಾರ್ಯಗಳಿಗೆ ಸಣ್ಣ ಪ್ರಮಾಣದಲ್ಲಿ ಗಂಧದ ತುಂಡುಗಳನ್ನು ಅರಣ್ಯ ಇಲಾಖೆಯ ಗಂಧದಕೋಠಿಯಿಂದ ನಿಗದಿತ ಬೆಲೆಗೆ ಪಡೆಯಬಹುದು. ಶ್ರೀಗಂಧದ ಬೆಲೆ ಈಗ ಸಾಧಾರಣ ಕೆ.ಜಿ.ಯೊಂದಕ್ಕೆ ೧೦೦ ರೂಪಾಯಿಗಳು. ಖಾಸಗಿ ಜಮೀನುಗಳಲ್ಲಿ ಬೆಳೆಸಿದ ಸರ್ವೆ, ನೀಲಗಿರಿ,

ಸಿಲ್ವರ್ ಓಕ್, ಸುಬಾಬೂಲ್, ಪಾಲುವಾಣ ಮೊದಲಾದ ಮರಗಳನ್ನು ವಾರಸುದಾರರು ಕಡಿಯಬೇಕಾದಲ್ಲಿ ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆಯಬೇಕಾಗಿಲ್ಲ. ಆದರೆ ಅವನ್ನು ಒಂದು ಸರ್ವೆ ನಂಬರ್‌ನಿಂದ ಇತರ ಸರ್ವೆ ನಂಬರ್‌ಗಳಿಗೆ ರವಾನಿಸಬೇಕಾದರೆ ಅರಣ್ಯ ಇಲಾಖೆಯ ಪರವಾನಿಗೆ ಪಡೆದಿರಬೇಕು.

೪. ಅರಣ್ಯಗಳ ಮಗ್ಗುಲಲ್ಲಿ ಖಾಸಗಿ ಜಮೀನುಗಳು ಇದ್ದೇ ಇರುತ್ತವೆ. ಅವರಲ್ಲೂ ವ್ಯವಸಾಯ ಮಾಡಲೇಬೇಕು. ಕಾಡುಪ್ರಾಣಿಗಳು ಪಕ್ಕದ ಕಾಡು ಪ್ರದೇಶಗಳಿಂದ ಖಾಸಗಿ ಜಮೀನುಗಳಿಗೆ ನುಗ್ಗಿ ಫಸಲನ್ನು ಹಾಳುಮಾಡುವುದು ಅಥವಾ ಜನರನ್ನು ಗಾಯಗೊಳಿಸುವುದು ಇದರಿಂದ ಆಕಸ್ಮಿಕ ಸಾವು, ಮೊದಲಾದವು ಅನಿವಾರ್ಯ. ಇಂಥ ಸಂದರ್ಭಗಳಲ್ಲಿ ಬೆಳೆ ನಷ್ಟವಾಗಿದೆಯೆಂದು ಮಹಜರು ಮಾಡಿಸಿ, ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದರೆ, ಆ ನಷ್ಟದ ಪರಿಹಾರಕ್ಕೆ ಯುಕ್ತವಾದ ಹಣವನ್ನು ಮಂಜೂರು ಮಾಡುವ ಅವಕಾಶವಿದೆ. ಅದೂ ಅಲ್ಲದೆ ಕಾಡು ಪ್ರಾಣಿಗಳಿಂದ ಆಕಸ್ಮಿಕ ಸಾವು ಅಪ್ಪಿದವರಿಗೆ, ಸತ್ತವರ ವಾರಸುದಾರರಿಗೆ ೧೦,೦೦೦ ರೂ. ಪರಿಹಾರ ಕೊಡುವ ಆದೇಶವಿದೆಯಲ್ಲದೆ, ಗಾಯಗೊಂಡವರ ವೈದ್ಯಕೀಯ ಖರ್ಚಿಗೆ ೫೦೦೦ ರೂ. ಹಣವನ್ನು ಕೊಡುವ ಅವಕಾಶವೂ ಉಂಟು. ಇಂಥ ಅನಾಹುತಗಳನ್ನು ತಡೆಯಲು ಆಳವಾದ ಕಂದಕಗಳನ್ನು ತೋಡಿ, ಖಾಸಗಿ ಜಮೀನು ಮತ್ತು ಸರ್ಕಾರಿ ಅರಣ್ಯಗಳ ಮಧ್ಯೆ ಆನೆ ಮೊದಲಾದ ಕಾಡು ಪ್ರಾಣಿಗಳು ದಾಟದಂತೆ ಹಲವಾರು ಕಡೆ ಮಾಡಲಾಗಿದೆ. ಇತ್ತೀಚೆಗೆ ಸೂರ್ಯನರಶ್ಮಿಯಿಂದಲೇ ಬ್ಯಾಟರಿಗಳಿಗೆ ಶಕ್ತಿಕೊಡುವ ವ್ಯವಸ್ಥೆ ಮಾಡಿ, ಅದರಿಂದ ವಿದ್ಯುಚ್ಛಕ್ತಿ ಬೇಲಿಗಳನ್ನು ಸಹ ಅಳವಡಿಸಲಾಗಿದೆ. ವನ್ಯಜೀವಿ ರಕ್ಷಕರಿಂದ ಕಾವಲುಕಾಯುವ ವ್ಯವಸ್ಥೆ ಮಾಡಿ, ಕಾಡು ಪ್ರಾಣಿಗಳು ಬೆಳೆ ಮೊದಲಾದವನ್ನು ಹಾಳುಮಾಡಲು ಖಾಸಗಿ ಜಮೀನುಗಳಿಗೆ ನುಗ್ಗುವ ಪ್ರಸಂಗಗಳಿದ್ದರೆ, ಅವನ್ನು ತುಪಾಕಿ ಹಾರಿಸಿ ಓಡಿಸುವ ವ್ಯವಸ್ಥೆಯೂ ಇದೆ.

೫. ಕಾಡು ಪ್ರದೇಶಗಳಲ್ಲಿ ಅತೀ ಬೆಲೆಬಾಳುವ ಮರಗಳು, ಅಮೂಲ್ಯವಾದ ಕಾಡುಪ್ರಾಣಿಗಳು ಇರುವುದು ಸಹ. ಆದರೆ ಅವನ್ನು ಕಳ್ಳಬೇಟೆಗಾರರಿಂದ ಮತ್ತು ಕಳ್ಳತನ ಮಾಡುವವರಿಂದ ಕಾಪಾಡಲು ಹಲವಾರು ಕಾಯ್ದೆ, ಕಾನೂನುಗಳನ್ನು ಮಾಡಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಏರ್ಪಡಿಸಿದೆ. ಅದೂ ಅಲ್ಲದೆ ಇಂಥ ಹೀನ ಕೃತ್ಯಗಳನ್ನು ತಡೆಯಲು ಜನರ ಸಹಾಯ ಮತ್ತು

ಬೆಂಬಲ ಪಡೆಯಲು ಯುಕ್ತ ಬಹುಮಾನ ಕೊಡುವ ಏರ್ಪಾಡನ್ನೂ, ಅರಣ್ಯ ಇಲಾಖೆ ಮಾಡಿದೆ. ಕಳ್ಳಸಾಗಾಣಿಕೆ ಅಥವಾ ಕಳ್ಳಬೇಟೆಯ ಬಗ್ಗೆ ಅರಣ್ಯ ಇಲಾಖೆಗೆ ಯುಕ್ತ ಸೂಚನೆ ಕೊಟ್ಟು ಅಂಥ ಕೃತ್ಯಗಳನ್ನು ತಡೆಯುವಂತೆ ಮಾಡುವವರಿಗೆ ಸುಮಾರು ೫೦೦ ರೂ. ರಷ್ಟು ಬಹುಮಾನ ಕೊಡುವ ಆದೇಶವಿದೆ. ಅಲ್ಲದೆ ಇಂಥ ಕಾರ್ಯ ತಡೆದು ಅರಣ್ಯ ಇಲಾಖೆಯವರೊಡನೆ ಸಹಕರಿಸಿ ಮಹಜರಿಗೆ ಸಹಿ ಮಾಡಿ, ಕೋರ್ಟಿನಲ್ಲಿ ಸಾಕ್ಷಿ ಹೇಳಿ, ತಪ್ಪಿತಸ್ಥರಿಗೆ ಶಿಕ್ಷೆಗೆ ಗುರಿಪಡಿಸುವಲ್ಲಿ ಬೆಂಬಲಿಸಿದರೆ, ಕಳ್ಳಸಾಗಾಣಿಕೆಯಲ್ಲಿ ಸಿಕ್ಕಿದ ವಸ್ತುಗಳ ಮೌಲ್ಯದ ಶೇಕಡಾ ೧೫ ರಷ್ಟು ಬೆಲೆಯನ್ನು ಅವರಿಗೆ (೧೦,೦೦೦ ರೂ. ಮೀರದಂತೆ) ಬಹುಮಾನ ಕೊಡಲು ಸರ್ಕಾರದ ಆದೇಶವಿದೆ. ಇದರಲ್ಲಿ ಬಹುಮಂದಿ ಭಾಗಿಗಳಾಗಿ ಬಹುಮಾನ ಪಡೆದಿದ್ದಾರೆ.

೬. ಹಳ್ಳಿಯಲ್ಲಿ ವಾಸಿಸುವವರಿಗೆ ಕಟ್ಟಿಗೆಯ ಬೇಡಿಕೆ ಬಹಳ. ನಗರವಾಸಿಗಳಂತೆ ಅವರಿಗೆ ವಿದ್ಯುಚ್ಛಕ್ತಿ, ಗ್ಯಾಸು ಮೊದಲಾದ ಸೌಕರ್ಯಗಳು ಕಡಿಮೆ. ಕಟ್ಟಿಗೆ ಸಿಗಬೇಕಾದರೆ ಪಕ್ಕದ ಕಾಡನ್ನೇ ಅವಲಂಬಿಸಿರಬೇಕು. ಆದ್ದರಿಂದ ಒಣ ಕಟ್ಟಿಗೆಯನ್ನು ತಲೆ ಹೊರೆಯಲ್ಲಿ ಮುಫತ್ತಾಗಿ ತರಲು ಅವಕಾಶವಿದೆ. ಆದರೆ ಈ ಸೌಲಭ್ಯವನ್ನು ದುರಾಶೆಯಿಂದ ಹೆಚ್ಚು ಹೆಚ್ಚಾಗಿ ಕಬಳಿಸಲು ಜನರು ಗಿಡಮರಗಳನ್ನು ಕಾಡಿನಲ್ಲಿ ಕಡಿದು ಒಣಗಿಸಿ ಅನಂತರ ಕಟ್ಟಿಗೆಯ ರೂಪದಲ್ಲಿ ತಲೆಹೊರೆಯಲ್ಲಿ ತರುವವರೂ ಅದನ್ನು ಮಾರುವವರೂ ಇದ್ದಾರೆ. ಇದರಿಂದ ಕಾಡು ಪ್ರದೇಶ ಬರಡಾಗಿ ಪಕ್ಕದ ಹಳ್ಳಿಗರಿಗೆ ಅನಾನುಕೂಲವಾಗುವುದಲ್ಲದೆ, ವಾತಾವರಣ ಕೆಟ್ಟು ಪರಿಸರಮಾಲಿನ್ಯ ಉಂಟಾಗುವುದು. ಆದ್ದರಿಂದಲೇ ಗ್ರಾಮಸ್ಥರು ಕಟ್ಟಿಗೆ ಮತ್ತು ಇತರ ಸಣ್ಣ ಮರಮುಟ್ಟುಗಳ ಬಳಕೆಯಲ್ಲಿ ಸ್ವಾವಲಂಬಿಗಳಾಗಬೇಕೆಂದು ೧೯೮೩ ರಿಂದ ವಿಶ್ವಬ್ಯಾಂಕಿನ ನೆರವಿನಿಂದ ಪ್ರಾರಂಭಿಸಿದ ಸಾಮಾಜಿಕ ಅರಣ್ಯ ಬೆಳೆಸುವಿಕೆಯ ಕಾರ್ಯಕ್ರಮದಲ್ಲಿ ಎಲ್ಲರಿಗೂ ೨೫೦ ಸಸಿಗಳನ್ನು ಮುಫತ್ತಾಗಿ ಹಂಚುವ ವ್ಯವಸ್ಥೆ ಮಾಡಲಾಗಿದೆ. ಜನ ತಮಗೆ ಬೇಕಾದ ಯಾವುದೇ ಜಾತಿಯ ಸಸಿಗಳನ್ನು ಪಕ್ಕದ ಅರಣ್ಯ ಕಛೇರಿಯಿಂದ ಪಡೆಯಬಹುದು. ೨೫೦ ಕ್ಕಿಂತ ಹೆಚ್ಚಾಗಿ ಬೇಕಾದಲ್ಲಿ ಇಲಾಖೆ ಬಲು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆಯನ್ನು ಕಲ್ಪಿಸಿದೆ. ಇದಲ್ಲದೆ ಸಸಿಗಳನ್ನು ಬೆಳೆಸುವಲ್ಲಿ ಗ್ರಾಮಸ್ಥರನ್ನು ಭಾಗಿಗಳಾಗಿ ಮಾಡಲು 'ಕಿಸಾನ್ ನರ್ಸರಿ'ಯೆಂಬ ಯೋಜನೆಯಿಂದ ಗ್ರಾಮದಲ್ಲಿ ಬಡತನ ರೇಖೆಯಿಂದ ಕೆಳಗಿರುವವರು, ಭೂರಹಿತರು ಹಾಗೂ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರಿಗೆ ಪ್ರೋತ್ಸಾ

ಹಿಸಿ ತಮ್ಮ ಅನುಕೂಲತೆಯಿಂದ ಸಸಿಗಳನ್ನು ಬೆಳೆಸಲು ಪಾಲಿಥೀನ್ ಚೀಲ, ಮಣ್ಣು ಮತ್ತು ಗೊಬ್ಬರಗಳನ್ನು ಕೊಡುವ ವ್ಯವಸ್ಥೆ ಮಾಡಿ, ಅದನ್ನು ಬೆಳೆಸಲು ಬೇಕಾಗುವ ಹಣವನ್ನೂ ಕೊಡುವ ವ್ಯವಸ್ಥೆ ಇದೆ. ಇದರಿಂದ ಸುಲಭವಾಗಿ ಸುಮಾರು ೫೦,೦೦೦ ಸಸಿಗಳನ್ನು ಮಡಿಯಲ್ಲಿ ಬೆಳೆಸಿ, ಉತ್ತಮ ಲಾಭ ಪಡೆಯಬಹುದು. ಈ ಕಾರ್ಯಕ್ರಮಗಳನ್ನು ಈಗ ಜವಹಾರ್ ಉದ್ಯೋಗ ಯೋಜನೆಯಡಿಯಲ್ಲಿ ಮಂಡಲವತಿಯಿಂದಲೂ ಕೈಗೊಳ್ಳಬಹುದು. ಇದರಲ್ಲಿ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗದವರ ಜಮೀನಿನಲ್ಲೂ ಅರಣ್ಯ ಇಲಾಖೆಯವರು ಗಿಡಮರಗಳನ್ನು ಪುಕ್ಕಟೆಯಾಗಿ ಬೆಳೆಸಲು ಮುಂದೆ ಬಂದಿದ್ದಾರೆ. ಅದೂ ಅಲ್ಲದೆ ರಾಜ್ಯದ ಖುಷ್ಕಿ ಜಮೀನು ಅಭಿವೃದ್ಧಿ ಯೋಜನೆಯಡಿಯಲ್ಲಿ ಬರಡು ಪ್ರದೇಶದಲ್ಲಿ ಸರ್ಕಾರದ ಖರ್ಚಿನಿಂದಲೇ ಗಿಡಮರಗಳನ್ನು ಬೆಳೆಸುವುದು, ಮಣ್ಣಿನ ಸವಕಳಿ ತಡೆಯಲು ಬೇಕಾಗುವ ಅಡ್ಡಕಟ್ಟೆಗಳನ್ನು ಕಟ್ಟುವುದು ಮೊದಲಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇವನ್ನು ಈಗ ಬರೀ ನಿಗದಿತ ಜಲಾನಯನ ಪ್ರದೇಶಗಳಲ್ಲಿ ಮಾತ್ರ ಮಾಡಲಾಗುತ್ತಿದೆ. 'ಸಿ' ಮತ್ತು 'ಡಿ' ದರ್ಜೆಯ ಜಮೀನನ್ನು ಹರಿಜನ/ಗಿರಿಜನ ವ್ಯವಸಾಯ ಕೂಲಿಗಾರರು ಮತ್ತು ಇತರ ಬಡತನ ರೇಖೆಗಿಂತ ಕೆಳಗಿರುವ ಬಡಜನರಿಗೆ ಸಂಘ ಸಂಸ್ಥೆಗಳಿಗೆ ಅರಣ್ಯಗಳನ್ನು ಬೆಳೆಸಲು ಗುತ್ತಿಗೆಗೆ ಕೊಟ್ಟು KASCARDಯೂ ಸ್ಥಳೀಯ ಬ್ಯಾಂಕಿನ ಮುಖೇನ ಅವರಿಗೆ ಗಿಡಗಳನ್ನು ಬೆಳೆಸಲು ಸಾಲ ದೊರಕಿಸಿ ಕೊಟ್ಟು ಉತ್ತೇಜಿಸಲಾಗುತ್ತಿದೆ. ಶಾಲಾ ಆವರಣದಲ್ಲಿ, ದೇವಸ್ಥಾನಗಳ ಸುತ್ತಲೂ ಅರಣ್ಯ ಅಭಿವೃದ್ಧಿಪಡಿಸಲು, ಶಾಲಾವನ ನಿರ್ಮಾಣ ಯೋಜನೆ, ಪವಿತ್ರ ವನನಿರ್ಮಾಣ ಯೋಜನೆಗಳನ್ನು ಅರಣ್ಯ ಇಲಾಖೆ ಅಳವಡಿಸಿ, ಅದರ ಖರ್ಚಿನಿಂದಲೇ ವನ ನಿರ್ಮಾಣ ಮಾಡಿದೆ. ರಾಷ್ಟ್ರೀಯ ಬರಡು ಪ್ರದೇಶ ಯೋಜನೆಯಡಿಯಲ್ಲಿ ಹಲವಾರು ಶಾಲೆಗಳಲ್ಲಿ ಕೊಳವೆ ಬಾವಿ ತೋಡಿ, ಪಂಪು ಅಳವಡಿಸಿ, ಬರುವ ವರ್ಷದಲ್ಲಿ ಶಾಲಾ ಮಕ್ಕಳೇ ಸಸಿಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಅರಣ್ಯ ಇಲಾಖೆಯ ಮೂಲಕ ಕೇಂದ್ರ ಸರ್ಕಾರವು ಹಮ್ಮಿಕೊಂಡಿದೆ. ಇದರಿಂದ ಮಕ್ಕಳಿಗೆ ಸಸ್ಯಗಳ ಬಗ್ಗೆ ಪ್ರೇಮ, ಮಮತೆ ಅವುಗಳನ್ನು ಬೆಳೆಸುವ ಆನಂದವನ್ನು ಮೂಡಿಸಲು ಪ್ರೇರಣೆ ದೊರೆಯುವಂತಾಗುತ್ತದೆ. ನೆಡುತೋಪುಗಳನ್ನು ಕಡಿಯುವ ಸಮಯದಲ್ಲಿ ಅಲ್ಲಿ ಸಿಗುವ ರೆಂಬೆ ಕೊಂಬೆಗಳನ್ನು ಪಕ್ಕದ ಹಳ್ಳಿಯವರು ಪುಕ್ಕಟೆಯಾಗಿ ತಲೆ ಹೊರೆಯಲ್ಲಿ ತೆಗೆದುಕೊಂಡು ಹೋಗುವ ಅವಕಾಶವೂ ಉಂಟು.

೭. ಜನಸಂಖ್ಯೆ ಜಾಸ್ತಿಯಾದಂತೆ ದನಕರುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಈಗ ಒಬ್ಬರಿಗೆ ಒಂದಂತೆ ದನಕರುಗಳಿವೆ. ಇವುಗಳಿಗೆಲ್ಲ ಮೇವು ಸಿಗಬೇಕಾದರೆ ಜನರೇ ಮೇವು ಬೆಳೆಸಬೇಕು ಅಥವಾ ಪಕ್ಕದ ಅರಣ್ಯಕ್ಕೆ ಕಳುಹಿಸಬೇಕು. ಹಿಂದಿದ್ದ ಗೋಮಾಳಗಳೆಲ್ಲ ಈಗ ಅತಿಕ್ರಮ ಅಥವಾ ಇತರ ಜನರಿಗೆ ವ್ಯವಸಾಯ ಮಾಡಲು ಬಿಡುಗಡೆ ಮಾಡಿರುವುದರಿಂದ, ಅರಣ್ಯ ಪ್ರದೇಶವನ್ನೇ ದನಕರುಗಳು ತಮ್ಮ ಮೇವಿಗೆ ಆಧಾರವಾಗಬೇಕು. ಸರ್ಕಾರದ ನೀತಿಯಂತೆ ದನಕರುಗಳು ಮುಫತ್ತಾಗಿ ಅರಣ್ಯ ಪ್ರದೇಶಗಳಲ್ಲಿ (ಮೂರು ವರ್ಷದೊಳಗಿನ ನೆಡುತೋಪುಗಳನ್ನು ಬಿಟ್ಟು) ಮೇಯಬಹುದು. ಹಳ್ಳಿಗಳಿಂದ ಪಕ್ಕದ ಕಾಡಿಗೆ ದಿನಬೆಳಿಗ್ಗೆ ಸಾವಿರಾರು ದನಕರುಗಳು ಮೇಯಲು ಹೋಗುವ ದೃಶ್ಯ ಎಲ್ಲರಿಗೂ ತಿಳಿದದ್ದೇ. ಒಂದು ದಿನಕ್ಕೆ ಬರೀ ೫ಕೆ.ಜಿ. ಮೇವನ್ನು ಅರಣ್ಯ ಒದಗಿಸುವಂತಿದ್ದರೆ, ಅದರ ಬೆಲೆ ರೂ. ೨-೫೦. ಆದರೆ, ಅರಣ್ಯದಿಂದ ಒದಗುವ ಮೇವಿಗೆ ಬೆಲೆ ಕಟ್ಟಬೇಕಾದರೆ, ಅದರ ಪ್ರಮಾಣವನ್ನು ನಂಬಲು ಅಸಾಧ್ಯ. ಹೀಗೆ ಈ ಸೌಲಭ್ಯಗಳನ್ನು ಮುಂದುವರಿಸಿದರೆ ಏರುವ ದನಕರುಗಳ ಸಂಖ್ಯೆಯಿಂದ ಅರಣ್ಯ ಪ್ರದೇಶ ಬರಡಾಗುವುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಮೇವನ್ನು ತಾವೇ ಬೆಳೆಸುವ ಹಾಗೂ ಅನಾವಶ್ಯಕವಾದ ದನಕರುಗಳ ಸಂಖ್ಯೆಯನ್ನು ನಿಯಂತ್ರಿಸುವ ಕೆಲಸ ಮಾಡಲೇಬೇಕು. ರೈತರು ತಮ್ಮ ದನಕರುಗಳನ್ನು ಅರಣ್ಯ ಪ್ರದೇಶದಲ್ಲಿ ಮೇಯಿಸುವುದರಿಂದ ಅರಣ್ಯ ನಾಶಕ್ಕೆ ದಾರಿಯಾಗಿದೆ. ಇದನ್ನು ತಡೆಗಟ್ಟಲು ಇಲಾಖೆ ಹಲವು ಪ್ರದೇಶಗಳಲ್ಲಿ ಮೇವನ್ನು ಬೆಳೆಸಿ ರೈತರಿಗೆ ಉಚಿತವಾಗಿ ಹಂಚುವ ಕಾರ್ಯಕ್ರಮವಿದೆ.

೮. ವನ್ಯಪ್ರಾಣಿಗಳನ್ನು ಸಂರಕ್ಷಿಸಲು ಅಭಯಾರಣ್ಯಗಳನ್ನು ಸೃಷ್ಟಿಸಲಾಗಿದೆ. ಈ ಅಭಯಾರಣ್ಯಗಳಲ್ಲಿ ಸಾರ್ವಜನಿಕರು ತಂಗಿ, ಪ್ರಕೃತಿ ಸೌಂದರ್ಯ ಹಾಗೂ ವನ್ಯಪ್ರಾಣಿಗಳನ್ನು ವೀಕ್ಷಿಸಲು ಅನುಕೂಲ ದೊರಕಿಸಿಕೊಟ್ಟಿದೆ.

ಈ ರೀತಿಯ ನಾನಾ ಸೌಲಭ್ಯಗಳನ್ನು ಅರಣ್ಯ ಪ್ರದೇಶಗಳು ಒದಗಿಸುತ್ತಾ ಬಂದಿವೆ. ಕಾಡು ತಂತಾನೇ ಅಭಿವೃದ್ಧಿ ಹೊಂದುವುದೆಂಬ ಜನರ ತಪ್ಪು ತಿಳುವಳಿಕೆಯಿಂದ ಅದು ನಾಶವಾಗುತ್ತಿದೆ. ಅದನ್ನು ಪುನರಾಭಿವೃದ್ಧಿ ಪಡಿಸುವುದು ಅತೀ ಕಷ್ಟವಾದ ಕೆಲಸ. ಒಮ್ಮೆ ಸ್ವಾಭಾವಿಕವಾಗಿ ಬೆಳೆದುಬಂದ ಕಾಡು ನಾಶವಾದರೆ ಅದೇ ವರ್ಗದ ಮತ್ತು ಅದೇ ಸಸ್ಯಜಾತಿಗಳಿಂದ ಕೂಡಿದ ಕಾಡನ್ನು ಅದೇ ಜಾಗದಲ್ಲಿ ಅಥವಾ ಇತರ ಜಾಗದಲ್ಲಿ ಪುನರ್ ನಿರ್ಮಾಣಿಸುವುದು ಅಸಾಧ್ಯ. ಈಗಾಗಲೇ ಗುಡ್ಡಗಳ ಮೇಲೆ ಕಾಡು ನಾಶವಾಗಿ ಹುಲ್ಲು

ಗಾವಲುಗಳು ಕಾಣಿಸುತ್ತಿವೆ. ಇದರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ ಮತ್ತು ವಾತಾವರಣ ಬದಲಾಗುತ್ತಿದೆ. ಬೆಂಕಿಯಿಂದ ಕಾಡು, ಹುಲ್ಲುಗಾವಲು ಬೆಂದು ಅನಾಹುತಗಳಾಗುತ್ತಿವೆ. ಆದ್ದರಿಂದ ಅರಣ್ಯಗಳಿಂದ ದೊರಕುವ ಸೌಲಭ್ಯಗಳನ್ನು ಸೂಕ್ಷ್ಮವಾಗಿ ಬಳಸಿಕೊಂಡು, ಅಂಕಿಅಂಶಗಳ ಎಣಿಕೆಗೆ ಸಿಗ ದಂತಹ ಸೌಲಭ್ಯಗಳನ್ನು ವರ್ಷಪರಂಪರೆಯಾಗಿ ನಮಗೆ ಲಭಿಸುವಂತೆ ಮಾಡು ವುದು ನಮ್ಮ ಕೈಯಲ್ಲೇ ಇದೆ.

ಡಾ॥ ಕೋ. ಅ. ಕುಶಾಲಪ್ಪ



ಸಂಪತ್ಸು ಮಹತಾಂ ಚಿತ್ತಂ ಭವತ್ಯುತ್ಪಲ ಕೋಮಲಂ ।
ಆಪತ್ಸು ಚ ಮಹಾಶೈಲಶಿಲಾ ಸಂಘಾತ ಕರ್ಕಶಂ ॥

ಐಶ್ವರ್ಯವಿರುವಾಗ ಮಹಾತ್ಮರ ಮನಸ್ಸು ನೈದಿಲೆಯಂತೆ ಮೃದುವಾಗಿರು ತ್ತದೆ; ವಿಪತ್ತಿನಲ್ಲಿ ದೊಡ್ಡ ಪರ್ವತದ ಬಂಡೆಗಲ್ಲುಗಳ ಸಮೂಹದಂತೆ ಕಠಿನ ವಾಗುತ್ತದೆ.

—ಸುಭಾಷಿತ

ಆರೋಗ್ಯಕ್ಕೆ ಹಾಲಿಗಿಂತ ಮೊಸರು ಉತ್ತಮ

ಭಾರತೀಯ ಸಂಸ್ಕೃತಿಯಲ್ಲಿ ಮೊಸರಿಗೆ ಬಹಳ ಮಹತ್ವವಿದೆ. ಇದರ ಪ್ರಯೋಗ ಶತಮಾನಗಳಿಂದ ಯಜ್ಞ, ಹವನ–ಹೋಮ, ವಿವಾಹ, ಪೂಜೆ ಮುಂತಾದ ಮಂಗಳ ಕಾರ್ಯಗಳಲ್ಲಿಯೇ ಅಲ್ಲದೆ ಔಷಧಿ ಹಾಗೂ ಸೌಂದರ್ಯ ಉಪಕರಣಗಳ ರೂಪದಲ್ಲಿಯೂ ಬಳಸಲ್ಪಡುತ್ತದೆ.

ಹಾಲಿಗಿಂತ ಮೊಸರೇ ಹೆಚ್ಚು ಉಪಯುಕ್ತವೆಂದು ವಿಜ್ಞಾನಿಗಳು ಈಗ ಸಿದ್ಧಪಡಿಸಿದ್ದಾರೆ. ಮೊಸರು ಹಾಲಿಗಿಂತಲೂ ಹೆಚ್ಚು ಒಳ್ಳೆಯ ಜೀರ್ಣಕಾರಿ. ಮೊಸರಿನ ಸರಾಸರಿ ೮೦ ಭಾಗ ಶರೀರಕ್ಕೆ ಉಪಯೋಗಕ್ಕೆ ಬರುತ್ತದೆ. ಆದರೆ ಹಾಲಿನ ಸರಾಸರಿ ೨೦ ಭಾಗ ಮಾತ್ರ ಉಪಯುಕ್ತವಾದದ್ದು. ಯಾರಿಗೆ ಹಾಲು ಜೀರ್ಣಿಸುವುದಿಲ್ಲವೋ ಅಂತವರಿಗೆ ಮೊಸರು ಸುಲಭವಾಗಿ ಜೀರ್ಣವಾಗುತ್ತದೆ. ಅಂತಹ ಸಮಯದಲ್ಲಿ ಹೊಟ್ಟೆಯನ್ನು ಪ್ರವೇಶಿಸಿದ ಹಾಲು ಮೊಸರಾಗಿಯೇ ಜೀರ್ಣವಾಗುವುದು.

ಎಲ್ಲ ಧಾತುಗಳ ಮೇಲೆ ತನ್ನ ಪ್ರಭಾವ ಬೀರುವ ಲ್ಯಾಕ್ಟಿಕ್ ಆಸಿಡ್ ಮೊಸರಿನಲ್ಲಿರುತ್ತದೆ. ಇದನ್ನು ಚಿನ್ನ–ಬೆಳ್ಳಿಯ ಪಾತ್ರೆಗಳಲ್ಲಿ ಇಟ್ಟು ಉಪಯೋಗಿಸುವುದರಿಂದ ಈ ಧಾತುಗಳ ಸೂಕ್ಷ್ಮ ಕಣಗಳು ಮೊಸರಿಗೆ ಬರುತ್ತವೆಯಲ್ಲದೆ— ದೀರ್ಘಾಯುವಾಗಲು ಸಹಕಾರಿಯಾಗುತ್ತದೆ.

ಆಹಾರ ವಿಜ್ಞಾನಿಗಳ ಪ್ರಕಾರ ಹಾಲಿನಲ್ಲಿ ಕೇಸಿನ್ ಎಂಬ ಪ್ರೋಟೀನ್ ಇರುತ್ತದೆ. ಮೊಸರಿನಲ್ಲಿನ ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾಗಳು ಕೇಸೀನ್ ಪ್ರೋಟೀನ್‌ಗಳನ್ನು ಶೇಖರಿಸುತ್ತಾವೆ. ಈ ರಾಸಾಯನಿಕ ಕ್ರಿಯೆಯಿಂದ ಮೊಸರಿನಲ್ಲಿ ವಿಶೇಷ ಗುಣ ಉಂಟಾಗುತ್ತದೆ. ಮೊಸರಿನಲ್ಲಿ ಕ್ಯಾಲ್ಸಿಯಮ್ ಪ್ರಮಾಣ ಹಾಲಿಗಿಂತ ೧೭ ರಷ್ಟು ಹೆಚ್ಚಿರುತ್ತದೆ.

ರಷ್ಯಾದ ಜಾರ್ಜಿಯಾ ಪ್ರದೇಶದಲ್ಲಿ ೫೦ ಲಕ್ಷ ಪ್ರಜಾಸಂಖ್ಯೆಯಲ್ಲಿ ೬೦ ಸಾವಿರ ಜನ ೧೦೦ ವರ್ಷಕ್ಕಿಂತಲೂ ಹೆಚ್ಚು ವಯಸ್ಸಿನವರು, ಹೀಗಿದ್ದರೂ ಅವರು ಸಂತೋಷದಿಂದ ಆರೋಗ್ಯವಾಗಿದ್ದಾರೆ. ಅವರ ದೀರ್ಘಾಯುಷ್ಯದ ಗುಟ್ಟೆಂದರೆ ಮೊಸರು ಸೇವನೆ. ಬಲ್ಗೇರಿಯಾ ದೇಶದಲ್ಲಿಯೂ ೧೦೦ ವರ್ಷದಾಟಿದವರ ಸಂಖ್ಯೆ

೧೯೮೯ರ ಜೂನ್ ತಿಂಗಳ ಹಿಂದಿ ಡೈಜೆಸ್ಟ್ ನವನೀತ ಮಾಸಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಪ್ರಮೋದ್‌ಕುಮಾರ್ ಸೋನಿಯವರ 'ಸ್ವಾಸ್ಥ್ಯ ಕೆಲಿಯೆ ದೂಧ್ ಸೆ ದಹೀ ಬೆಹತರ್' ಲೇಖನದ ಭಾಷಾನುವಾದ.

ನೂರಾರು. ಅವರು ಮೊಸರು ಸೇವನೆಯಲ್ಲದೆ ಹಣ್ಣು–ತರಕಾರಿಗಳನ್ನು ಹೆಚ್ಚು ಉಪಯೋಗಿಸುತ್ತಾರೆ.

ಮೊಸರಿನ ಪೌಷ್ಟಿಕತೆ : ಮೊಸರಿನ ಪೌಷ್ಟಿಕತೆ ಅದರಲ್ಲಿರುವ ಬೆಣ್ಣೆಯಂಶದಿಂದ ಉಂಟಾಗುತ್ತದೆ. ಬೆಣ್ಣೆ ಆಹಾರ ಮತ್ತು ಔಷಧಿ ಎರಡೂ ಹೌದು. ಅದು ಬೌದ್ಧಿಕ ಶಕ್ತಿ ಮತ್ತು ತಂಪನ್ನು ಕೊಡುತ್ತದೆ. ಮೊಸರನ್ನು ಕಡೆದು ಬೆಣ್ಣೆ ತೆಗೆದು ಮಜ್ಜಿಗೆ ಅಥವಾ ತಕ್ರದ ಉಪಯೋಗವೂ ಸಹ ಬಹಳ ಲಾಭಕಾರಿ. ಇದನ್ನು ನಿಯಮಿತವಾಗಿ ಉಪಯೋಗಿಸುವುದರಿಂದ ಮನುಷ್ಯ ಎಂದೂ ರೋಗಿಯಾಗುವುದಿಲ್ಲ.

ಆಯುರ್ವೇದದಲ್ಲಿ ಮೊಸರನ್ನು ಹಸಿವು ಹೆಚ್ಚಿಸುವ, ಹೃದಯ ಮತ್ತು ಬುದ್ಧಿಗೆ ತಂಪು ಹಾಗೂ ಶಕ್ತಿಕೊಡುವ, ರಕ್ತಶುದ್ಧಿಮಾಡುವ, ಜೀರ್ಣಕ್ಕೆ ಸಹಾಯವಾಗುವ, ಸ್ನಿಗ್ಧತೆಯುಳ್ಳ, ಪರಮಶುಷ್ಕ, ವಾತ, ಕಫನಾಶಕ, ಯಕೃತ್‌ನ ಶಕ್ತಿ ಹೆಚ್ಚಿಸುವ, ಉದರಕ್ಕೆ ಸಂಬಂಧಿಸಿದ ರೋಗಗಳನ್ನು ನಾಶಪಡಿಸುವ ಮತ್ತು ಮೂಲವ್ಯಾಧಿನಾಶಕ ಎಂದು ಹೇಳಲ್ಪಟ್ಟಿದೆ. ಇದಲ್ಲದೆ ಇದು ಅತಿಸಾರ, ಅಜೀರ್ಣ, ಪ್ರಮೇಹ ಮತ್ತು ಶ್ವೇತ ಕುಷ್ಠವನ್ನು ಸಹ ಹೋಗಲಾಡಿಸುತ್ತದೆ.

ಮೊಸರಿನಲ್ಲಿ ಇರುವ ಬ್ಯಾಕ್ಟೀರಿಯಾ ಕರುಳಿನಲ್ಲಿ ಸೇರಿರುವ (ಕೊಳಕು) ಕಲ್ಮಶ ಮತ್ತು ವಿಷಯುಕ್ತ ಕೀಟಾಣುಗಳನ್ನು ನಾಶಮಾಡಿ ಕರುಳನ್ನು ಸ್ವಚ್ಛಗೊಳಿಸುತ್ತದೆ.

ಮೊಸರಿನ ರೂಪ ಪ್ರಮುಖವಾಗಿ ಉಪಯೋಗಿಸುವ ಹಾಲಿನ ಮೇಲೆ ಅವಲಂಬಿಸುತ್ತದೆ. ಆದರೂ ಸಹ ಇದರಲ್ಲಿ ಕ್ಯಾಲ್ಸಿಯಮ್ ಮತ್ತು ಫಾಸ್ಫರಸ್ ಅಧಿಕವಾಗಿರುವುದು ಕಾಣುತ್ತದೆ.

ಹಾಲಿಗಿಂತ ಮೊಸರು ಬೇಗ ಜೀರ್ಣವಾಗಲು ಕಾರಣ, ಅದರಲ್ಲಿರುವ ಪ್ರೋಟೀನ್ (ಸುಲಭವಾಗಿ ಜೀರ್ಣವಾಗುತ್ತದೆ.) ಆದ್ದರಿಂದಲೇ ಮಕ್ಕಳಿಗೆ, ಮುದುಕರಿಗೆ ಮತ್ತು ಹೊಟ್ಟೆಗೆ ಸಂಬಂಧಿಸಿದ ಕಾಯಿಲೆಗಳಿರುವಂತವರಿಗೆ ಇದು ವಿಶೇಷವಾಗಿ ಉಪಯೋಗವಾದುದು.

ಮೊಸರು ಶೇಖರಿಸುವುದೂ ಒಂದು ಕಲೆ : ಮೊಸರಿಗೆ ಹಾಲು ಚೆನ್ನಾಗಿರಬೇಕಲ್ಲದೆ ಹೊಸದಾಗಿರಬೇಕು. ಹಾಲನ್ನು ಕಡಿಮೆ ಶಾಖದಲ್ಲಿ ಬಿಸಿಮಾಡಿ ೫–೧೦ ನಿಮಿಷಗಳ ಕಾಲ ಕುದಿಸಬೇಕು. ಈಗ ಶುಚಿಯಾದ ಪಾತ್ರೆಯಲ್ಲಿ ಹಾಕಿ

ಆರಲುಬಿಡಿ. ಹಾಲು ಈಗ ಮರಳುತ್ತಿರುತ್ತದೆ ೨೮ ರಿಂದ ೩೦ ಡಿಗ್ರಿ ಸೆಲ್ಸಿಯಸ್ ನಲ್ಲಿ; ಹಸುವಿನ ಕೆಚ್ಚಲಿನಲ್ಲಿದ್ದಾಗಿನ ಶಾಖವೇ ಈಗ ಹಾಲಿಗಿರಬೇಕು; ಆಗ ಅತ್ಯಂತ ಸಿಹಿ ಮೊಸರು ಶೇಖರವಾಗುತ್ತದೆ. ಹೆಚ್ಚು ಬಿಸಿ ಹಾಲು ಶೇಖರಿಸಿದರೆ ನೀರು ಬಿಡುತ್ತವೆ. ಈ ತಾಪಮಾನದಲ್ಲಿ ಆಮ್ಲ ಉತ್ಪನ್ನ ಮಾಡುವ ಜೀವಾಣು ಸರ್ವೋತ್ತಮ ರೂಪದಲ್ಲಿ ಹೆಚ್ಚುತ್ತದೆ.

ಈಗ ಒಂದು ಚಮಚದಷ್ಟು ನೇರಳೆ ರಸವನ್ನು ಪ್ರತಿ ಕಿಲೋ ಹಾಲಿಗೆ ಲೆಕ್ಕಾಚಾರವಾಗಿ ಹಾಕಿ ಚೆನ್ನಾಗಿ ಬೆರಸಿ. ನಂತರ ಗಾಳಿಯಾಡುವ ಸುರಕ್ಷಿತ ಸ್ಥಳದಲ್ಲಿ ಇಡಿ. ಇಂತಹ ಮೊಸರು ರುಚಿಕರವಾಗಿರುವುದಲ್ಲದೆ, ಕಡಿಮೆ ಹುಳಿಯಿಂದ ಕೂಡಿರುತ್ತದೆ.

ರಾತ್ರಿಯಲ್ಲಿ ೬ ರಿಂದ ೮ ಗಂಟೆಗಳಲ್ಲಿ, ಹಗಲು ೮ ರಿಂದ ೧೦ ಗಂಟೆಗಳಲ್ಲಿ ಹಾಗೂ ಚಳಿಗಾಲದಲ್ಲಿ ೧೦ ರಿಂದ ೧೪ ಗಂಟೆಗಳಲ್ಲಿ ಮೊಸರು ಶೇಖರವಾಗುತ್ತದೆ. ಚಳಿಗಾಲದಲ್ಲಿ ಬೇಸಿಗೆಯಂತಲ್ಲದೆ ಹೆಚ್ಚು ಹೊತ್ತು ಹಿಡಿಯುತ್ತದೆ ಹಾಗೂ ನೇರಳೆರಸ ಹೆಚ್ಚು ಹುಳಿ ಮತ್ತು ಸ್ವಲ್ಪ ಹೆಚ್ಚು ಪ್ರಮಾಣದಲ್ಲಿರಬೇಕು.

ಎಚ್ಚರಿಕೆಗಳು: ಸಾಧ್ಯವಾದಷ್ಟು ಸಿಹಿಮೊಸರನ್ನೇ ಉಪಯೋಗಿಸಬೇಕು. ಹೆಚ್ಚು ಹೊತ್ತು ಇಟ್ಟಿರುವ ಹುಳಿಮೊಸರಿನಲ್ಲಿ ಪೋಷಕಾಂಶಗಳ ಕೊರತೆ ಇರುತ್ತದೆ. ಮೊಸರಿಗೆ ಗಾಜು, ಮಣ್ಣು ಇಲ್ಲವೇ ಜೇಡಿಮಣ್ಣಿನ ಪಾತ್ರೆಗಳನ್ನು ಉಪಯೋಗಿಸಿ. ಮಣ್ಣಿನ ಪಾತ್ರೆಗಳು ಹಾಲಿನಲ್ಲಿನ ನೀರಿನಂಶವನ್ನು ಹೀರಿಕೊಳ್ಳುತ್ತವೆ. ಆದ್ದರಿಂದ ಮೊಸರು ಗಟ್ಟಿಯಾಗಿ ಒತ್ತಟ್ಟಿಗೆ ಶೇಖರವಾಗುತ್ತದೆ.

ಮೊಸರನ್ನು ಹಿತ್ತಾಳೆ, ತಾಮ್ರ, ಅಲ್ಯುಮಿನಿಯಂ, ಕಂಚು ಮುಂತಾದ ಪಾತ್ರೆಗಳಲ್ಲಿಟ್ಟು ಉಪಯೋಗಿಸಬಾರದು. ಇವುಗಳಲ್ಲಿಟ್ಟ ಮೊಸರು ವಿಷಯುಕ್ತವಾಗುತ್ತದೆ.

ಹಾಲಿಗಿಂತ ಮೊಸರೇ ಮೇಲು: ಹಾಲು ಮತ್ತು ಮೊಸರುಗಳೆರಡೂ ಗುಣಕಾರಿ—ಸಮಾನ ಪೋಷಕಾಂಶಗಳಿಂದ ಪೌಷ್ಟಿಕವಾದರೂ, ಪೋಷಣೆಯ ವಿಷಯದಲ್ಲಿ ಮೊಸರೇ ಕೆಳಕಂಡ ಕಾರಣಗಳಿಂದ ಉತ್ತಮ:

* ಹಾಲಿನ ಜಿಡ್ಡು ಕೊಲೆಸ್ಟ್ರೋಲ್ ಅನ್ನು ಹೆಚ್ಚಿಸುತ್ತದೆ. ಇದು ಹೃದಯಕ್ಕೆ ಹಾನಿಕರ. ಮೊಸರು ಕೊಲೆಸ್ಟ್ರೋಲನ್ನು ಹೆಚ್ಚಿಸುವುದಿಲ್ಲ. ಆದ್ದರಿಂದ ಹೃದಯ ರೋಗಗಳು ಮತ್ತು ರಕ್ತ ಚಲನೆ (ಶುದ್ಧಿ)ಯಲ್ಲಿ ಮೊಸರು ಸಹಾಯಕ.

* ಮೊಸರಿನಲ್ಲಿ ಜಿಡ್ಡಿನ ಕಣ್ಣಗಳು ಹಾಲಿಗಿಂತ ಚಿಕ್ಕವಿರುತ್ತವೆ. ಹೀಗಾಗಿ ಬೇಗ ಜೀರ್ಣವಾಗುತ್ತವೆ. ಆದರೆ ಹಾಲಿನ ಜಿಡ್ಡನ್ನು (ಕೊಬ್ಬು) ಜೀರ್ಣಿಸಿ ಕೊಳ್ಳಲು ಮೂರು ಪಟ್ಟು ಹೆಚ್ಚು ಸಮಯಬೇಕು. ಮೊಸರಿನ ಪ್ರೋಟೀನ್ ಸಹ ಬೇಗ ಜೀರ್ಣಕಾರಿಯಾದದ್ದು.

* ಮೊಸರು ಕ್ಯಾನ್ಸರ್ ಕೋಶಗಳ ವೃದ್ಧಿಯನ್ನು ತಡೆಗಟ್ಟುತ್ತದೆ. ಆದ್ದರಿಂದ ಕ್ಯಾನ್ಸರ್ ತಡೆಗಟ್ಟಲು ಸಹಕಾರಿ. ಆದರೆ ಹಾಲು ಸಹ ಕ್ಯಾನ್ಸರ್‌ಗೆ ಲಾಭಕಾರಿಯೇನೂ ಅಲ್ಲ.

* ಉದರರೋಗಿಗಳಿಗೆ ಮೊಸರು ಹೆಚ್ಚು ಉಪಯೋಗಕರ. ಹಾಲು ಜೀರ್ಣಿಸಿ ಕೊಳ್ಳದವರು ಮೊಸರನ್ನು ಜೀರ್ಣಿಸಿಕೊಳ್ಳಬಹುದು. ಏಕೆಂದರೆ, ಹಾಲಿಗಿಂತ ಮೊಸರಾಗುವಾಗಿನ ರಾಸಾಯನಿಕ ಕ್ರಿಯೆಗಳ ಮೂಲಕ ಅದು ಹೆಚ್ಚು ಪಚನಕಾರಕಗುಣವನ್ನು ಪಡೆಯುತ್ತದೆ.

* ದಮ್ಮು ಮತ್ತು ಮಲೇರಿಯಾ ಹೊರತಾಗಿ ಎಲ್ಲ ರೋಗಿಗಳೂ ಮೊಸರನ್ನು ತಿನ್ನಬಹುದು. ಇದನ್ನು ಎಲ್ಲ ಕಾಲಕ್ಕೂ ಮಕ್ಕಳು, ಮುದುಕರು ಸೇವಿಸ ಬಹುದು. ಆದರೆ ಹಾಲನ್ನು ವೃದ್ಧರು ಕಡಿಮೆ ಉಪಯೋಗಿಸುವುದು ಒಳ್ಳೆಯದು.

ಮೊಸರಿನ ಔಷಧಗುಣ :

ಭಾರತದಲ್ಲಿ ಮೊಸರು ಮತ್ತು ಮಜ್ಜಿಗೆಯನ್ನು ಔಷಧಿಯ ರೂಪದಲ್ಲಿ ಸಾವಿರಾರು ವರ್ಷಗಳಿಂದ ಬಳಸುತ್ತಾರೆ.

ಬೇಸಿಗೆ ಕಾಲದಲ್ಲಿ ಮೊಸರುಕಡೆದು ಮಾಡಿದ ಮಜ್ಜಿಗೆ ಅಥವಾ ಸಿಹಿಮಜ್ಜಿಗೆ (ಲಸ್ಸೀ) ಕುಡಿಯುವುದರಿಂದ ಹೊಟ್ಟೆಯಲ್ಲಿನ ಉರಿಯನ್ನು ಶಾಂತಗೊಳಿಸಿ ತೃಪ್ತಿನೀಡುತ್ತದೆ. ಮೊಸರಿಗೆ ನೀರು, ಸಿಹಿ ಹಣ್ಣುಗಳ ರಸ, ಕಲ್ಲುಸಕ್ಕರೆ ಮುಂತಾದುವನ್ನು ಬೆರಸಿ ಲಸ್ಸೀ ತಯಾರಿಸಿ ಕುಡಿಯುವುದರಿಂದ ಹೊಟ್ಟೆಯ ಬಾಧೆ ಶಮನಗೊಳ್ಳುವುದಲ್ಲದೆ ಉರಿಗಾಳಿಯಿಂದಲೂ ಉಳಿಸುತ್ತದೆ. ಮೊಸರಿಗೆ, ಬಾದಾಮಿ, ಒಣದ್ರಾಕ್ಷಿ, ಮೆಣಸಿನಕಾಳು, ಉತ್ತುತ್ತಿ, ಒಣಹಣ್ಣು ಸೇರಿಸಿ ಉಪಯೋಗಿಸುವುದರಿಂದ ಶರೀರದ ತೂಕ ಹೆಚ್ಚುತ್ತದೆ.

ಅತಿಸಾರ (ಆಮಶಂಕೆ)ಕ್ಕೆ ಮೊಸರಿಗೆ ಈಸಬ್‌ಗುಳಿಗೆಯ ಭಸ್ಮವನ್ನು ಸೇರಿಸಿ ಕುಡಿಯುವುದರಿಂದ ಲಾಭಕರ. ಹೊಟ್ಟೆಯ ಸುಲಿತ ಮತ್ತು ಆಮಾಂಶದಿಂದ

ಕೂಡಿ ಭೇದಿಯಾದರೆ ಮೊಸರಿಗೆ ಇಲ್ಲವೇ ಮಜ್ಜಿಗೆಗೆ ಮಾವಿನ ಓಟೆಯನ್ನು ಉಜ್ಜಿ ಕುಡಿಯುವುದರಿಂದ ಹಿತವಲ್ಲದೆ ಉಪಯೋಗವೂ ಹೌದು.

ಮಲಬದ್ಧತೆಯಲ್ಲಿ ಮೊಸರಿಗೆ ಅಜವೈನ್ ಸೇರಿಸಿ ಕುಡಿಯುವುದರಿಂದ ಮಲಬದ್ಧತೆ ದೂರವಾಗುವುದಲ್ಲದೆ ಹೊಟ್ಟೆಯೂ ಸ್ವಚ್ಛವಾಗುತ್ತದೆ.

ಅಪಚ, ಅಜೀರ್ಣ, ಹೊಟ್ಟೆಉಬ್ಬುವಿಕೆ ಮುಂತಾದವುಗಳಲ್ಲಿ ಮೊಸರನ್ನು ಲಸ್ಸಿಯಾಗಿಮಾಡಿ ಅದರಲ್ಲಿ ಜೀರಿಗೆ, ಕಪ್ಪುಮೆಣಸು, ಉಪ್ಪು ಸೇವಿಸಿ ಕುಡಿಯುವುದರಿಂದ ಪ್ರಯೋಜನ ಉಂಟು.

ಕಣ್ಣುಗಳಲ್ಲಿನ ಉರಿ ಮತ್ತು ನೀರಿಳಿಯುವಿಕೆ ದೂರಮಾಡಲು ಮೊಸರಿನ (ಅರಿದಕೆನೆ) ತಂಪಾದಕೆನೆ ಕಣ್ಣುಗಳ ಮೇಲೆ ಹಚ್ಚುವುದರಿಂದ ತೃಪ್ತಿಯಾಗುತ್ತದೆ.

ಮೊಸರನ್ನು ಕಡೆದು ಸಿಹಿಯಾಗಿಸಿ ಅದರೊಂದಿಗೆ ಐದು ತೊಟ್ಟು (ಹನಿ) ಶುಂಠಿಯರಸ ಇಲ್ಲವೇ ಚೂರ್ಣವನ್ನು ಸೇರಿಸಿ ಪ್ರತಿದಿನ ಕುಡಿಯುವುದರಿಂದ ಸ್ತ್ರೀಯರಿಗೆ ಸೊಂಟನೋವಿನಿಂದ ಬಿಡುಗಡೆ ಸಿಗುತ್ತದೆ.

ಭಂಗಿಯ ನಶೆ ಇಳಿಸಲು ಮೊಸರನ್ನು ಕುಡಿಸಿ. ಮೊಸರು ಇಲ್ಲವೇ ಬೆಣ್ಣೆ ತೆಗೆದ ಮಜ್ಜಿಗೆಗೆ ಸ್ವಲ್ಪ ಅರಿಶಿನ ಸೇರಿಸಿ ಕಾಮಾಲೆ ರೋಗಿಗಳಿಗೆ ದಿನಕ್ಕೆ ಹಲವು ಬಾರಿ ಕುಡಿಸುವುದರಿಂದ ಲಾಭ ಉಂಟು.

ಮೊಸರು ಬಾಯಿಯ ಬೊಬ್ಬೆಯುರಿಯನ್ನು ಶಮನಗೊಳಿಸುತ್ತದೆ. ಮೊಸರಿನ ಕೆನೆಯನ್ನು ಆ ಬೊಬ್ಬೆಗಳಿಗೆ ಸವರುವುದರಿಂದ ಉರಿ ಶಾಂತವಾಗುತ್ತದೆ. ದಿನನಿತ್ಯ ಹಲವು ಸಲ ಹೀಗೆ ಮಾಡುವುದರಿಂದ ಸರಿಹೋಗುತ್ತದೆ.

ಮೊಸರಿನಿಂದ ತೆಗೆದ ಬೆಣ್ಣೆಯಲ್ಲಿ ಸ್ವಲ್ಪ ಕರ್ಪೂರ ಸೇರಿಸಿ ಹಣೆಯ ಮೇಲೆ ಲೇಪಿಸುವುದರಿಂದ ಇದ್ದಕ್ಕಿದ್ದಂತೆ ಮೂಗಿನಿಂದ ರಕ್ತ ಸುರಿಯುವಿಕೆ ನಿಲ್ಲುತ್ತದೆ.

ಮೊಸರಿನ ಮರಬತ್ತಿಗೆ ಬೇವಿನ ಚಿಗುರುಗಳನ್ನು ಸೇರಿಸಿ ಅರೆದು ನರ–ನಾಡಿಗಳಿಗೆ ಹಚ್ಚುವುದರಿಂದ ಸರಿಯಾಗುತ್ತದೆ.

ಮೊಸರಿಗೆ ಜೇನುತುಪ್ಪಬೆರಸಿ ನೆಕ್ಕಿಸುವುದರಿಂದ, ಮಕ್ಕಳಿಗೆ ಹಲ್ಲುಬಂದಾಗ ನೆಮ್ಮದಿಯಾಗುತ್ತದೆ.

ಹಸುವಿನ ಮೊಸರಿನ ಮಜ್ಜಿಗೆ ಕುಡಿಯುವುದರಿಂದ ಮತ್ತು ಮೈಗೆ ಹಚ್ಚುವುದರಿಂದ ಪಿತ್ತ ಉಂಟಾಗುವುದರಿಂದ ಬಿಡುಗಡೆಯಾಗುತ್ತದೆ.

ಒಂದು ಪಾವು ಹಸುವಿನ ಹೊಸ ಮೊಸರಿಗೆ ಕಲ್ಲುಸಕ್ಕರೆ ಸೇರಿಸಿ ಕುಡಿಯುವುದರಿಂದ ಒಣಕೆಮ್ಮು, ನೆಗಡಿ ಬೇಗ ದೂರವಾಗುತ್ತದೆ.

ಮೊಸರಿನಿಂದ ಸೌಂದರ್ಯವರ್ಧಕ ಉಂಟೇ ?

ಆರೋಗ್ಯವರ್ಧಕವಲ್ಲದೆ, ಮೊಸರಿನ ಉಪಯೋಗ ಭಾರತದಲ್ಲಿ ಹಿಂದಿನಿಂದಲೂ ಸಹ ಸೌಂದರ್ಯ ಸಾಧನೆಗಾಗಿಯೇ ಬೇರೆ ಬೇರೆ ರೀತಿಯಲ್ಲಿ ಇದೆ. ಏಕೆಂದರೆ, ಇದು ಸ್ನಾಯುಗಳು ಹಾಗೂ ಚರ್ಮವನ್ನು ಪೌಷ್ಠಿಕಾರಕ ಅಂಶಗಳಿಂದ ಸುದೃಢಗೊಳಿಸುತ್ತದೆ. ಈಗ ವಿದೇಶಗಳಲ್ಲಿಯೂ ಕೂಡ ಇದನ್ನು ಶ್ರೇಷ್ಠ ಕ್ಲೀಂಸರ್ ರೂಪದಲ್ಲಿ, ಆರೋಗ್ಯ ಮತ್ತು ಸೌಂದರ್ಯಕ್ಕಾಗಿ ಒಪ್ಪಿಕೊಳ್ಳಲಾಗುತ್ತಿದೆ.

ಚರ್ಮ ಶುದ್ಧಿ ಮಾಡಲು ಮೊಸರು ವಿಶೇಷ ಗುಣಕಾರಿ. ಮೊಸರಿಗೆ ಕಡಲೆ ಹಿಟ್ಟು ಬೆರಸಿ ಹಚ್ಚುವುದರಿಂದ ಚರ್ಮ ಶುದ್ಧಿಯಾಗುತ್ತದೆ, ಮಡಿಬಕ್ಕೆಗಳು ಗುಣವಾಗುತ್ತವೆ. ರೋಮದ ಛಿದ್ರಕೂಪಗಳಿಗೆ ಜಿಡ್ಡು ಸಿಗುತ್ತದಲ್ಲದೆ ಚರ್ಮ ಮೃದುವಾಗಿರುತ್ತದೆ. ಇನ್ನು ಮುಖದ ಬಣ್ಣ ನಿಜಕ್ಕೂ ಕಾಂತಿಯುಕ್ತವಾಗುತ್ತದೆ.

ಮೊಸರಿಗೆ ಹಿಟ್ಟಿನ ಹೊಟ್ಟು ಬೆರಸಿಟ್ಟು ಸ್ವಲ್ಪ ಹೊತ್ತಿನ ನಂತರ ಮೃದುವಾದ ಮೇಲೆ ಚರ್ಮದ ಮೇಲೆ ಹಚ್ಚಿ. ಇದರಿಂದ ಚರ್ಮ ಸ್ವಚ್ಛಗೊಳ್ಳುತ್ತದೆ. ಹೀಗೆ ಹಚ್ಚುವುದರಿಂದ "ಸಿ" ಮತ್ತು "ಈ" ಅನ್ನಾಂಗ ಸಿಗುವುದಲ್ಲದೆ ಇದು ಆರೋಗ್ಯವರ್ಧಕವೂ ಹೌದು.

ಕಡ್ಲೆಬೇಳೆಯನ್ನು ಮೊಸರಿನಲ್ಲಿ ನೆನಸಿ ರಾತ್ರಿಯಿಡೀ ಇಡಿ. ಬೆಳಿಗ್ಗೆ ಅದನ್ನು ಅರೆದು ಅದಕ್ಕೆ ಸ್ವಲ್ಪ ಬೆಣ್ಣೆ ಮತ್ತು ಅರಿಸಿನ ಸೇರಿಸಿ ಲೇಪನಮಾಡಿ. ಇದನ್ನು ನಿಯಮಪೂರ್ವಕವಾಗಿ ಉಪಯೋಗಿಸುವುದರಿಂದ ಚರ್ಮದಲ್ಲಿ ಲಾವಣ್ಯ, ಹೊಳಪು ಮತ್ತು ಸ್ನಿಗ್ಧತೆಯುಂಟಾಗುತ್ತದೆ. ಚರ್ಮದ ಬಣ್ಣವೂ ಸ್ವಚ್ಛವಾಗುತ್ತದೆ.

ಮೊಸರಿಗೆ ಜವೆಗೋಧಿ ಹಿಟ್ಟನ್ನು ಬೆರಸಿ ಮುಖಕ್ಕೆ ಹಚ್ಚಿಕೊಳ್ಳಿ. ೧೦–೧೫ ನಿಮಿಷಗಳ ನಂತರ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದು ಚರ್ಮವನ್ನು ಬೆಳ್ಳಗೂ ಮತ್ತು ಮೃದುವಾಗಿಯೂ ಮಾಡಬಲ್ಲದು.

ಮೊಸರಿಗೆ ಅಕ್ಕಿಹಿಟ್ಟನ್ನು ಸೇರಿಸಿ ಚೆನ್ನಾಗಿ ಆಡಿಸಿ. ಇದೊಂದು ಉತ್ತಮ ಕ್ಲೀಂಸರ್. ಇದನ್ನು ಕುತ್ತಿಗೆ, ತೋಳುಗಳು, ಮುಂಡಿ, ಅಂಗಾಲು ಮತ್ತು ಶರೀರದ ಎಲ್ಲ ಅಂಗಗಳಿಗೂ ಹಚ್ಚಿಕೊಳ್ಳಬಹುದು. ಸಾಮಾನ್ಯ ಮತ್ತು ಒಣಗಿದ ಚರ್ಮಕ್ಕೆ ಇದೊಂದು ಬಹು ಲಾಭದಾಯಕ ಮಾರ್ಗ.

ಮೊಸರಿಗೆ ಮೋಸಂಬಿ ಇಲ್ಲವೇ ನಿಂಬೆರಸವನ್ನು ಸೇರಿಸಿ ಕ್ಲೀಂಸರ್ ರೂಪದಲ್ಲಿ ಉಪಯೋಗಿಸಿದರೆ, ಇದು ಚರ್ಮಕ್ಕೆ ಬಹಳಷ್ಟು ಪೋಷಕಾಂಶಗಳನ್ನು ಕೊಡುತ್ತದೆ. ಮುಖದ ಬಣ್ಣವನ್ನು ಸ್ವಚ್ಛಗೊಳಿಸಿ ಕಾಂತಿ ಹೆಚ್ಚಿಸುವುದು.

ಆರೋಗ್ಯಶಾಲಿ ಕೂದಲಿಗೆ ಬೇಕಾದ ಎಲ್ಲ ಗುಣಗಳೂ ಇರುವುದರಿಂದ ಮೊಸರಿನ ಉಪಯೋಗ ಬಹಳವಾಗಿರುತ್ತದೆ.

ಮೂರ್ತಿ ರಾಮನಾಥಪುರ



ಯಾರನ್ನೂ ಬಿರುಸುನುಡಿಯಿಂದ ನೋಯಿಸದಿರು. ನೀನು ನುಡಿದದ್ದನ್ನು ಅವರು ಮರು ನುಡಿದಾರು. ಸಿಟ್ಟಿನ ಮಾತುಗಳು ದುಃಖಕರ. ದಂಡ ಪ್ರತಿ ದಂಡವನ್ನು ತಂದೇತರುತ್ತದೆ.

—ಗೌತಮ ಬುದ್ಧ

ಯಾರಿಗೆ ಸ್ವತಃ ಬುದ್ಧಿಯಿಲ್ಲವೋ ಅಂತವನಿಗೆ ಶಾಸ್ತ್ರವೇನು ಒಳ್ಳೆಯದು ಮಾಡಬಲ್ಲದು ? ಎರಡೂ ಕಣ್ಣುಗಳಿಲ್ಲದವನಿಗೆ ಕನ್ನಡಿಯಿಂದೇನು ಕೆಲಸ ವಾಗುವುದು ?

—ಸುಭಾಷಿತ

ನೆಗಡಿ ಮತ್ತು ಜೀವಸತ್ತ್ವ ಸಿ*

ಜೀವಸತ್ತ್ವ ಸಿಯ ಸೇವನೆಯಿಂದ ನೆಗಡಿ ನಿವಾರಣೆ ಸಾಧ್ಯವೇ?

ಕಫಶ್ಚಿತೋಹಿ ಶಿಶಿರೇ ವಸಂತೇರ್ಕ ತಾಪಿತಃ

ಇತ್ಯಾದಿಯಾಗಿ ಆಯುರ್ವೇದದಲ್ಲಿ ಒಂದು ಶ್ಲೋಕ ಇದೆ. ಅರ್ಥ ಇಷ್ಟು: ಶಿಶಿರ ಋತುವಿನಲ್ಲಿ (ಸಾಮಾನ್ಯವಾಗಿ ಜನವರಿ ಫೆಬ್ರುವರಿ—ಈ ತಿಂಗಳುಗಳ ಚಳಿಯಿಂದಾಗಿ) ದೇಹದಲ್ಲಿ ಕಫ ಕಟ್ಟಿಕೊಳ್ಳುತ್ತದೆ. ವಸಂತಋತುವಿನಲ್ಲಿ (ಸಾಮಾನ್ಯವಾಗಿ ಮಾರ್ಚ್ ಏಪ್ರಿಲ್—ಈ ತಿಂಗಳುಗಳ ಸೂರ್ಯನ ಪ್ರಖರತೆಯಿಂದಾಗಿ) ಅದು ಕರಗಿ ದೇಹದಲ್ಲಿ ಶೈತ್ಯವನ್ನುಂಟುಮಾಡಿ, ಜೀರ್ಣಶಕ್ತಿಯನ್ನು ನಾಶಮಾಡಿ ಇನ್ನೂ ಅನೇಕ ರೋಗಗಳಿಗೆ ಎಡೆ ಮಾಡಿಕೊಡುತ್ತದೆ. ಆದ್ದರಿಂದ ಯುಕ್ತ ಋತುಚರ್ಯೆ ಔಷಧಗಳ ಮೂಲಕ ಈ ಪರಿಸ್ಥಿತಿಯನ್ನು ಶೀಘ್ರವಾಗಿ ಜಯಿಸಬೇಕು ಎಂದು. ಈ ಸಲಹೆ ಬಹು ಹಿಂದಿನದೇ ಆಗಿದ್ದರೂ ಇಂದೂ ಜನ ಈ ಋತುವಿನಲ್ಲಿ ಮತ್ತಿತರ ವೇಳೆ ಜನ "ಶೀತರೋಗ"ಗಳಾದ ನೆಗಡಿ ಕೆಮ್ಮು ಇತ್ಯಾದಿಗಳಿಂದ ಬಾಧಿತರಾಗಿರುವುದು ಸಾಮಾನ್ಯವಾಗಿಯೇ ಇದೆ. ಜನತೆಯಲ್ಲಿ ಮುಕ್ಕಾಲುಪಾಲು ವರ್ಷದಲ್ಲಿ ೨–೩ ಬಾರಿಯಾದರೂ ಹೀಗೆ ಗಂಟಲು ಕೆರೆತ, ಗಂಟಲು ನೋವು, ಗಂಟಲು ಕಟ್ಟುವಿಕೆ, ನೆಗಡಿ, ಕೆಮ್ಮು ಇತ್ಯಾದಿಗಳಿಂದ ನರಳುವುದು ನಿಜ. ಪ್ರತಿ ಸಲವೂ ವ್ಯಕ್ತಿ ಹತ್ತಾರು ದಿನ ಹಿಂಸೆ ಪಡುವುದಿದೆ. ಮನೆಯಲ್ಲಿ ಒಬ್ಬರಿಗೆ "ಶೀತ" ಆದರೆ ಅದರು ಪದೇ ಪದೇ ಶೀನುತ್ತಾರಲ್ಲವೆ? ಅದರಿಂದಾಗಿ ಅವರ ಹತ್ತಿರ ಸುಳಿದಾಡಿದರೂ ಸಾಕು ಬೇರೆಯವರೂ ನೆಗಡಿ ಇತ್ಯಾದಿಗಳಿಗೆ ತುತ್ತಾಗುವುದು ಸಾಧಾರಣವಾಗಿ ಎಲ್ಲರಿಗೂ ಗೊತ್ತಿರುವ ವಿಷಯ. ಅದು ಅಷ್ಟುಮಟ್ಟಿನ ಅಂಟು ರೋಗವಾಗಿರುವುದು ವೈಜ್ಞಾನಿಕವಾಗಿಯೂ ಸ್ಥಿರಪಟ್ಟಿದೆ.

ನೆಗಡಿಗೆ ರಾಮಬಾಣ ಎನ್ನಿಸುವ ಔಷಧ ಇನ್ನೂ ಪತ್ತೆಯಾಗಿಲ್ಲ. ಭಾರತದಲ್ಲಿ ರೋಗ ಚಿಕಿತ್ಸೆಗೆ ಆಯುರ್ವೇದ ಮಾತ್ರ ಇದ್ದ ಕಾಲದಲ್ಲೂ ಇಂಥ ಶೀತ ರೋಗಗಳಿಗೆ ಏನೇನೋ ಔಷಧಗಳು ಇದ್ದುವು. ಅನುಭವದಿಂದ ಅನುಕೂಲವೆನಿಸಿದ ಮನೆ ಅಜ್ಜಮ್ಮನ ಕಷಾಯ ಚೂರ್ಣಗಳೂ ಆಗಿನಿಂದ ತಹಲ್‌ವರೆಗೂ ಬಳಸಲ್ಪಡುತ್ತವೆ. ಪಾಶ್ಚಾತ್ಯ ವೈದ್ಯದಲ್ಲಂತೂ ಕಾಲಕಾಲಕ್ಕೆ ಬೇರೆ ಬೇರೆ

---

* ಸಾಧಾರ

ಔಷಧಗಳು ಹಿಂದಿನವಕ್ಕಿಂತ ಉತ್ತಮ ಎಂದು ಪ್ರಚಾರ ಮಾಡಲ್ಪಡುತ್ತಲೇ ಇದ್ದು ಹತ್ತಾರು ಬಗೆ ಔಷಧಗಳು ಬಳಕೆಯಲ್ಲಿವೆ. ಆದರೂ ಒಟ್ಟಿನಲ್ಲಿ ಶೀತ ನೆಗಡಿಗಳ ಹಾವಳಿ ಬಹು ಕಾಲದ ಹಿಂದೆ ಹೇಗಿತ್ತೋ ಇಂದೂ ಹಾಗೆಯೇ ಇದೆ. ಆಡಿಕೊಳ್ಳುವುದುಂಟು; ನೆಗಡಿಗೆ ಚಿಕಿತ್ಸೆ ಮಾಡಿದರೆ ಅದು ಎರಡು ವಾರ ಗಳಲ್ಲಿ ವಾಸಿ ಆಗುತ್ತದೆ; ಚಿಕಿತ್ಸೆ ಮಾಡದಿದ್ದರೆ ಅದು ಹದಿನೈದು ದಿನಗಳಲ್ಲಿ ಗುಣವಾಗುತ್ತದೆ ಎಂದು. ಔಷಧ ಚಿಕಿತ್ಸೆಗಿಂತ ರೋಗವೇ ಬಾರದಂತೆ ರಕ್ಷಣೆ ಪಡೆಯುವುದು ಒಳ್ಳೆಯದು ಎಂಬ ಭಾವನೆ ಪಾಶ್ಚಾತ್ಯ ವೈದ್ಯಕೀಯದಲ್ಲಿ ಬೆಳೆದುಬಂದಮೇಲೂ ನೆಗಡಿಯ ವಿಷಯದಲ್ಲಿ ನಿಸ್ಸಹಾಯಕಸ್ಥಿತಿಯೇ ಉಳಿದು ಬಂದಿದೆ. ಕಾರಣ ನೆಗಡಿಗೆ ಯುಕ್ತ ಪ್ರತಿರೋಧಕ ಲಸಿಕೆ ದೊರೆತಿಲ್ಲ. ಇದು ಏಕೆಂದರೆ ನೆಗಡಿ ಒಂದೇ ಬಗೆಯ ವಿಷಾಣುವಿನ ಸೋಂಕಿನಿಂದ ಮಾತ್ರ ಉಂಟಾಗುವುದಿಲ್ಲ. ಅದೇ ಗುಂಪಿಗೆ ಸೇರಿದ ವಿವಿಧ ಬಗೆ ವಿಷಾಣುಗಳು ವಿವಿಧ ಕಾಲಗಳಲ್ಲಿ ನೆಗಡಿ ಉಂಟುಮಾಡುವುದರಿಂದ ಸಾರ್ವತ್ರಿಕ ಲಸಿಕೆಯ ತಯಾರಿ ಸಾಧ್ಯವಾಗಿಲ್ಲ.

ಪರಿಸ್ಥಿತಿ ಹೀಗಿರುವಾಗ ಸುಮಾರು ೧೯೭೦ರಲ್ಲಿ ಒಂದು ಆಶಾಕಿರಣ ಮೂಡಿತು....ದಿನಕ್ಕೆ ಒಂದು ಗ್ರಾಮ್‌ನಷ್ಟು "ಜೀವಸತ್ತ್ವ ಸಿ"ಯನ್ನು ಸೇವಿಸುತ್ತಿದ್ದರೆ ನೆಗಡಿಯ ಹಾವಳಿಯಿಂದ ತಕ್ಕಮಟ್ಟಿಗೆ ರಕ್ಷಣೆ ಪಡೆಯ ಬಹುದು ಎಂದು ಪ್ರಸಿದ್ಧ ವಿಜ್ಞಾನಿ ಹಾಗೂ ನೊಬೆಲ್ ಪಾರಿತೋಷಕ ವಿಜೇತ ಅಮೆರಿಕದ ಡಾ॥ ಲೈನಸ್ ಪೌಲಿಂಗ್ ಪ್ರಚಾರ ಮಾಡಿದ. ವೈದ್ಯರು ದಿನನಿತ್ಯದ ಆವಶ್ಯಕತೆಗೆಂದು ವಿಧಿಸಿದ್ದ ೬೦ ಮಿ. ಗ್ರಾಂ ಪ್ರಮಾಣಕ್ಕಿಂತ ಸುಮಾರು ೧೭ ಪಟ್ಟು ಹೆಚ್ಚಾಗಿ ಜೀವಸತ್ತ್ವ ಸಿಯನ್ನು ಜನ ಸೇವಿಸಲು ಪ್ರಾರಂಭಿಸಿದರೆ ಹತ್ತಾರು ವರ್ಷಗಳಲ್ಲಿ ಈ ಶೀತ ಬಾಧೆಯೇ ಮಾಯವಾಗು ತ್ತದೆ ಎಂದು ತಾನು ರಚಿಸಿದ ಒಂದು ಗ್ರಂಥದಲ್ಲಿ ಸಾರಿದ. ಪೌಲಿಂಗ್ ಕೇವಲ ರಸಾಯನ ವಿಜ್ಞಾನಿ. ವೈದ್ಯನಲ್ಲ. ಎಷ್ಟೇ ಶ್ರೇಷ್ಠ ದರ್ಜೆಯ ವಿಜ್ಞಾನಿ ಆಗಿದ್ದರೂ ಈತ ಒಂದು ರೋಗದ ವಿಷಯದಲ್ಲಿ ಇಷ್ಟು ರಾಜಾರೋಷ ವಾಗಿ ಹೊಸದಾದ ಒಂದು ಹೇಳಿಕೆ ಕೊಡುವುದು ಮಿಕ್ಕ ವಿಜ್ಞಾನಿಗಳಿಗೆ ಮುಖ್ಯವಾಗಿ ವೈದ್ಯರುಗಳಿಗೆ ಒಪ್ಪಿಗೆ ಆಗಲಿಲ್ಲ. ಪೌಲಿಂಗನ ವಿಚಾರ ಸರಣಿಯ ತಥ್ಯವನ್ನು ಹೊರಗೆಡಹಬೇಕೆಂದು ಅನೇಕ ವೈದ್ಯರು ಟೊಂಕ ಕಟ್ಟಿದರು. ಅವರಲ್ಲಿ ಕೆನಡಾ ದೇಶದ ವೈದ್ಯ ಡಾ॥ ಟೆರೆನ್ಸ್ ಆಂಡರ್‌ಸನ್ ಎಂಬಾತ ಒಬ್ಬ.

ತಮ್ಮ ಮೇಲೆ ಪ್ರಯೋಗ ಜರುಗಿಸಬಹುದೆಂದು ತಾವಾಗಿಯೇ ಒಪ್ಪಿ ಮುಂದೆ ಬಂದ ಒಂದು ಸಾವಿರ ಜನರ ಮೇಲೆ ಆಂಡರ್‌ಸನ್ ೧೯೭೧-೭೨ರ ಚಳಿಗಾಲದಲ್ಲಿ ಪ್ರಯೋಗವ್ಯಾಸಂಗ ಜರಗಿಸಿದ. ಇವರಲ್ಲಿ ೫೦೦ ಜನಕ್ಕೆ ಮಾತ್ರ ದಿನ ದಿನವೂ ಒಂದು ಗ್ರಾಮ್ ಜೀವಸತ್ತ್ವ ಸಿ ಇರುವ ಮಾತ್ರೆಯನ್ನು ಕೊಡಲಾಗುತ್ತಿತ್ತು. ಮಿಕ್ಕ ೫೦೦ ಜನಕ್ಕೆ ಎಲ್ಲ ರೀತಿಯಲ್ಲೂ ಈ ಮಾತ್ರೆಯನ್ನೇ ಹೋಲುವ ಬೇರೆ ನಿರುಪಾಧಿಕ ವಸ್ತುವಿನ ಮಾತ್ರೆಯನ್ನು (Placebo) ಕೊಡಲಾಗುತ್ತಿತ್ತು. ಈ ಎರಡೂ ಗುಂಪುಗಳಲ್ಲಿ ಯಾರಿಗಾದರೂ ಯಾವಾಗಲಾದರೂ ನೆಗಡಿಯೋ ಇನ್ನು ಯಾವ ವ್ಯಾಧಿಯೋ ಬಂದರೆ ಆ ಮೊದಲು ಮೂರು ದಿನಗಳ ಪರ್ಯಂತ ಅವರಿಗೆ ದಿನಕ್ಕೆ ನಾಲ್ಕು ಮಾತ್ರೆಗಳನ್ನು, ಅರ್ಥಾತ್ ೪ ಗ್ರಾಮ್ ವಸ್ತುವನ್ನು ನೀಡಲಾಗುತ್ತಿತ್ತು. ಇವರಲ್ಲಿ ಯಾರು ನಿಜವಾಗಿ ಜೀವಸತ್ತ್ವ ಸಿಯನ್ನು ಸೇವಿಸುತ್ತಿದ್ದರು. ಯಾರು ನಕಲಿ ಜೀವಸತ್ತ್ವ ಸಿಯನ್ನು ಸೇವಿಸುತ್ತಿದ್ದರು ಎನ್ನುವುದು ಪ್ರಯೋಗಗಳಿಗಾಗಲಿ, ಪ್ರಯೋಗ ನಡೆಸುತ್ತಿರುವವರಿಗಾಗಲಿ ಗೊತ್ತಾಗದಂತೆ ಮತ್ತು ಎಲ್ಲ ದಾಖಲೆಗಳೂ ಕೇವಲ ಯಾಂತ್ರಿಕವಾಗಿ ಗುರುತು ಮಾಡಲ್ಪಡುವಂತೆ ಕಟ್ಟುನಿಟ್ಟಾದ ಏರ್ಪಾಡು ಇತ್ತು. ಇದರಿಂದ ಪ್ರಯೋಗ ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನವಾಗುವಂತೆ ಕೈಚಳಕ ಮಾಡಿದರೆಂಬ ದೂಷಣೆಯನ್ನು ಡಾ|| ಆಂಡರ್‌ಸನ್ ಮತ್ತು ಸಹಾಯಕರು ತಪ್ಪಿಸಿಕೊಳ್ಳುವಂತಾಯಿತು. ಇಂಥ ವ್ಯಾಸಂಗಕ್ಕೆ ಇಬ್ಬದಿ ಅಂಧಕ್ರಮ (Double blind method) ಎಂದು ಹೆಸರು.

ಪ್ರಯೋಗಾನಂತರ ವ್ಯಕ್ತಿ ಮಾತ್ರೆಗಳಿಗೆ ಅನುಸಾರವಾಗಿ ಫಲಿತಾಂಶಗಳನ್ನು ಹೊಂದಿಸಿ ನೋಡಲಾಗಿ ವ್ಯಕ್ತವಾದ ಮಾಹಿತಿಗಳು ಇವು: ನಿಜವಾದ ಜೀವಸತ್ತ್ವ ಸಿಯನ್ನು ಸೇವಿಸುತ್ತಿದ್ದ ವ್ಯಕ್ತಿಗಳಲ್ಲಿ ಶೇಕಡಾ ೨೬ ಮಂದಿ ಪ್ರಯೋಗ ಕಾಲ ಪೂರ್ತ ಪೂರ್ಣಾರೋಗ್ಯದಿಂದ ಇದ್ದರು. ನಕಲಿ ಜೀವಸತ್ತ್ವವನ್ನು ಸೇವಿಸುತ್ತಿದ್ದವರಲ್ಲಿ ಶೇಕಡಾ ೧೮ ಮಂದಿ ಆರೋಗ್ಯವಾಗಿ ಇದ್ದರು. ಪ್ರಯೋಗ ಕಾಲದಲ್ಲಿ ಯಾವುದೇ ರೋಗದಿಂದ ಅಲ್ಪವಾಗಿ ನರಳಿದವರು ಇಲ್ಲವೇ ಹಾಸಿಗೆ ಹತ್ತುವಷ್ಟೇ ತೀವ್ರವಾದ ರೋಗ ಬಂದವರು ಮಿಕ್ಕವರು. ಇಂಥವರಲ್ಲಿ ಜೀವಸತ್ತ್ವ ಸಿ ಸೇವಿಸುತ್ತಿದ್ದ ಗುಂಪಿನವರು ನಕಲಿ ಮಾತ್ರೆಯನ್ನು ಸೇವಿಸುತ್ತಿದ್ದವರಿಗಿಂತ ಸರಾಸರಿ ಮೂರನೆ ಒಂದರಷ್ಟು ಕಾಲ ಕಡಿಮೆ ದಿನಗಳು ನರಳಿದರು. ಇವೇನೂ ಅಂಥ ಗಣನೀಯ ವ್ಯತ್ಯಾಸಗಳೆಂದು ಭಾವಿಸುವುದಕ್ಕಾಗುವುದಿಲ್ಲ. ಆಂಡರ್‌ಸನ್ನನ ಗುಂಪಿನವರಲ್ಲದೆ ಬೇರೆ ವೈದ್ಯತಂಡಗಳು ಜರಗಿಸಿದ

ವ್ಯಾಸಂಗಗಳಲ್ಲೂ ಜೀವಸತ್ತ್ವ ಸಿಯ ಅಧಿಕ ಪ್ರಮಾಣದ ಬಳಕೆಯಿಂದ ಗಣನೀಯ ಅನುಕೂಲ ಇದೆ ಎನ್ನುವ ಅಂಶ ಖಚಿತವಾಗಲಿಲ್ಲ. ಆದರೆ ಡಾ॥ ಆಂಡರ್‌ಸನ್ ಸ್ವಲ್ಪ ಮಟ್ಟಿಗಾದರೂ ಅನುಕೂಲವಿರುವುದು ನಿಜ ಎಂದು ಒಪ್ಪಿಕೊಂಡ. ಬಹುಶಃ ಜೀವಸತ್ತ್ವ ಸಿ ಯಾವುದೋ ರೋಗದಲ್ಲಿಯೂ (ಸ್ಕರ್ವಿಯನ್ನು ಬಿಟ್ಟು) ವಿಶಿಷ್ಟ ಔಷಧವಾಗಿ ವರ್ತಿಸಲಾರದು; ಆದರೆ ಒಟ್ಟಿನಲ್ಲಿ ಬಹು ವಿಧವಾದ ರೋಗಗಳಲ್ಲಿ ಅದು ಆನುಷಂಗಿಕ ಔಷಧದಂತೆ ವರ್ತಿಸಿ ಅನುಕೂಲಕರವಾಗಿರುತ್ತದೆ ಎನ್ನುವುದು ಒಪ್ಪಬೇಕಾದ ಅಂಶ ಎಂದು ಹೇಳಿದ.

ಜೀವಸತ್ತ್ವ ಸಿ ಮಾಮೂಲಾಗಿ ನಮ್ಮ ದೇಹದಲ್ಲಿ ಕೆಲವು ಐನು ಸ್ಥಳಗಳಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ಆಡ್‌ರೀನಲ್ ಗ್ರಂಥಿಗಳು ದಿನನಿತ್ಯದ ಹತ್ತಾರು ಉದ್ರೇಕಕಾರಕ ಇಲ್ಲವೇ ವಿಷಮ ಪ್ರಸಂಗಗಳಲ್ಲಿ ಹಾರ್ಮೋನುಗಳನ್ನು ಹೆಚ್ಚಿಗೆ ಸ್ರವಿಸಿ ವ್ಯಕ್ತಿ ಅಂಥ ಪ್ರಸಂಗಗಳಿಂದ ಹೇಗೋ ನಿಭಾಯಿಸಿಕೊಳ್ಳಲು ಸಹಾಯ ಮಾಡುತ್ತವೆ. ಈ ಗ್ರಂಥಿಗಳ ಕಾರ್ಯಾಚರಣೆಗೆ ಜೀವಸತ್ತ್ವ ಸಿ ಬೇಕು. ಆಕಸ್ಮಿಕ ಅಪಘಾತ ಶಸ್ತ್ರಕ್ರಿಯೆ ಇತ್ಯಾದಿ ಸಂದರ್ಭಗಳಲ್ಲಿ ಗಾಯವಾಗಿರುವಾಗ ಅದು ಸಹಜ ಶೀಘ್ರತೆಯಿಂದ ವಾಸಿ ಆಗಬೇಕಾದರೆ ಅಗತ್ಯವಾಗಿರುವ ಕೊಲ್ಲಾಜೆನ್ ಎಂಬ ವಸ್ತು ದೇಹದಲ್ಲಿ ತಯಾರಾಗಲು ಜೀವಸತ್ತ್ವ ಸಿ ಬೇಕು. ರಕ್ತದಲ್ಲಿ ಕೆಂಪು ರಕ್ತಕಣಗಳೂ ವರ್ಣರಹಿತಕಣಗಳೂ ಇರುವುದು ಸರಿಯಷ್ಟೆ. ಅಂತೆಯೇ ಸೋಂಕಿನಿಂದ ದೇಹದ ಒಳಹೊಕ್ಕ ವಿಷಾಣುಗಳನ್ನು ಈ ವರ್ಣರಹಿತ ಕಣಗಳು ಕಬಳಿಸಿ ನಮ್ಮನ್ನು ರಕ್ಷಿಸುವುದೂ ಸರಿಯಷ್ಟೆ. ಈ ಕಣಗಳ ಕಾರ್ಯಾಚರಣೆಗೂ ಜೀವಸತ್ತ್ವ ಸಿ ಅಗತ್ಯ. ದೇಹದಲ್ಲಿ ವಿಷಮ ಪದಾರ್ಥಗಳನ್ನು ನಿರುಪದ್ರವಿಗಳಾಗಿ ಮಾರ್ಪಡಿಸುವ ಯಕೃತ್ತಿನ ಕಾರ್ಯಾಚರಣೆಗೆ ಕೂಡ ಇದು ಅವಶ್ಯಕ. ಹೀಗೆ ಜೀವಸತ್ತ್ವ ಸಿ ನಾನಾ ವಿಧವಾದ ದೇಹರಕ್ಷಕ ಕ್ರಿಯೆಗಳಲ್ಲಿ ಪಾಲುಗೊಳ್ಳುವುದರಿಂದ ನೆಗಡಿ ಮುಂತಾದ ಸೋಂಕಿನ ಸಂದರ್ಭಗಳಲ್ಲಿಯೂ ಪೆಟ್ಟುಮೇಲಿಗಾಯ, ದೇಹ ವಿಷಮತೆ ಮುಂತಾದ ಸಂದರ್ಭಗಳಲ್ಲೂ ಅದರ ಅಗತ್ಯ ಹೆಚ್ಚಾಗುತ್ತದೆ ಮತ್ತು ಈ ಹೆಚ್ಚುವರಿಯ ಪೂರೈಕೆಯಿಂದ ಅನುಕೂಲವಾಗುತ್ತದೆ ಎಂದು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ. ಹೀಗೆಂದು ಆಂಡರ್‌ಸನ್ ವ್ಯಕ್ತಪಡಿಸಿದ.

ವಿಶೇಷವೆಂದರೆ ಇಷ್ಟೆಲ್ಲ ಸಂದರ್ಭಗಳಲ್ಲಿ (ಮತ್ತು ಮೇಲೆ ವಿವರಿಸಿರದೆ ಇರುವ ಇನ್ನೂ ಕೆಲವು ಸಂದರ್ಭಗಳಲ್ಲಿ) ಬೇಕಾಗುವ ಜೀವಸತ್ತ್ವ ಸಿ ನಮ್ಮ ದೇಹದಲ್ಲಿ ತಯಾರಾಗದ ವಸ್ತು; ಆಹಾರದ ಮೂಲಕವೇ ಒದಗಬೇಕಾದ ಒಂದು

ಅನ್ನಸತ್ತ್ವ. ನಮ್ಮ ಹಾಗೆಯೇ ಕಪಿಗಳಲ್ಲೂ ಗಿನಿಹಂದಿಯಲ್ಲೂ ರಾಸಾಯನಿಕವಾಗಿ ಎಸ್ಕಾರ್ಬಿಕ್ ಆಮ್ಲ ಎಂದು ಹೆಸರಿರುವ ಈ ವಸ್ತು ಜೀವಸತ್ತ್ವವಾಗಿಯೇ ಇದೆ. ಅಂದರೆ ಅವುಗಳ ದೇಹದಲ್ಲೂ ಅದು ತಯಾರಾಗದೆ ಆಹಾರದ ಮೂಲಕವೇ ಪೂರೈಕೆ ಆಗಬೇಕಾಗಿದೆ. ಆದರೆ ಮಿಕ್ಕ ಪ್ರಾಣಿಗಳ ದೇಹದಲ್ಲಿ ಇದು ಸಹಜ. ದೇಹಕ್ರಿಯೆಯಾಗಿಯೇ ತಯಾರಾಗುವುದರಿಂದ ಆ ಪ್ರಾಣಿಗಳಲ್ಲಿ ಇದು ಜೀವಸತ್ತ್ವ ಅಲ್ಲ. ಇದರ ಕೊರತೆಯ ಸಂದರ್ಭಗಳು ಒದಗುವುದೂ ತೀರ ವಿರಳ. ಆ ಪ್ರಾಣಿಗಳಲ್ಲಿ ದಿನದಿನವೂ ದೇಹದಲ್ಲಿ ಎಷ್ಟು ಎಸ್ಕಾರ್ಬಿಕ್ ಆಮ್ಲ ತಯಾರಾಗುತ್ತದೆ ಎಂದು ತಿಳಿದು ದಾಮಾಷಾ ಮನುಷ್ಯದೇಹಕ್ಕೆ ಅನುಸರಿಸಿ (ತೂಕಹೋಲಿಕೆ) ಪೌಲಿಂಗ್ ಹೀಗೆ ಹೇಳಿದ: ದಿನಕ್ಕೆ ಒಬ್ಬ ವ್ಯಕ್ತಿಗೆ ೬೦ ಮಿ. ಗ್ರಾಮಿನಷ್ಟು, ಬಸರಿ ವ್ಯಕ್ತಿಗೆ ೮೦ ಮಿ. ಗ್ರಾಮ್, ಮಗುವಿಗೆ ಹಾಲೂಡಿಸುತ್ತಿರುವ ವ್ಯಕ್ತಿಗೆ ೧೦೦ ಮಿ ಗ್ರಾಮ್ ಎಸ್ಕಾರ್ಬಿಕ್ ಆಮ್ಲವನ್ನು ಪೂರೈಸಿದರೆ ಸಾಕು ಎಂದು ಇದುವರೆಗೆ (೧೯೭೦) ಇದ್ದ ಅಭಿಪ್ರಾಯ ತಪ್ಪು; ಇಷ್ಟು ಪ್ರಮಾಣ ಏನೇನೂ ಸಾಲದು ; ಮಿಕ್ಕ ಪ್ರಾಣಿಗಳ ದಾಮಾಶಾಪ್ರಮಾಣದಂತೆ ಮನುಷ್ಯ ವ್ಯಕ್ತಿಗೆ ದಿನದಿನವೂ ಸುಮಾರು ೨-೩ ಗ್ರಾಮ್‌ನಷ್ಟು ಎಸ್ಕಾರ್ಬಿಕ್ ಆಮ್ಲ ಪೂರೈಕೆ ಆಗಬೇಕು. ರೋಗ ಮುಂತಾದ ಪರ್ವ ಸಂದರ್ಭಗಳಲ್ಲಿ ಈ ಲೆಕ್ಕಾಚಾರದಂತೆ ದಿನಕ್ಕೆ ೧೦ ಗ್ರಾಮ್‌ಗಳಷ್ಟು ಎಸ್ಕಾರ್ಬಿಕ್ ಆಮ್ಲ ಬೇಕಾಗುತ್ತದೆ ಎಂದು. ಮಿಕ್ಕ ಪ್ರಾಣಿಗಳೊಡನೆ ಹೀಗೆ ಹೋಲಿಸಿ ಲೆಕ್ಕ ಹಾಕುವುದು ಸರಿ ಎಂದು ಹೇಳಲಾಗುವುದಿಲ್ಲ. ಆದರೆ ಗಮನಿಸಬೇಕಾದ ಅಂಶವೂ ಒಂದಿದೆ. ಜೀವಸತ್ತ್ವ ಸಿ ನಮ್ಮ ದೇಹದಲ್ಲಿ ಅಧಿಕ ಪ್ರಮಾಣದಲ್ಲಿ ಶೇಖರವಾಗುವ ವಸ್ತು ಅಲ್ಲ. ಹೆಚ್ಚೆಂದರೆ ಸುಮಾರು ಒಂದೂವರೆ ಗ್ರಾಮ್‌ನಷ್ಟು ಸಂಗ್ರಹವಾಗಿರುತ್ತದೆ. ನೆಗಡಿ ಬಂದಾಗ ಒಂದೇ ದಿನದಲ್ಲಿ ಸಂಗ್ರಹಿತ ಪ್ರಮಾಣ ದಿಢೀರನೆ ಇಳಿದು ಹೋಗುತ್ತದೆ. ದಿನನಿತ್ಯದ ದೇಹ ಕ್ರಿಯೆಗಳಿಗೂ ಸಾಲದಷ್ಟು ಮಟ್ಟಿಗೆ ಇಳಿದು ಹೋಗುವ ಸಂಭವವಿದೆ. ಆದ್ದರಿಂದ ದಿನವೂ ಹೆಚ್ಚಾಗಿಯೇ ಜೀವಸತ್ತ್ವ ಸಿ ಯನ್ನು ಸೇವಿಸುವುದು ಒಳ್ಳೆಯದು. ಆಗ ಪರ್ವಕಾಲಗಳಲ್ಲಿ ದೇಹದಲ್ಲಿ ಅದರ ಮಟ್ಟ ಇಳಿದರೂ ಇಷ್ಟು ಕೆಳಮಟ್ಟಕ್ಕೆ ಇಳಿಯಲಾರದು. ಇದು ಒಂದು ಅಭಿಪ್ರಾಯ. ಆದರೆ ಹೀಗೆಂದು ದಿನದಿನವೂ ಜೀವಸತ್ತ್ವ ಸಿ ಮಾತ್ರೆಗಳನ್ನು ಕೈತುಂಬ ತೆಗೆದುಕೊಂಡು ನುಂಗಬೇಕು ಎಂದು ಅರ್ಥವಲ್ಲ. ಮಾಮೂಲಾಗಿ ನಮ್ಮ ಆಹಾರದ ಮೂಲಕ ನಮಗೆ ಪೂರೈಕೆ ಆಗುವ ಜೀವಸತ್ತ್ವ ಸಿ ಯ ಪ್ರಮಾಣ ಸಾಕೋ ಸಾಲದೋ ಎನ್ನುವಷ್ಟು ಇರುವುದ

ರಿಂದ ಎಸ್ಕಾರ್ಬಿಕ್ ಆಮ್ಲದ ಮಾತ್ರೆಯನ್ನೂ ಜೊತೆಗೆ ತೆಗೆದುಕೊಂಡರೆ ಒಳ್ಳೆಯದು ಎನ್ನುವ ಅಭಿಪ್ರಾಯ ಜೊತೆಗೆ ಅತ್ಯಧಿಕ ಪ್ರಮಾಣದಲ್ಲಿ ಹೀಗೆ ಈ ಜೀವಸತ್ತ್ವ ಸಿ ಯನ್ನು ಪೂರೈಕೆ ಮಾಡುವುದೂ ಸರಿ ಅಲ್ಲ. ಕೇವಲ ಹುಮ್ಮಸ್ಸಿನ ಕೆಲವು ವೈದ್ಯರು ಪೌಲಿಂಗನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತ ರೋಗ ಕಾಲದಲ್ಲಿ ವ್ಯಕ್ತಿ ದಿನಕ್ಕೆ ೧೦–೧೨ ಗ್ರಾಮುಗಳಷ್ಟಾದರೂ ಎಸ್ಕಾರ್ಬಿಕ್ ಆಮ್ಲವನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದಿದೆ. ಹೆಚ್ಚಾದರೂ ಏನಂತೆ ಅದರಿಂದ ಹಾನಿ ಇಲ್ಲ ಎಂದು ಹೇಳುವಹಾಗಿಲ್ಲ. ಹಾನಿ ಖಂಡಿತ ಇದೆ. ದೇಹದಲ್ಲಿ ಜೀವಸತ್ತ್ವ ಸಿ ಯ ಮಟ್ಟ ಹೆಚ್ಚಾದಾಗ ದೇಹದ ಖನಿಜಗಳು ಹೆಚ್ಚು ಹೆಚ್ಚಾಗಿ ವಿಸರ್ಜಿತವಾಗಿ ದೇಹದಲ್ಲಿ ಅವುಗಳ ಮಟ್ಟ ಇಳಿದುಹೋಗುವ ಪ್ರಮೇಯವಿದೆ. ಇವುಗಳ ಅಧಿಕ ವಿಸರ್ಜನೆಗಾಗಿ ಮಲಮೂತ್ರಗಳ ವಿಸರ್ಜನೆಯೂ ಹೆಚ್ಚಾಗುವುದಿದೆ. ಅಪರೂಪವಾಗಿ ಮೂತ್ರಕೋಶದಲ್ಲಿ ಕಲ್ಲು ಉದ್ಭವಿಸುವ ಸಂಭವವೂ ಇದೆ. ಅಲ್ಲದೆ ಹೀಗೆ ಬಹು ಹೆಚ್ಚಾಗಿ ಜೀವಸತ್ತ್ವ ಸಿ ಯನ್ನು ತೆಗೆದುಕೊಳ್ಳುವುದು ರೂಢಿಯಾಗಿಬಿಟ್ಟು ಕಾರಣಾಂತರಗಳಿಂದ ಅದರ ಪೂರೈಕೆ ಕಡಿಮೆ ಆಗಿಬಿಟ್ಟರೆ ತೊಂದರೆ ಇದೆ. ಈ ಜೀವಸತ್ತ್ವದ ಅಧಿಕ ಮಟ್ಟ ಸ್ಥಿತಿಯಲ್ಲಿ ಜರುಗುತ್ತಿದ್ದ ದೇಹ ಕ್ರಿಯೆಗಳು, ಆ ಮಟ್ಟ ಚಟ್ಟನೆ ಕಡಿಮೆ ಆದರೆ ಎಡವಟ್ಟಾಗುವುದು ಆಶ್ಚರ್ಯವಿಲ್ಲ. ಆದ್ದರಿಂದ ಹೆಚ್ಚಾಗಿ ಜೀವಸತ್ತ್ವವನ್ನು ಸೇವಿಸುತ್ತಿರುವ ಸಂದರ್ಭದಲ್ಲಿ ಅವನ್ನು ಕಡಿಮೆ ಮಾಡಬೇಕಾಗಿ ಬಂದರೆ ಚಟ್ಟನೆ ಕಡಿಮೆ ಮಾಡದೆ ಬಹು ನಿಧಾನವಾಗಿ ಮಾಡಬೇಕಾದ ಅಗತ್ಯವಿದೆ.

ವಾರ್ಧಿಕ್ಯ ಮತ್ತು ಜೀವನದ ಸಂಘರ್ಷಣ ಸಮಯಗಳಲ್ಲಿ ಜೀವಸತ್ತ್ವ ಸಿ ಯ ಅಗತ್ಯ ಹೆಚ್ಚಾಗಿರುತ್ತದೆ ಎನ್ನುವುದು ನಿಸ್ಸಂಶಯ. ಆಂಡರ್‌ಸನ್ನಿನ ಮತ್ತಿತರ ವ್ಯಾಸಂಗಗಳಿಂದ ಇದು ಸ್ಥಿರೀಕರಿಸಲ್ಪಟ್ಟಿದೆ. ಆದ್ದರಿಂದ ಮುಂಚೆ (೧೯೭೦) ಆದೇಶಿಸುತ್ತಿದ್ದುದರ ಬದಲು ಈಗ ಹೀಗೆ ಆದೇಶಿಸಬಹುದು: ದಿನನಿತ್ಯ ವ್ಯಕ್ತಿಗೆ ೧೦೦–೧೫೦ ಮಿ. ಗ್ರಾಮ್‌ಗಳಷ್ಟು, ಜೀವನ ಒತ್ತಡ ಕಾಲಗಳಲ್ಲಿ ದಿನಕ್ಕೆ ಕಡಿಮೆ ಪಕ್ಷ ೫೦೦ ಮಿ. ಗ್ರಾಮ್‌ಗಳಷ್ಟು ಜೀವಸತ್ತ್ವ ಸಿ ಯನ್ನು ಸೇವಿಸತಕ್ಕದ್ದು. ಇದರಿಂದ ದೇಹಕ್ಕೆ ಒದಗಬಹುದಾದ ಅನುಕೂಲ ಒದಗಿ ಸಂಭವಿಸಬಹುದಾದ ತೊಂದರೆ ತಪ್ಪಿ ಜನರ ನಿತ್ಯ ಜೀವನ ಸುಗಮವಾಗುತ್ತದೆ.

ಇಷ್ಟು ಹೇಳಿದಮೇಲೆ ನೆಗಡಿ ಚಿಕಿತ್ಸೆಯಲ್ಲಿ ಜೀವಸತ್ತ್ವ ಸಿ ಯ ಪ್ರಯೋಜನವನ್ನು ಹೇಳಿ ಲೇಖನವನ್ನು ಮುಗಿಸಲಾಗುತ್ತದೆ. ನೆಗಡಿ ಬರುತ್ತೆ ಎನ್ನಿಸಿದಾಗ

ಮನೆಯಲ್ಲಿ ನೆಗಡಿ ಸೋಂಕಿಗೆ ಒಡ್ಡಲ್ಪಟ್ಟದಾಗ ಒಂದು ದಿನವೂ ತಡಮಾಡದೆ ದಿನಕ್ಕೆ ಒಂದೂವರೆ ಗ್ರಾಮ್‌ಗಳಷ್ಟು ಎಸ್ಕಾರ್ಬಿಕ್ ಆಮ್ಲವನ್ನು ೨-೩ ದಿನ ತೆಗೆದುಕೊಂಡರೆ ಎರಗಬಹುದಾಗಿದ್ದ ನೆಗಡಿಯಿಂದ ಬಹುಶಃ ತಪ್ಪಿಸಿಕೊಳ್ಳ ಬಹುದು. ಒಂದು ದಿನ ತಡವಾಗಿ ನೆಗಡಿ ಅಂಟಿಯೇ ಅಂಟಿತು ಎನ್ನಿಸಿದಾಗಲೂ ಕೂಡಲೆ ಹೀಗೆ ತೆಗೆದುಕೊಂಡರೆ ನೆಗಡಿಯು ತೊಂದರೆ ಬಹುಶಃ ಕಡಿಮೆ ಆಗಿರುತ್ತದೆ. ನೆಗಡಿ ಬಂದು ಅದರಿಂದ ತೊಂದರೆ ಅನುಭವಿಸುತ್ತಿರುವಾಗ ಹೆಚ್ಚುವರಿ ಜೀವಸತ್ತ್ವ ಸಿ ಸೇವನೆಯಿಂದ ಆಗುವ ಪ್ರಯೋಜನ ಅಸ್ಪಷ್ಟ.

ಎಸ್. ರಾಮರಾವ್



ಪರರನ್ನು ಮುಸುಕಿರುವ ಕತ್ತಲೆಯನ್ನು ಪರಿಹರಿಸಲು ಹೋಗುವ ಮುನ್ನ, ನಿನ್ನ ಕಾಲಿನ ಬುಡಕ್ಕಿರುವ ಕತ್ತಲೆಯನ್ನು ಪರಿಹರಿಸಲು ದೀಪ ನಿನ್ನ ಬಳಿ ಇದೆಯೋ ಇಲ್ಲವೋ ನೋಡಿಕೊ. ಇಲ್ಲದಿದ್ದರೆ ನೀನೂ ಆ ಕತ್ತಲೆಯಲ್ಲಿ ಸಿಕ್ಕಿ ಪೇಚಾಡಬೇಕಾದೀತು.

—ಮಹಾವೀರ

ಮಹಿಳೆಯರಿಗೆ ಸಾಕ್ಷರತೆ ಏಕೆ ಮತ್ತು ಹೇಗೆ?

ಮಹಿಳೆಯರು ತಮಗೆ ಇರುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಪುರುಷರೊಂದಿಗೆ ಸರಿಸಮಾನತೆ ಗಳಿಸಲು ಅನಕ್ಷರತೆಯು ಅಡ್ಡಗೋಡೆಯಾಗಿದೆ. ಶಿಕ್ಷಣವು ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ಸಾಧನವಾಗಿರುವುದರಿಂದ ಪುರುಷ ಮತ್ತು ಮಹಿಳೆಯರಿಗೆ ಸಮಾನವಾದ ಅವಕಾಶ ಕಲ್ಪಿಸುವ ಮೂಲಕ, ಈ ಎರಡು ವರ್ಗದ ಅಂತರವನ್ನು ಸರಿದೂಗಿಸಲು ಸಾಧ್ಯ ಎಂಬುದನ್ನು ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸ್ಪಷ್ಟೀಕರಿಸಿದೆ.

ದೇಶದಲ್ಲಿ ಹೆಚ್ಚಿನ ಸಾಕ್ಷರತೆ ಹೊಂದಿರುವ ಪ್ರದೇಶಗಳಲ್ಲಿನ ಪ್ರಾಥಮಿಕ ಶಾಲೆಗಳ ದಾಖಲಾತಿ ಪ್ರಮಾಣದಲ್ಲಿ ಗಣನೀಯವಾಗಿ ಹೆಚ್ಚಳವಾಗಿರುವುದು. ಮಧ್ಯಂತರದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು. ಉತ್ತಮ ರೀತಿಯಲ್ಲಿ ಶಿಶು ರಕ್ಷಣೆ ಹಾಗೂ ಕಡಿಮೆ ಪ್ರಮಾಣದ ಶಿಶುಮರಣ, ಕುಟುಂಬ ಕಲ್ಯಾಣ ಕಾರ್ಯಕ್ರಮದ ಯಶಸ್ವಿ ಅನುಷ್ಠಾನ ಮುಂತಾದ ಹಲವಾರು ನಿದರ್ಶನಗಳಿಂದ ಮೇಲ್ಕಂಡ ರಾಷ್ಟ್ರೀಯ ಶಿಕ್ಷಣ ನೀತಿಯ ಹೇಳಿಕೆಗೆ ಪುಷ್ಟೀಕರಣ ದೊರೆತಿದೆ.

ದೇಶವು ಸ್ವಾತಂತ್ರ್ಯಗಳಿಸಿ ೪೬ ವರ್ಷಗಳಾದರೂ ೧೯೯೧ರ ಜನಗಣತಿಯಂತೆ ಭಾರತದಲ್ಲಿನ ಮಹಿಳಾ ಸಾಕ್ಷರತೆ ಶೇ ೩೯.೪೨ ಮಾತ್ರ ಆಗಿರುತ್ತದೆ ಸ್ವಾತಂತ್ರ್ಯನಂತರ ನಿರಕ್ಷರತಾ ನಿವಾರಣೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಸಹ ೧೯೮೧ರಲ್ಲಿ ೧೮೨.೯೨ ಮಿಲಿಯನ್ ಇದ್ದ ಮಹಿಳಾ ಅನಕ್ಷರಸ್ಥರ ಸಂಖ್ಯೆಯು ೧೯೯೧ ರಲ್ಲಿ ೨೦೨.೧೪ ಮಿಲಿಯನ್‌ಗೆ ಏರಿಕೆಯಾಗಿರುತ್ತದೆ. ದೇಶದ ಒಟ್ಟು ಅನಕ್ಷರಸ್ಥರಲ್ಲಿ ಮಹಿಳೆಯರ ಪಾಲು ಪ್ರತಿ ಶತ ೬೦.೬ ಆಗಿರುತ್ತದೆ. ಇವತ್ತಿಗೂ ಸಹ ರಾಷ್ಟ್ರದ ೭೦ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಪ್ರತಿ ಶತ ೨೦ಕ್ಕಿಂತಲೂ ಕಡಿಮೆಯಾಗಿರುತ್ತದೆ. ಅನಕ್ಷರತೆಯ ಏರಿಕೆಗೆ ಹಲವಾರು ಕಾರಣಗಳಿದ್ದು ಹೆಣ್ಣು ಕಲಿತು ಏನಾಗಬೇಕು ಎಂಬ ತಾತ್ಸಾರ, ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳ ಕೊರತೆ, ದುಡಿಯುವ ತಂದೆತಾಯಿಗಳಿಗೆ ಮನೆಗೆಲಸದಲ್ಲಿ ಸಹಾಯ ಮಾಡುವುದು ಮತ್ತು ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ, ತಂದೆತಾಯಿಗಳ ಅನಕ್ಷರತೆ ಮುಂತಾದ ಹಲವು ಹತ್ತು ಸಾಮಾಜಿಕ ಮತ್ತು

ಆರ್ಥಿಕ ಕಾರಣಗಳು ಸೇರಿರುತ್ತವೆ. ಮಹಿಳೆಯರ ಜೀವನಮಟ್ಟ ಸುಧಾರಣೆಯಲ್ಲಿ ಕೇವಲ ಆ ಸಂಸಾರದ ಸುಧಾರಣೆ ಮಾತ್ರವೇ ಅಡಗಿರದೆ, ಇಡೀ ಸಮಾಜ, ಆ ಮೂಲಕ ರಾಷ್ಟ್ರದ ಅಭ್ಯುದಯವೂ ಅಡಗಿರುತ್ತದೆ. ಈ ದಿಸೆಯಲ್ಲಿ ಮಹಿಳೆಯರ ಅಭಿವೃದ್ಧಿಗೆ ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇವುಗಳಲ್ಲಿ ಪ್ರಸ್ತುತ ದೇಶಾದ್ಯಂತ ಜಾರಿಗೊಳಿಸುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಲನವು ಮಹತ್ವಪೂರ್ಣ ಕಾರ್ಯಕ್ರಮವಾಗಿರುತ್ತದೆ. ಜನತೆಯಲ್ಲಿ ಜಾಗೃತಿ ಉಂಟುಮಾಡಲು ಸಾಕ್ಷರತೆಯು ಒಂದು ಸಾಧನವಾಗಿದ್ದು ಮಹಿಳೆಯರು ಪುರುಷ ಪ್ರಧಾನ ಸಮಾಜದಲ್ಲಿ ಸರಿಸಾಟಿಯಾಗಿ ನಿಲ್ಲಲು ಸಹಕಾರಿಯಾದ ಅರಿವನ್ನು ಸಾಕ್ಷರತೆಯ ಮೂಲಕ ಗಳಿಸಬಹುದಾಗಿರುತ್ತದೆ. ಅರಿವು ಮತ್ತು ಸಾಕ್ಷರತೆಯು ಪರಸ್ಪರ ಪ್ರೇರಕ ಮತ್ತು ಪೂರಕವಾಗಿದ್ದು, ಈ ಕಾರ್ಯಕ್ರಮದಲ್ಲಿ, ಮಹಿಳಾ ಶಿಕ್ಷಣವೇ ರಾಷ್ಟ್ರದ ಶಕ್ತಿ ಎಂಬುದಕ್ಕೆ ಒತ್ತು ನೀಡಿದೆ. ಈ ದಿಸೆಯಲ್ಲಿ ಕಲಿಯುವವರ, ಅಗತ್ಯತೆ, ಸಾಮಾಜಿಕ ಸಾಂಸ್ಕೃತಿಕ ಹಿನ್ನಲೆ, ಸ್ಥಳೀಯ ಸಮಸ್ಯೆ ಮುಂತಾದವುಗಳನ್ನು ಗಮನದಲ್ಲಿರಿಸಿ ಕೊಂಡು ಕಲಿಸುವುದರಿಂದ ನಿರೀಕ್ಷಿತ ಫಲಿತಾಂಶ ಹೊಂದಬಹುದಾಗಿದೆ. ಕಲಿಕೆಗೆ ಸಹಕಾರಿಯಾಗುವಂತೆ ಮಹಿಳೆಯರನ್ನು ಸಂಘಟಿತವರ್ಗ, ಅಸಂಘಟಿತವರ್ಗ, ಹಾಗೂ ಗ್ರಾಮೀಣ ಮಹಿಳೆಯರು ಎಂದು ವರ್ಗೀಕರಿಸಿ ಇವರ ಮನೋಭಾವ ಮತ್ತು ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮ ರೂಪಿಸಿಕೊಳ್ಳಬೇಕಾಗಿರುತ್ತದೆ.

ಸಂಘಟಿತ ವರ್ಗ : ಇವರು ಕಾರ್ಖಾನೆ, ಗಣಿ, ತೋಟ, ರೈಲ್ವೆ ಮುಂತಾದ ಸರ್ಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಒಡೆತನದ ಸಂಸ್ಥೆಗಳಲ್ಲಿ ಕೆಲಸ ಮಾಡುವ ವರ್ಗವಾಗಿರುತ್ತಾರೆ. ಸಾಮಾನ್ಯವಾಗಿ ಮಹಿಳಾ ಕಾರ್ಮಿಕರನ್ನು ಕಡಿಮೆ ಕೂಲಿ ನೀಡಿ ಕನಿಷ್ಟ ಕೆಲಸಕ್ಕೆ ನೇಮಕ ಮಾಡಿಕೊಂಡಿರುವ ನಿದರ್ಶನವೇ ಜಾಸ್ತಿ. ಇವರು ತರಬೇತಿ, ಮುಂಬಡ್ತಿ ಮುಂತಾದ ಸೌಲಭ್ಯಗಳಿಂದ ಸಾಧ್ಯವಾದ ಮಟ್ಟಿಗೂ ವಂಚಿತರು. ಈ ವರ್ಗದ ಇನ್ನಿತರ ಗುಣಲಕ್ಷಣ ಎಂದರೆ ಮಾಲೀಕರು ಮತ್ತು ಕಾರ್ಮಿಕರ ನಡುವಿನ ಯಾಂತ್ರಿಕ ಸಂಬಂಧ. ಅಶುಚಿ ಮತ್ತು ಗಾಳಿ ಬೆಳಕಿಲ್ಲದ ಮನೆಗಳಲ್ಲಿ ವಾಸ. ಮನೆ ಒಳಗೆ ಮತ್ತು ಹೊರಗೆ ನಿರಂತರ ದುಡಿತ. ಜೊತೆಗೆ ಕುಡಿದು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುವ ಗಂಡ (ರು). ಈ ಮಹಿಳೆಯರು ತಮ್ಮ ಸ್ವಸಂಪಾದನೆಯನ್ನೂ ರಕ್ಷಿಸಿಕೊಳ್ಳಲಾರದಷ್ಟು ಅಬಲೆಯರಾಗಿರುತ್ತಾರೆ.

ಅಸಂಘಟಿತ ವರ್ಗ : ಇದು ಸಂಘಟನೆ ಇಲ್ಲದ ಕಾರ್ಮಿಕ ವರ್ಗವಾಗಿರುತ್ತದೆ. ಕಟ್ಟಡಗಳ ನಿರ್ಮಾಣ ಕಾರ್ಯ, ಬೀಡಿ, ಬೆಂಕಿಪೆಟ್ಟಿಗೆ, ಅಗರಬತ್ತಿ ತಯಾರಿಕೆ ಮುಂತಾದ ಉದ್ಯಮಗಳಲ್ಲಿ ಗುತ್ತಿಗೆ ಅಥವಾ ದಿನಗೂಲಿ ಕೆಲಸಗಾರರಾಗಿರುತ್ತಾರೆ. ಇವರು ಸಂಘಟಿತ ವರ್ಗದ ಮಹಿಳೆಯರ ಎಲ್ಲ ಸಮಸ್ಯೆಗಳನ್ನು ಹೊಂದಿರುವುದರ ಜೊತೆಗೆ ಮಾಲೀಕರು ಮತ್ತು ಮಧ್ಯವರ್ತಿಗಳ ಶೋಷಣೆಗೂ ಒಳಗಾಗಿರುತ್ತಾರೆ. ಕೊನೆಯವರೆಗೂ ಇವರು ಅಭದ್ರತೆಯ ಜೀವನ ಸಾಗಿಸಬೇಕಾಗಿದ್ದು ಸಂಘಟಿತ ವರ್ಗಕ್ಕೆ ಇರುವ ಕಾನೂನು ಮತ್ತು ಕಾರ್ಮಿಕ ಸಂಘಟನೆಯ ಬೆಂಬಲವೂ ಇವರಿಗೆ ಇರುವುದಿಲ್ಲ.

ಗ್ರಾಮೀಣ ಮಹಿಳೆಯರು : ಈ ದೇಶದ ಬಹು ದೊಡ್ಡ ವರ್ಗ ಗ್ರಾಮೀಣ ಮಹಿಳೆಯರು. ಇವರಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ರೈತರು, ಕುಶಲಕರ್ಮಿಗಳು, ಕುಲಕಸುಬು ಅವಲಂಬಿತರೂ ಇರುತ್ತಾರೆ. ಈ ಮಹಿಳೆಯರು ಪುರುಷರಿಗಿಂತ ಎರಡು ಪಟ್ಟು ದುಡಿಯುವುದರ ಜೊತೆಗೆ ಮೂಢನಂಬಿಕೆ, ಅರ್ಥ ಇಲ್ಲದ ಆಚರಣೆಗಳಲ್ಲಿ ತೊಡಗಿಸಿಕೊಂಡಿರುವುದೆ ಜಾಸ್ತಿ. ಇವರು ಹೇಗೆ ಬದುಕಬೇಕು ಎಂಬುದಕ್ಕಿಂತ ಹೇಗೋ ಈ ದಿನ ಕಳೆಯಿತಲ್ಲ ಎಂಬಷ್ಟಕ್ಕೆ ತೃಪ್ತರು. ಜೀವನಪರ್ಯಂತ ಅನ್ನ ಮತ್ತು ಅರಿವೆಯ ಸಂಪಾದನೆಗೇ ಇವರ ದುಡಿಮೆ ಮುಡಿಪಾಗಿರುತ್ತದೆ. ಇದರ ಮುಂದೆ ಅನಕ್ಷರತೆ ಒಂದು ಸಮಸ್ಯೆ ಎಂಬುದೇ ಇವರ ಅರಿವು ತಲಪಿರುವುದಿಲ್ಲ.

ಇಂತಹ ವೈವಿಧ್ಯ ಮನೋಭಾವ ಮತ್ತು ವಯೋಮಾನದ ಅನಕ್ಷರಸ್ಥರಿಗೆ ಓದುಬರಹ ಕಲಿಸುವುದು ಸವಾಲಿನ ಕೆಲಸವಾಗಿದೆ. ಪ್ರತಿ ವ್ಯಕ್ತಿಗೂ ತನ್ನದೇ ಆದ ಬೇಕು ಬೇಡಗಳಿದ್ದು ಇದಕ್ಕೆ ಅನುಗುಣವಾಗಿ ವ್ಯಕ್ತಿಗತ ಪರಿಧಿಯಲ್ಲಿ ಕಲಿಸಲು ಸಾಧ್ಯವಿಲ್ಲವಾದರೂ ನಿರ್ದಿಷ್ಟ ವರ್ಗವನ್ನಾದರೂ ಗಮನದಲ್ಲಿರಿಸಿಕೊಂಡು ಕಲಿಸುವುದು ಅಗತ್ಯವಾಗಿರುತ್ತದೆ.

ಸಂಘಟಿತ ಮತ್ತು ಅಸಂಘಟಿತ ಮಹಿಳಾ ವರ್ಗಗಳಿಗೆ ಕಲಿಸಲು ಸಂಬಂಧಪಟ್ಟ ಆಯಾ ಸಂಸ್ಥೆಗಳ ಮುಖ್ಯಸ್ಥರು ಅಥವಾ ಮಾಲೀಕರೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಿಕೊಳ್ಳುವುದು ಸೂಕ್ತವಾಗಿರುತ್ತದೆ. ಈ ಕಾರ್ಮಿಕ ವರ್ಗಕ್ಕೆ ತಮ್ಮ ದಿನದ ಕೆಲಸದ ವೇಳೆಯನ್ನು ಕಡಿತಗೊಳಿಸಿ, ಈ ಅವಧಿಯಲ್ಲಿಯೇ ಕಲಿಸುವುದರ ಮೂಲಕ ಸಾಧ್ಯವಾದ ಮಟ್ಟಿಗೂ ಯಶಸ್ಸು ಸಾಧಿಸಬಹುದಾಗಿದೆ. ಕಲಿಯುವುದರಿಂದ ಯಾವುದಾದರೂ ರೀತಿಯಲ್ಲಿ ಪ್ರತಿಫಲ ದೊರೆಯುವುದಾದಲ್ಲಿ ಕಲಿಕೆಗೆ ಹೆಚ್ಚಿನ ಪ್ರೇರಣೆ ಉಂಟಾಗುವುದು.

ಆರೋಗ್ಯ ಕಾರ್ಯಕ್ರಮವು ಮಹಿಳೆಯರನ್ನು ಹೆಚ್ಚು ಆಕರ್ಷಿಸುತ್ತದೆ ಮತ್ತು ಇದು ಅಗತ್ಯವೂ ಆಗಿರುತ್ತದೆ. ೧೫ ಮತ್ತು ಮೇಲ್ಪಟ್ಟ ವಯೋಮಿತಿಯಲ್ಲಿನ ಮಹಿಳೆಯರಲ್ಲಿ ಉಂಟಾಗುವ ಶಾರೀರಕ ಬದಲಾವಣೆ ಮತ್ತು ಇದರ ಪರಿಣಾಮದಿಂದ ಅನುಭವಿಸುವ ದೈಹಿಕ ಯಾತನೆ ಮತ್ತು ಮಾನಸಿಕ ವೇದನೆ ಅಸಹನೀಯವಾದುದು ಇವುಗಳ ಪರಿಹಾರಕ್ಕೆ ಸಹಕಾರಿಯಾಗುವಂತಹ ಅಂಶಗಳನ್ನು ಕಲಿಕೆಯಲ್ಲಿ ವಸ್ತುವಿಷಯವಾಗಿ ಅಳವಡಿಸುವುದು ಸೂಕ್ತವಾಗಿರುತ್ತದೆ.

ಮಹಿಳೆಯರಿಗೆ ಮಹಿಳೆಯರೇ ಕಲಿಸುವುದು ಅತಿ ಮುಖ್ಯವಾದ ಸಂಗತಿ. ಸಂಪೂರ್ಣ ಸಾಕ್ಷರತಾ ಆಂದೋಳನದಂತಹ ಬೃಹತ್ ಕಾರ್ಯಕ್ರಮ ಜಾರಿಗೊಳಿಸಲು ಕಲಿಯುವವರ ಪ್ರಮಾಣಕ್ಕೆ ಅನುಗುಣವಾಗಿ ಕಲಿಸುವವರ ಅಗತ್ಯತೆ ಇರುತ್ತದೆ. ಈ ದಿಸೆಯಲ್ಲಿ ಕಲಿಸುವವರ ಕೊರತೆ ಇದ್ದು ಅದರಲ್ಲಿಯೂ ಕೆಲವು ಹಿಂದುಳಿದ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕಲಿಸುವ ಅರ್ಹತೆ ಇರುವವರು ಇರಲಿ ಸಾಧಾರಣ ಓದುಬರಹ ತಿಳಿದವರೂ ಅಲಭ್ಯವಾಗಿರುತ್ತದೆ. ಇಂತಹ ಅನಿವಾರ್ಯ ಪರಿಸ್ಥಿತಿಯಲ್ಲಿ ಲಭ್ಯ ಇರುವವರಿಗೇ ತರಬೇತಿ ನೀಡಿ ಈ ಕಲಿಕಾ ಕೇಂದ್ರಗಳಿಗೆ ವಿಶೇಷ ಗಮನ ನೀಡುವುದರ ಮೂಲಕ ಉದ್ದೇಶಿತ ಗುರಿ ತಲಪಬಹುದಾಗಿರುತ್ತದೆ.

ಕಲಿಯುವವರ ನಿಜವಾದ ಸಮಸ್ಯೆಯನ್ನು ಗುರುತಿಸಿ ಕಲಿಸುವುದರಿಂದ ಸಾಕ್ಷರತಾ ಕಾರ್ಯಕ್ರಮಕ್ಕೆ ಎಂತಹ ಚಾಲನೆ ದೊರೆಯಿತು ಎಂಬುದನ್ನು ನೆರೆಯ ಆಂಧ್ರ ರಾಜ್ಯದ ಪಾನನಿರೋಧ ಚಳುವಳಿಯ ಒಂದು ನಿದರ್ಶನದಿಂದ ತಿಳಿಯಬಹುದಾಗಿದೆ.


ಕಳೆದ ವರ್ಷ ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಳನ ಜಾರಿಗೆ ಬಂತು. ಇದರ ಅನ್ವಯ ಈ ಜಿಲ್ಲೆಯ ದೂಬಗುಂಟಾ ಎಂಬ ಗ್ರಾಮವೂ ಸಂಪೂರ್ಣ ಸಾಕ್ಷರತಾ ಆಂದೋಳನದ ತೆಕ್ಕೆಯೊಳಗೆ ಸೇರಿತು.

'ರಾಷ್ಟ್ರೀಯ ಸಾಕ್ಷರತಾ ಮಿಷನ್' ಮಾರ್ಗಸೂಚಿಯಂತೆ ಆಯಾ ಜಿಲ್ಲೆಯ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆ, ಭಾಷಾ ವೈವಿಧ್ಯತೆ, ಕಲಿಯುವವರ ಅಗತ್ಯ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಜಿಲ್ಲೆಗೂ ಪ್ರತ್ಯೇಕವಾದ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಅಗತ್ಯವಾಗಿರುತ್ತದೆ. ಇದರಂತೆ ನೆಲ್ಲೂರು ಜಿಲ್ಲೆಗೂ ವಯಸ್ಕರ ಶಿಕ್ಷಣ ಪಠ್ಯಪುಸ್ತಕ ಸಿದ್ಧಪಡಿಸಿ, ಈ

ಪುಸ್ತಕದಲ್ಲಿ ಕುಡಿತವನ್ನು ಕುರಿತಂತೆ 'ಸೀತಮ್ಮ ಕಥಾ' ಎಂಬ ಪಾಠವನ್ನು ಅಳವಡಿಸಲಾಯಿತು.

ದೂಬಗುಂಟಾ ಗ್ರಾಮದಲ್ಲಿ ಪ್ರಾರಂಭವಾದ ಕಲಿಕಾ ಕೇಂದ್ರಕ್ಕೆ ಸೇರಿದ ರೋಸಮ್ಮ ಎಂಬ ಮಹಿಳೆಗೆ ತನ್ನ ಹಳ್ಳಿಯ ಧಾರುಣ ಸ್ಥಿತಿಗೆ ಕುಡಿತವೇ ಮುಖ್ಯಕಾರಣ ಎಂಬುದು 'ಸೀತಮ್ಮ ಕಥಾ' ಪಾಠದ ಮೂಲಕ ಕಲಿಕಾ ಕೇಂದ್ರದಲ್ಲಿ ಮನದಟ್ಟಾಯಿತು. ಈ ಕಲಿಕೆಯು ಕ್ರಿಯಾತ್ಮಕವಾಗಿ ಶಿಕ್ಷಣವೇ ಶಕ್ತಿಯಾಗಿ ಪರಿಣಮಿಸಿತು. ರೋಸಮ್ಮ ಪಾನನಿರೋಧ ಚಳುವಳಿಯ ಮುಂದಾಳತ್ವ ವಹಿಸಿದಳು. ಈ ಊರಿನ ಸಮಾನ ಮನಸ್ಕರಾದ ಮಹಿಳೆಯರು ಚಳುವಳಿಗೆ ದನಿಗೂಡಿಸಿ ಚಾಲನೆ ನೀಡಿದರು. ಜನಶಕ್ತಿಯ ಎದುರು ಸೋಲೊಪ್ಪಿದ ಆಂಧ್ರ ಪ್ರದೇಶದ ಸುಮಾರು ೨೦೦ ಗ್ರಾಮಗಳಲ್ಲಿ ೨೪೦ ಕ್ಕೂ ಮಿಗಿಲಾಗಿ ಸಾರಾಯಿ ಅಂಗಡಿಗಳು ಮುಚ್ಚಿದವು. ಈ ಚಳುವಳಿಯು ಕ್ರಮೇಣ ನೆಲ್ಲೂರು ಮತ್ತು ಚಿತ್ತೂರು ಜಿಲ್ಲೆಗಳನ್ನೂ ಆವರಿಸಿತು. ಇದರ ಪರಿಣಾಮ ಆಂಧ್ರಪ್ರದೇಶವು ಪಾನನಿಷೇಧ ರಾಜ್ಯವಾಗಿ ಘೋಷಣೆಯಾಗುವ ಕಾಲ ಇನ್ನು ದೂರ ಉಳಿದಿಲ್ಲ.

ಚಂದ್ರಶೇಖರಾರಾಧ್ಯ



ದಂಡಕ್ಕೆ ಎಲ್ಲರೂ ಹೆದರುತ್ತಾರೆ, ಸಾವಿಗೆ ಎಲ್ಲರೂ ಅಂಜುತ್ತಾರೆ. ತನ್ನಂತೆ ಹೆರರು ಎಂದರಿತು ಕೊಲ್ಲಬಾರದು, ಕೊಲ್ಲಿಸಲೂ ಬಾರದು.

—ಭಗವಾನ್ ಬುದ್ಧ

ಮಕ್ಕಳಿಗೆ ಪಾಠದ ಮನೆಗಳು ವರವೋ? ಶಾಪವೋ?

ಶಾಲೆಗಳು, ಪಾಠದ ಮನೆಗಳು ಮತ್ತು ಪರೀಕ್ಷೆಗಳು ಈ ಮೂರು ನಮ್ಮ ಮಕ್ಕಳಿಗೆ ಈಗ ಚರಾಸ್ತಿಗಳಾಗಿದ್ದು ಸಮಾನಾಂತರ ರೇಖೆಗಳಲ್ಲಿ ರೈಲು ಹಳಿ ಹೋದ ಹಾಗೆ ನಡೆದಿವೆ. ಮುಂದೆಂದೂ, ಎಲ್ಲಿಯೂ ಸೇರದ ಈ ರೈಲು ಹಳಿಗಳ ಮೇಲೆ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವ ನಾವು ಕಿಂಚಿತ್ತಾದರೂ ಮಕ್ಕಳ ಭವಿಷ್ಯದ ಕಡೆಗೆ ಯೋಚಿಸಿದ್ದೇವೆಯೆ? ದಿನಂಪ್ರತಿ ಬೆಳಿಗ್ಗೆ ಐದು ಗಂಟೆಗೇ ಮಕ್ಕಳನ್ನು ಎಬ್ಬಿಸಿ ನಮ್ಮ ಮೂಗಿನ ನೇರಕ್ಕೆ ನಡೆಯುವ ಪಾಠದ ಮನೆಗಳಿಗೆ ಕಳಿಸುತ್ತಿದ್ದೇವೆ. ಈಗಿನ ದಿನಗಳಲ್ಲಿ ಪಾಠದ ಮನೆಗಳಿಗೆ ಹೋಗುವ ಮಕ್ಕಳು ಅಲ್ಲಿಗೆ ಬರದ ತಮ್ಮ ಇತರ ಸಹಪಾಠಿಗಳನ್ನು 'ಅಸ್ಪೃಶ್ಯ'ರೆಂದೇ ಭಾವಿಸುತ್ತಾರೆ.

'ಪಾಠದ ಮನೆಗಳು' ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಪಾಠದಂಗಡಿಗಳು' ಎಂದೇ ಕರೆಯಲ್ಪಡುವ ಇವು ಈಗಿನ ದಿನಗಳಲ್ಲಿ ತುಂಬ ಖ್ಯಾತಿ ಹೊಂದಿವೆ. ಪಾಠದಂಗಡಿಗಳಿಗೆ ಮಕ್ಕಳು ಭೇಟಿ ಕೊಡುವುದೂ ಈಗ ಶೈಕ್ಷಣಿಕ ಹಂತದಲ್ಲೊಂದು ಫ್ಯಾಶನ್ ಆಗಿಬಿಟ್ಟಿದೆ.

ನಮ್ಮ ಮಕ್ಕಳು ಪಾಠದಂಗಡಿಗಳಿಗೆ ಹಾಜರಾದರೆ ಸಾಕು ; ಅವರ ಪೋಷಕರಾದ ನಾವೇ ಹೆಚ್ಚು ನಿಶ್ಚಿಂತರಾಗುತ್ತೇವೆ. ಪರೀಕ್ಷೆಗೋಸ್ಕರ 'ಉರು' ಹೊಡೆದು ಪಾಸಾದರೆ ಸಾಕೆಂದು ಮಕ್ಕಳು ಇನ್ನೂ ಹೆಚ್ಚು ನಿಶ್ಚಿಂತರಾಗಿರುತ್ತಾರೆ.

ಈ ಪಾಠದಂಗಡಿಗಳು ಎಷ್ಟೊಂದು ಉಪಯೋಗವಾಗಬಲ್ಲವು? ಅವುಗಳಿಗೆ ಹಾಜರಾಗುವ ಮಕ್ಕಳು ಅಲ್ಲಿ ತಾವು ಪಡೆಯುವ 'ಪಾಠ'ದ ಬಗ್ಗೆ ಏನು ಹೇಳುತ್ತಾರೆ?

ನಮಗೆ ಗೊತ್ತಿರುವಂತೆ ಅಥವಾ ನಾವು ಪುರಾಣಗಳಲ್ಲಿ ಓದಿರುವಂತೆ, ಹಿಂದಿನ ದಿನಗಳಲ್ಲಿ; ವಿದ್ಯಾರ್ಜನೆಗೆ ವಿದ್ಯಾರ್ಥಿಗಳು 'ಗುರುಕುಲ'ಗಳನ್ನು ಅರಿಸಿಕೊಂಡು ಹೋಗುತ್ತಿದ್ದರು. ಈಗ ನಮ್ಮ ಮಕ್ಕಳು ಪಾಠದಂಗಡಿಗಳನ್ನು ಅರಸುತ್ತ ನಡೆದಿದ್ದಾರೆ. ಗುರುಕುಲಗಳಲ್ಲಿ ಬೆರಳಮೇಲೆ ಎಣಿಸುವಷ್ಟು ವಿದ್ಯಾರ್ಥಿಗಳಿರುತ್ತಿದ್ದರು. ಹೀಗಾಗಿ, ಗುರುಗಳು ಪ್ರತಿ ವಿದ್ಯಾರ್ಥಿ ಕಡೆಗೆ ವಿಶೇಷ ಗಮನವೀಯುತ್ತಿದ್ದರು. ಗುರುಗಳು ತಮ್ಮನ್ನು ಅಲಕ್ಷಿಸುತ್ತಿದ್ದಾರೆಂದು ವಿದ್ಯಾರ್ಥಿಗಳು ಭಾವಿಸಲು ಅಸ್ಪದವೇ ಇರುತ್ತಿರಲಿಲ್ಲ. ಹೀಗಾಗಿ, ಗುರುಕುಲದಲ್ಲಿಯ ವಿದ್ಯಾರ್ಥಿ

ಆಧಾರ: ಫೆಬ್ರುವರಿ ೧೯೯೦ರ 'ಮಿರರ್' ಪತ್ರಿಕೆ

ಗಳು ವಿದ್ಯೆ ನೀಡುವ ತಮ್ಮ ಗುರುಗಳನ್ನು ದೇವರೆಂದೇ ಭಾವಿಸಿ ವಿದ್ಯಾರ್ಜನೆ ಮಾಡುತ್ತಿದ್ದರು.

ಆದರೆ, ಇಂದಿನ ಶಾಲಾ–ಕಾಲೇಜುಗಳ ಪರಿಸ್ಥಿತಿಯೇ ಬೇರೆ. ಇಂದು, ನಾವು ನಮ್ಮ ಕಣ್ಣಾರೆ ಕಂಡೂ ತೊಂದರೆ ಅನುಭವಿಸುತ್ತಿದ್ದೇವೆ. ಜನಸಂಖ್ಯೆ ಬೆಳೆದಂತೆ ಶಾಲಾ–ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆಯೂ ಹೆಚ್ಚುತ್ತಿದೆ. ಈ ಪರಿಸ್ಥಿತಿಯಲ್ಲಿ, ತರಗತಿಯೊಳಗೆ ಶಿಕ್ಷಕರು ಎಲ್ಲ ಮಕ್ಕಳ ಮೇಲೂ ನಿಗಾ ವಹಿಸಿ ಪಾಠ ಮಾಡಲು ಸಾಧ್ಯವಿಲ್ಲ. ನಾವು ಅಪೇಕ್ಷಿತ ಶೈಕ್ಷಣಿಕ ಮಟ್ಟವನ್ನು ಇಂದಿನ ದಿನಗಳಲ್ಲಿ ಹೊಂದಲು ಸಾಧ್ಯವೇ ಇಲ್ಲವೆಂಬಂತಹ ಪರಿಸರವನ್ನು ನಾವೇ ಬೆಳೆಸಿಕೊಂಡಿದ್ದೇವೆ. ಈ ಬಗ್ಗೆ ವಿಚಾರ ಮಾಡುವ ಪರಿವೆಯೇ ನಮಗಿಲ್ಲ. ಸಮಯಾನುಭಾವದಿಂದ ತರಗತಿಗಳಲ್ಲಿ ನಡೆಯುವ ಪಾಠಗಳ ಸಮಸ್ಯೆ–ಸಂಶಯಗಳನ್ನು ವಿದ್ಯಾರ್ಥಿಗಳಿಗೆ ಬಿಡಿಸಿ ಹೇಳಲಾಗುತ್ತಿಲ್ಲ. ಹೀಗಾಗಿ, ಶಿಕ್ಷಣದ ನಿಜವಾದ ಉದ್ದೇಶ ಈಗ ವಿಫಲ ಹೊಂದಿವೆ. ಶಾಲಾ–ಕಾಲೇಜುಗಳು ಬರೀ ಕುರಿ–ದೊಡ್ಡಿಗಳಾಗುತ್ತಿವೆ.

ಈ ಬಗೆಯ ಸಮಸ್ಯೆಗಳ ಸುಳಿಯಲ್ಲಿ, ಪಾಠದಂಗಡಿಗಳು ನಮಗೆ ಹಸಿರು ನಿಶಾನೆಗಳಾಗಿ ಕಾಣುತ್ತಲಿವೆ. ಉದ್ಯೋಗನಿರತ ಪೋಷಕರಿಗಂತೂ ಇವು ವರದಾನಗಳಾಗಿ ಪರಿಣಮಿಸಿವೆ. ಶ್ರೀಮಂತ ವರ್ಗಗಳಿಗಂತೂ ಸರಿ ; ಬಡ–ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಡು ಯಾರು ಕೇಳಬೇಕು ? ಶಾಲಾ–ಕಾಲೇಜುಗಳಿಗೆ ಪ್ರವೇಶ ಫೀಜು, ಇತರ ಫೀಜುಗಳೇ ಭಾರವಾಗಿರುವಾಗ ಮತ್ತೆ ಈ ಪಾಠದಂಗಡಿಗಳಿಗೆ ತಮ್ಮ ಮಕ್ಕಳನ್ನು ಕಳಿಸಿಯಾರೆ? ಎರಡು ಹೊತ್ತಿನ ಗಂಜಿಗೇ ಕಷ್ಟವಾಗಿರುವಾಗ ಈ ಮಕ್ಕಳು ಈಗಿನ ದುಬಾರಿ ಬೆಲೆಯ ಶಿಕ್ಷಣ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಈ ಪ್ರಕಾರ ಸರಕಾರವೇ 'ಸ್ಲೋ ಪ್ಯೊಜನ್' ನೀಡಿ ಬಡವರು ಶಿಕ್ಷಣ ಕ್ಷೇತ್ರದಿಂದ ದೂರ ಸರಿಯುವಂತೆ ಮಾಡುತ್ತಿದೆ. ಅಂಗೈ ಹುಣ್ಣಿಗೆ ಕನ್ನಡಿ ನಿಮಗೆ ಬೇಕಾದೀತೆ? ಈ ಬಗೆಯ ಪರಿಸರದಲ್ಲಿ, ಪಾಠದಂಗಡಿಯಿಂದಾಗುವ ಲಾಭ–ಲುಕ್ಸಾನುಗಳನ್ನು ಅಳೆಯಲು ಹೇಗೆ ಸಾಧ್ಯ? ಇದು ಎಷ್ಟು ಕೆಟ್ಟ ಎನ್ನುವದನ್ನು ಬರಲಿರುವ ಕಾಲವೇ ಹೇಳುತ್ತದೆ.

ಆಯಾ ತರಗತಿಗಳಿಗಿರುವ ಸಿಲಿಬಸ್ ತುಂಬ ವಿಶಾಲವಾಗಿರುತ್ತದೆಂದೂ ಆದರೆ, ಅದಕ್ಕೆ ನಿಗದಿಪಡಿಸಿದ ಅವಧಿ ಕಡಿಮೆಯಿರುತ್ತದೆಂದೂ, ಹೀಗಾಗಿ ಪಾಠ ಮುಗಿಸಲು ಶಿಕ್ಷಕರಿಗೆ ತೊಂದರೆಯಾಗುತ್ತದೆಂದೂ ವಿದ್ಯಾರ್ಥಿಗಳೇ ಅಭಿಪ್ರಾಯ ತಾಳಿದ್ದಾರೆ. ಆದುದರಿಂದ, ಅದೇ ಪಾಠಗಳ ಪೂರ್ಣ ತಿಳುವಳಿಕೆಗೋಸ್ಕರ

ಪಾಠದಂಗಡಿಗಳಿಗೆ ತಾವು ಹೋಗಲೇಬೇಕಾಗಿದೆಂದು ವಿದ್ಯಾರ್ಥಿಗಳು ಹೇಳುತ್ತಾರೆ.

ಈ ಪಾಠದಂಗಡಿಗಳನ್ನು ಶಾಲಾ-ಕಾಲೇಜುಗಳ ಪೂರ್ಣಾವಧಿ ಶಿಕ್ಷಕರೇ ನಡೆಸಬೇಕೆಂದಿಲ್ಲ. ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಮೊದಲಾದ ಹೆಸರಾಂತ ಶಹರಗಳಲ್ಲಿ ಅನೇಕ ಹೆಸರಾಂತ ಶಿಕ್ಷಕರು ಕೆಲಸಕ್ಕೆ ರಾಜೀನಾಮೆ ನೀಡಿ, ಹೊರಗೆ ಬೋರ್ಡು ತಗುಲಿಸಿ ಫುಲ್‌ಪ್ಲೆಜ್ಡ್ ಪಾಠಗಳನ್ನು ನಡೆಸುತ್ತಿದ್ದಾರೆ. ಸರಕಾರಿ ಸೇವೆಯಲ್ಲಿದ್ದ ಅನೇಕ ವೈದ್ಯರು ಕೆಲಸಕ್ಕೆ ರಾಜೀನಾಮೆ ನೀಡಿ (ದುಬಾರಿ) ನರ್ಸಿಂಗ್ ಹೋಂಗಳನ್ನು ನಡೆಸುತ್ತಿರುವುದನ್ನು ನಾವು ನಮ್ಮ ಕಣ್ಣೆದುರಿಗೇ ನೋಡುತ್ತಿದ್ದೇವೆ. ಇದೇ ಮಾದರಿಯಲ್ಲಿ ಪಾಠದಂಗಡಿಗಳು ಹುಟ್ಟಿಕೊಂಡಿವೆ ಎಂದರೆ ತಪ್ಪಾಗಲಾರದು. ಸರಕಾರೀ ಆಸ್ಪತ್ರೆಗಳ ಬಗ್ಗೆ ನಮ್ಮ ಸಾರ್ವಜನಿಕರಿಗೆ ಒಳ್ಳೇ ಅಭಿಪ್ರಾಯವಿಲ್ಲ. ಅದೇ ತರಹ ಸರಕಾರೀ ಶಾಲಾ-ಕಾಲೇಜುಗಳಲ್ಲಿ ನಮ್ಮ ಪೋಷಕರಿಗೆ ಸದಭಿಪ್ರಾಯವಿಲ್ಲ. ಇದಕ್ಕೆ ಯಾರು ಹೊಣೆ?

ಪಾಠದ ಮನೆಗಳ ಮಹತ್ವ ಈಗ ಎಷ್ಟು ಹೆಚ್ಚು ಬೆಳೆದಿದೆಯೆಂದರೆ, ಉಸಿರಾಡಲು ಸಾಧ್ಯವಾಗದಷ್ಟು ಸಂಖ್ಯೆಯಲ್ಲಿ ಮಕ್ಕಳು ಅಲ್ಲಿ ಬಂದು ಸೇರಿರುತ್ತಾರೆ. ಅದೊಂದು ಚಿಕ್ಕ ತರಗತಿಯಂತೆ ಕಾಣುತ್ತದೆ. ತರಗತಿಗೆ ಹಾಜರಾಗಿ ಈ ಪಾಠದಂಗಡಿಗೂ ಹಾಜರಾಗಲೇಬೇಕಾಗಿರುವ ಇಂದಿನ ಅವ್ಯವಸ್ಥೆಯಲ್ಲಿ ವಿದ್ಯಾರ್ಥಿ ತುಂಬ ಬಳಲಿದಂತೆ ಕಾಣುತ್ತಾನೆ. ಆಟಕ್ಕೂ ಸಹ ಸಮಯ ಉಳಿಯುವುದಿಲ್ಲ. ಪಾಠದಂಗಡಿಗಳಲ್ಲಿ ನಡೆಸುವ ಟೆಸ್ಟುಗಳನ್ನು ತಪ್ಪದೇ ಹಾಜರಾಗಿ ಅದನ್ನೇ ಉರು ಹೊಡೆದು ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾಗಿ ಹೊರಬರುತ್ತಾರೆ. ಈ ಬಗೆಯ ಸ್ಪೂನ್ ಫೀಡಿಂಗ್‌ನಿಂದಾಗಿ ಮುಂದೆ ಕೆಲಸಕ್ಕೆ ಸೇರಿದ ಮೇಲೆಯೂ ಮಾರ್ಗದರ್ಶನಕ್ಕಾಗಿ ಇವರು ಕಾಯುತ್ತಾರೆ. ಇಂಥ ಅನೇಕ ಇಂಜಿನಿಯರ್‌ಗಳು ಅಥವಾ ಡಾಕ್ಟರುಗಳು ಸಾರ್ವಜನಿಕ ಜೀವನಕ್ಕೆ ಹೊರೆಯಾಗುತ್ತಿದ್ದಾರೆ. ಇದಕ್ಕೆ ಯಾರು ಹೊಣೆ?

ಪಾಠದ ಮನೆಗೆ ಹೋಗುವುದಾಗಿ ಪೋಷಕರಿಗೆ ಹೇಳಿ, ವಿಡಿಯೋ ಗೇಮ್ಸ್ ವೀಡಿಯೋ ಸೆಂಟರುಗಳಿಗೆ ಹಣ ಸುರಿದು ಹಾಳಾಗುವ ಮಕ್ಕಳನ್ನು ಇಂದು ನಾವು ನೋಡುತ್ತಲಿದ್ದೇವೆ. ವಿಷಯವನ್ನು ತಿಳಿದುಕೊಳ್ಳದೇ, ಕೇವಲ ಅಂಕಗಳಿಗೋಸ್ಕರ ಪಾಠದಂಗಡಿಗಳಿಗೆ ಹಾಜರಾಗುತ್ತಿರುವ ನಮ್ಮ ಮಕ್ಕಳು ನಿಜಕ್ಕೂ ವಿದ್ಯಾರ್ಜನೆ ಮಾಡುತ್ತಿದ್ದಾರೆಯೇ? ಇಲ್ಲವೇ ಇಲ್ಲ. ನಾವು ನಮ್ಮ ಮಕ್ಕಳನ್ನು

ವಿದ್ಯಾರ್ಜನೆಯಿಂದ ವಂಚಿಸುತ್ತಿದ್ದೇವೆ. ಅವರನ್ನು ತಮ್ಮ ಮಾರ್ಗದತ್ತ ಹೋಗಲು ಸೂಚಿಸಿ ನಮ್ಮ ಭಾರವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದೇವೆ. ಭವಿಷ್ಯದಲ್ಲಿ ತೊಂದರೆ ಅನುಭವಿಸುವ ನಮ್ಮ ಮಕ್ಕಳನ್ನು ನೋಡಲು ನಾವೆಲ್ಲಿ ಇರುತ್ತೇವೆ.

ಇಂದು ನಾವು ರಾಜಕೀಯ ಕ್ಷೇತ್ರಕ್ಕೇ ಹೆಚ್ಚು ಬೆಲೆ ಕೊಡುತ್ತಿದ್ದೇವೆ; ನಿತ್ಯ ಜೀವನದಲ್ಲಿ ಈಗ ಕುಬೇರನ ಕಣಜವಾಗಿರುವ ರಾಜಕಾರಣಕ್ಕೇ ನಾವೂ, ನಮ್ಮ ಮುಂದಾಳುಗಳೂ ಹೆಚ್ಚು ವಾಲುತ್ತಿದ್ದೇವೆ. ದೇಶದ ಭವಿಷ್ಯವನ್ನು ನಿರ್ಣಯಿಸುವ ಶಿಕ್ಷಣ ಕ್ಷೇತ್ರವನ್ನು ನಮ್ಮ ಮುಂದಾಳುಗಳು ಸಂಪೂರ್ಣ ಅಲಕ್ಷಿಸಿದ್ದಾರೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ವಾತಾವರಣ ಹದಗೆಡುತ್ತಿದೆ. ಒಳ್ಳೇ ಸೂರು ಇರುವ ಕಟ್ಟಡಗಳಿಲ್ಲ; ಪೀಠೋಪ ಕರಣಗಳನ್ನು ನಾವು ಪೂರೈಸುತ್ತಿಲ್ಲ. ಅವರಿಗೆ ಉತ್ತಮ ಗ್ರಂಥಾಲಯ, ಪ್ರಯೋಗಶಾಲೆಗಳನ್ನು ಒದಗಿಸುತ್ತಿಲ್ಲ. ಅವಶ್ಯಕತೆಗೆ ತಕ್ಕಂತೆ ಸಂಬಳ ನೀಡಿ ಪೂರ್ಣಾವಧಿ ಶಿಕ್ಷಕರನ್ನು ನಿಯೋಜಿಸುತ್ತಿಲ್ಲ. ಮಕ್ಕಳ ಭವಿಷ್ಯವನ್ನು ತನ್ಮೂಲಕ ನಮ್ಮ ದೇಶದ ಭವಿಷ್ಯವನ್ನು ರೂಪಿಸುವ ಶಿಕ್ಷಕರನ್ನು ನಾವು ಸಂಪೂರ್ಣ ಅಲಕ್ಷಿಸಿದ್ದೇವೆ. ಈಗ ಇದು ದೇಶದ ಅಭಿವೃದ್ಧಿಗೆ ಕ್ರಮೇಣ ನಾಶದತ್ತ ನೂಕುವ ಮಾರಕಾಸ್ತ್ರವಾಗುತ್ತಿದೆ.

ಪ್ರೊಫೆಸರ್ ಎ. ಸಿ. ದೇವೇಗೌಡರರಂಥ ಕಳಕಳಿಯ ಶಿಕ್ಷಣ ತಜ್ಞರು ನಮ್ಮ ಮಧ್ಯ ಮತ್ತೆ ಹುಟ್ಟಿಬರಬೇಕಾಗಿದೆ. ಶಿಕ್ಷಣವೇತ್ತರೂ, ಬುದ್ಧಿಜೀವಿಗಳೂ ಆದಂಥ ಡಾ|| ಎಚ್. ನರಸಿಂಹಯ್ಯ, ಡಾ|| ಶಿವರಾಮಕಾರಂತರಂಥವರು ಸರಕಾರಕ್ಕೆ ಸೂಕ್ತ ಸಲಹೆ ನೀಡಬೇಕು. ರಾಜ್ಯಸಭಾ ಸದಸ್ಯರೂ, ಪ್ರಖ್ಯಾತ ಕಾದಂಬರಿ ಕಾರರೂ ಆಗಿರುವ ಶ್ರೀ ಆರ್. ಕೆ. ನಾರಾಯಣರವರು, ನೀಡಿರುವ ಸಮಯೋಚಿತ ಸಲಹೆಗಳನ್ನು ಸರಕಾರದವರು ಪರಿಗಣಿಸಬೇಕು. ಸಿಮೆಂಟ್ ಮೂಟೆ ಹೊತ್ತ ಹಾಗೆ ಪುಸ್ತಕ ಚೀಲಗಳನ್ನು ಹೊತ್ತು ಬೆನ್ನು ಬಾಗುತ್ತಿರುವ ನಮ್ಮ ಮಕ್ಕಳನ್ನು ಈಗ ನಾವು ಕಾಪಾಡಬೇಕಾಗಿದೆ. ಇಲ್ಲವಾದಲ್ಲಿ, ಮಲಿನ ಗೊಂಡಿರುವ ಈ ಶಿಕ್ಷಣ ವ್ಯವಸ್ಥೆಯಿಂದ ನಮ್ಮ ಪೀಳಿಗೆಯನ್ನು ರಕ್ಷಿಸಬೇಕಾದರೆ ಇನ್ನು ಹಲವು ಹತ್ತು ತಲೆಮಾರುಗಳೇ ಬೇಕಾಗುತ್ತವೆ.

ರಾಜಶೇಖರ ಹಾದಿಮನಿ

ಸಾಮರ್‌ಸೆಟ್ ಮಾಮ್‌ನ ಆತ್ಮಚರಿತ್ರೆ— ಒಂದು ಪರಿಚಯ

(ಮುಂದುವರಿದುದು)

ಕಲೆ ಮತ್ತು ಸಾಹಿತ್ಯದ ಬಗ್ಗೆಯೇ ಹೆಚ್ಚು ಗೀಳಿದ್ದ ಮಾಮ್‌ಗೆ ವಿಜ್ಞಾನದ ಸಂಪರ್ಕವಾದ ಮೇಲೆ ಬಹಳ ಅನುಕೂಲವೇ ಆಯಿತು. ಇಡೀ ವಿಶ್ವವೇ ಒಂದು ಬೃಹತ್ ಯಂತ್ರ; ಭೂಮಿ ಕ್ರಮೇಣ ತಣ್ಣಗಾಗುತ್ತಿರುವ ಒಂದು ಯಃಕಶ್ಚಿತ್ ನಕ್ಷತ್ರದ ಸುತ್ತ ಸುತ್ತುತ್ತಿರುವ ಮಣ್ಣಿನ ಮುದ್ದೆ, ಮಾನವನ ಎಲ್ಲ ಚಟುವಟಿಕೆಗಳೂ ಈ ಗ್ರಹದ ಮೇಲೆ ಅವನು ಬದುಕಲು ಸಾಧ್ಯವಾಗುವಂತೆ ಅವನು ನಿರಂತರವಾಗಿ ಮಾಡಿಕೊಳ್ಳುವ ಹೊಂದಾಣಿಕೆಯಿಂದ ಪ್ರೇರೇಪಿಸಲ್ಪಟ್ಟದ್ದು ಎಂಬ ಮುಂತಾದ ಅಂಶಗಳು ಆತನಿಗೆ ಹೊಳೆದಾಗ, ಒಂದು ಬಗೆಯ 'ಬಿಡುಗಡೆ' ಸಿಕ್ಕಿದಂತಾಯಿತು. ಇಷ್ಟೆಲ್ಲಾ ಅನ್ನಿಸಿದ ಮೇಲೂ ಚೈತನ್ಯಪೂರ್ಣನಾದ ಮಾಮ್‌ಗೆ ಜೀವನದಿಂದ ಹೆಚ್ಚು ಖುಷಿ ದೊರೆಯುತ್ತಿತ್ತು. ಬರಹಗಾರನಾಗಿ ಹೆಸರು ಮಾಡಲು ಆತ ಮಹತ್ವಾಕಾಂಕ್ಷಿಯಾಗಿದ್ದ. ತನ್ನ ಅನುಭವದ ಬುತ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತೆ ಬದುಕಿನ ಎಲ್ಲ ಏರುಪೇರುಗಳಿಗೂ ತನ್ನನ್ನು ತಾನು ಒಡ್ಡಿಕೊಂಡ.

ಟಾಲ್‌ಸ್ಟಾಯ್‌ನ ಯುದ್ಧ ಮತ್ತು ಶಾಂತಿ, ವಾಲ್ಟೇರ್‌ನ ಕ್ಯಾಂಡೀಡ್‌ನ ಮಟ್ಟಕ್ಕೆ ಏರುವುದಾಗಲೀ, ಯಾವಾಗಲೂ ಮೈಕೆಲ್ ಎಂಜೆಲೋನ ಸಿಸ್ಟೈನ್ ಚಾಪೆಲ್‌ನೊಡನೆ ಬದುಕುವುದಾಗಲೀ ಸಾಧ್ಯವಿಲ್ಲದ ಮಾತು. ಮಾಮ್‌ಗೆ ತನ್ನ ಸ್ವಭಾವದ ಇತಿಮಿತಿಗಳು ಚೆನ್ನಾಗಿ ಗೊತ್ತಿತ್ತು. ತನ್ನ ಹುಟ್ಟುಗುಣದಿಂದಲೋ ಅಥವಾ ಬದುಕಿನ ಸಂದರ್ಭಗಳಿಂದಲೋ ಆತ ಸಂಘಜೀವಿಯಾಗಿರಲಿಲ್ಲ. ಕುಡಿದು ಮತ್ತನಾಗಿ ಇತರರನ್ನು ಆಪ್ತರೆಂದು ಅಪ್ಪಲಾರದವ ಆತ; ಕಾರಣ ಮೋಜಿನ ಕೂಟಗಳು ಯಾವಾಗಲೂ ಮಾಮ್‌ಗೆ ಬೋರು ಹೊಡೆಸುತ್ತಿದ್ದವು. ಎಷ್ಟೋ ಬಾರಿ ಪ್ರೀತಿಸಿದ್ದನಾದರೂ ಪ್ರತಿಫಲಿತ ಪ್ರೇಮದ ಸುಖದಿಂದ ಮಾತ್ರ ವಂಚಿತನಾದವ. ತನ್ನನ್ನು ಅಷ್ಟಾಗಿ ಪ್ರೀತಿಸದ, ಹೆಚ್ಚಿಗೆ ಹಚ್ಚಿಕೊಳ್ಳದ ಜನರನ್ನೇ ಅವನು ಹೆಚ್ಚು ಪ್ರೀತಿಸಿದ್ದು. ಸಂಪೂರ್ಣವಾಗಿ ಬೇರೆಯವರಿಗೆ ಶರಣಾಗುವುದೆಂದರೆ ಆತನಿಗೆ ಆಗುತ್ತಿರಲಿಲ್ಲ. ತನ್ನ ಸ್ವಾತಂತ್ರ್ಯವನ್ನು ಆತ ಹೆಚ್ಚು ಪ್ರೀತಿಸುತ್ತಿದ್ದ. ಇತರರಿಗೆ ಸಾಧ್ಯವಾಗುವ ಕೆಲವು ಮೂಲ

ಭೂತ ಭಾವನೆಗಳನ್ನು ಅನುಭವಿಸದೇ ಇರುವ ತನ್ನಂಥವನ ಕೃತಿಗಳಲ್ಲಿ ಆಪ್ತತೆ, ವಿಶಾಲವಾದ ಮಾನವೀಯತೆಯ ಸ್ಪರ್ಶ ಮತ್ತು ಪ್ರಶಾಂತತೆ ಕಾಣುವುದು ಅಸಾಧ್ಯವೆಂದೂ ಇವುಗಳನ್ನು ಕೊಡಲು ಮಹಾಲೇಖಕರಿಗೆ ಮಾತ್ರ ಶಕ್ಯ ವೆಂದೂ ಮಾಮ್ ಹೇಳುತ್ತಾನೆ.

"ನಾನೊಬ್ಬ ತಯಾರಾದ ಲೇಖಕ" ("I am a made writer") ಎಂದು ತನ್ನನ್ನು ತಾನು ಬಣ್ಣಿಸಿಕೊಂಡಿದ್ದಾನೆ. ಸ್ಪಷ್ಟವಾದ, ತಾರ್ಕಿಕ ವಾದ ಬುದ್ಧಿ ತನ್ನದಾಗಿದ್ದರೂ ಅದು ತುಂಬಾ ಸೂಕ್ಷ್ಮಗಳನ್ನು ಗ್ರಹಿಸುವಷ್ಟು ಪ್ರಖರವಾದದ್ದಲ್ಲ; ಆದರೂ ವಸ್ತುಗಳ ಕೊರತೆ ಆತನನ್ನು ಎಂದೂ ಕಾಡಲಿಲ್ಲ. ಅವನು ಬರೆಯುವುದಕ್ಕೆ ಆಗದಷ್ಟು ವಸ್ತುಗಳು ಯಾವಾಗಲೂ ಅವನ ತಲೆಯಲ್ಲಿ ತುಂಬಿಕೊಂಡಿದ್ದವು. ಬರೆಯುವುದಕ್ಕೇನೊ ಆಸೆ, ವಸ್ತುಗಳು ಹೊಳೆಯುತ್ತಿಲ್ಲ ಎಂದು ಗೊಣಗುವವರನ್ನು ಕಂಡರೆ ಮಾಮ್‌ಗೆ ಜೊನಾಥನ್ ಸ್ವಿಫ್ಟ್‌ನ ನೆನಪಾಗುತ್ತಿತ್ತು. ಸ್ವಿಫ್ಟ್ ಜಗತ್ತಿನ ಯಾವ ವಿಷಯದ ಮೇಲಾದರೂ ಬರೆಯಬಲ್ಲವನಾಗಿದ್ದವ; ಪೊರಕೆಕಡ್ಡಿಯ ಮೇಲೆ ಬರೆ ಎಂದು ಯಾರೋ ಶರತ್ತು ಹಾಕಿದಾಗ ಅದರ ಮೇಲೂ ಅದ್ಭುತವಾಗಿ ಬರೆದು ಬೆರಗುಂಟುಮಾಡಿದವ. ಒಬ್ಬ ವ್ಯಕ್ತಿಯೊಡನೆ ಒಂದು ಗಂಟೆ ಕಳೆದರೆ ಸಾಕು ಆ ವ್ಯಕ್ತಿಯ ಮೇಲೆ ಒಂದು ಸುಮಾರಾದ ಕತೆ ಬರೆಯಲು ಅವನಿಗೆ ಸಾಕಷ್ಟು ವಸ್ತು ಸಿಕ್ಕಿಬಿಡುತ್ತಿತ್ತು. ಹಗಲುಗನಸು ಸೃಜನಾತ್ಮಕ ಕಲ್ಪನೆಯ ತಳಹದಿ.... ಸೃಜನಾತ್ಮಕ ಲೇಖಕನ ಹಗಲುಗನಸು ಕೂಡ ಕ್ರಿಯಾತ್ಮಕವಾದದ್ದು.

ಮಾಮ್‌ನ ಕಲ್ಪನೆಯ ಮೂಸೆಯಿಂದ ಅನೇಕ ಪಾತ್ರಗಳು ಸೃಷ್ಟಿಯಾಗಿವೆಯಾದರೂ, ಬದುಕಿನ ನೇರ ಪಾತ್ರಗಳೇ ಹೆಚ್ಚು ಸಲ ಅವನ ಕತೆಗಳಲ್ಲಿ ಆವಿರ್ಭವಿಸಿವೆಯಾಗಿ ಒಂದು ರೀತಿಯಲ್ಲಿ ನಿಜ ಜೀವನದ ಜನ ತಮ್ಮ ಕತೆಗಳನ್ನು ತಾವೇ ಕಟ್ಟಿಕೊಂಡರು ಎನ್ನಬಹುದೇನೊ....ವಿಶಾಲವಾದ ರೆಕ್ಕೆಗಳ ಮೇಲೆ ಕುಳಿತು ದೀರ್ಘಕಾಲ ಅನಂತದಲ್ಲಿ ಹಾರಾಡುವ ಮಹಾಲೇಖಕರ ಸಾಮರ್ಥ್ಯ ತನಗೆ ಸಾಧ್ಯವಾಗಿಲ್ಲ; ತನ್ನ ಕಲ್ಪನೆ ಸದೃಢವಾಗಿಲ್ಲವಾಗಿ ಅದು ತನ್ನ ಇತಿಮಿತಿಗಳೊಳಗೆ ಮುದಿಡಿದೆ. ತಾನು ಕೇವಲ ಚಿಕ್ಕ ಚಿತ್ರಪಟದ ಮೇಲೆ ಚಿತ್ರ ರಚಿಸಿರುವೆನೇ ಹೊರತು ಬೃಹತ್ ಭಿತ್ತಿ ತನ್ನಿಂದ ದೂರವೇ ಉಳಿದಿದೆ ಎಂದು ಮಾಮ್ ಸ್ಪಷ್ಟಪಡಿಸುತ್ತಾನೆ.

ಹದಿನೆಂಟು ವರ್ಷ ವಯಸ್ಸು ಮುಟ್ಟುವಷ್ಟರಲ್ಲಿ ಫ್ರೆಂಚ್, ಜರ್ಮನ್ ಮತ್ತು ಸ್ವಲ್ಪ ಇಟಾಲಿಯನ್ ಭಾಷೆಯನ್ನು ಕಲಿತಿದ್ದ ಮಾಮ್‌ಗೆ ಕಲಿತಿರು

ವುದಕ್ಕಿಂತ ಕಲಿಯಬೇಕಾದದ್ದು ಬೇಕಾದಷ್ಟಿದೆ ಎಂದು ತಿಳಿದು ತನ್ನ ಅಜ್ಞಾನದ ಬಗ್ಗೆ ಬಹಳ ಮುಜುಗರವಾಗುತ್ತಿತ್ತು. ಸಕಾಲದಲ್ಲಿ ಸರಿಯಾದ ಮಾರ್ಗದರ್ಶನ ದೊರೆಯಲಿಲ್ಲ ಎಂದು ಅರಿವಾಗಿ ಸಿಕ್ಕಿದ್ದನ್ನೆಲ್ಲ ಓದಲು ಶುರುಮಾಡಿದ. ಈ ರೀತಿಯಾಗಿ ಎರಡು ತಿಂಗಳುಗಳಲ್ಲಿ ಓದಿದ ಪುಸ್ತಕಗಳ ಪಟ್ಟಿಯನ್ನು ಒಂದು ಕಡೆ ಕೊಟ್ಟಿದ್ದಾನೆ; ಅವರ ಪ್ರಕಾರ: ಶೇಕ್ಸ್‌ಪಿಯರನ ಮೂರು ನಾಟಕಗಳು, ಮೊಮೆನ್ಸ್‌ನ 'ರೋಮ್‌ನ ಚರಿತ್ರೆಯು' ಎರಡು ಸಂಪುಟಗಳು, ಲ್ಯಾನ್ಸನ್‌ನ 'ಫ್ರೆಂಚ್ ಸಾಹಿತ್ಯದ' ಬಹುಪಾಲು, ಎರಡು ಮೂರು ಕಾದಂಬರಿಗಳು, ಕೆಲವು ಫ್ರೆಂಚ್ ಕ್ಲಾಸಿಕ್ಸ್‌ಗಳು, ಒಂದೆರಡು ವೈಜ್ಞಾನಿಕ ಕೃತಿಗಳು ಮತ್ತು ಇಬ್‌ಸನ್‌ನ ಒಂದು ನಾಟಕ, ಚರಿತ್ರೆ, ತತ್ವಶಾಸ್ತ್ರ ಮತ್ತು ವಿಜ್ಞಾನವನ್ನು ಓದಿದ ಹಾಗಾಯಿತು. ಸೇಂಟ್ ಥಾಮಸ್ ಆಸ್ಪತ್ರೆಯಲ್ಲಿದ್ದಾಗ ಇಂಗ್ಲಿಷ್, ಫ್ರೆಂಚ್, ಇಟಾಲಿಯನ್ ಮತ್ತು ಲ್ಯಾಟಿನ್ ಸಾಹಿತ್ಯವನ್ನು ಕ್ರಮಬದ್ಧವಾಗಿ ಓದಿದ. ಉಳಿದವರಿಗೆ ಸಂಭಾಷಣೆ ಮತ್ತು ಇಸ್ಪೀಟಾಟ ವಿರಾಮವೆನಿಸಿದರೆ ಮಾಮ್ ಮಟ್ಟಿಗೆ ಓದುವುದೇ ವಿರಾಮವಾಯಿತು.

ಅನುಭವವಿಲ್ಲದೇ ಲೇಖಕನಾದವನಿಗೆ ಸಾಮಗ್ರಿ ದೊರೆಯುವುದಿಲ್ಲ ಎಂಬ ಕಾರಣಕ್ಕಾಗಿ ಮಾಮ್ ಜಗತ್ತಿನೊಡನೆ ಸಂಪರ್ಕ ಬೆಳೆಸಿದ. ಜೊತೆಗೆ ಅನುಭವ ತನ್ನಷ್ಟಕ್ಕೆ ತಾನೇ ಮೌಲಿಕವಾದದ್ದು ಎಂದು ಕೂಡ ಅನಿಸಿತು. ಸಾಮಾಜಿಕ ಸಂಪರ್ಕದಿಂದ, ಮಾನವ ಸಂಬಂಧಗಳಿಂದ, ಊಟ, ಮದ್ಯಪಾನ, ರತಿಸುಖ, ಐಶಾರಾಮ, ಕ್ರೀಡೆ, ಕಲೆ, ಪ್ರವಾಸ ಇವುಗಳಿಂದ, ಅಲ್ಲದೆ, ಹೆನ್ರಿ ಜೇಮ್ಸ್ ಹೇಳಿದಂತೆ ಎಲ್ಲ ಮೂಲಗಳಿಂದ ತೃಪ್ತಿ ಗಳಿಸಬೇಕೆಂದು ದೃಢ ಸಂಕಲ್ಪ ಮಾಡಿದ. ಆದರೆ ಇದೆಲ್ಲ ಪ್ರಯತ್ನಪೂರ್ವಕವಾದ ಕ್ರಿಯೆ ಎನಿಸಿ ಮತ್ತೆ ತನ್ನ ಪುಸ್ತಕಗಳಿಗೆ ಮತ್ತು ಆಪ್ತವಲಯಕ್ಕೆ ವಾಪಸ್ಸಾಗಿ ಬಿಡುಗಡೆ ಪಡೆದ.

ವಿಮರ್ಶಾಗ್ರಂಥವನ್ನು ಮಾಮ್ ಹೆಚ್ಚು ಓದುವ ಪ್ರವೃತ್ತಿ ಹೊಂದಿರಲಿಲ್ಲ. ಆಗೊಂದು ಈಗೊಂದು ಓದಿದರೆ ಹೆಚ್ಚು. ಆದಾಗ್ಯೂ ನಾವು ಓದಿರುವ ಕೆಲವು ಲೇಖಕರ ಬಗ್ಗೆ ಬುದ್ಧಿವಂತನಾದ ವ್ಯಕ್ತಿ ಏನು ಹೇಳುತ್ತಾನೆ ಎಂದು ತಿಳಿಯುವುದು ಕುತೂಹಲಕರವಾದದ್ದು ಎನ್ನುತ್ತಾನೆ. ತನ್ನ ಓದಿನ ಕ್ರಮದ ಬಗ್ಗೆ ಮಾಮ್ ಹೇಳುವ ಮಾತುಗಳು ಗಮನಾರ್ಹ: "ನಾನು ವಿದ್ವಾಂಸನಲ್ಲ, ವಿದ್ಯಾರ್ಥಿಯೂ ಅಲ್ಲ, ವಿಮರ್ಶಕನಲ್ಲ; ನಾನೊಬ್ಬ ವೃತ್ತಿಪರ ಲೇಖಕನಾಗಿರುವುದರಿಂದ ನನ್ನ ಕಸಬಿಗೆ ಉಪಯೋಗವಾಗುವ ಕೃತಿಗಳನ್ನೇ ನಾನು ಓದುವುದು."

ಮಾಮ್ ಬರೆದ ಮೊದಲನೆಯ ಕಾದಂಬರಿಯೇ ಅವನಿಗೆ ಯಶಸ್ಸು ತಂದದ್ದರಿಂದ ವೈದ್ಯಕೀಯ ವೃತ್ತಿಯನ್ನು ಬಿಟ್ಟು ಪೂರ್ಣವಾಗಿ ಬರಹಗಾರನಾಗಲು ನಿರ್ಧರಿಸಿ ಸ್ಪೇನ್‌ಗೆ ಹೋದ. ಆಗ ಅವನಿಗೆ ಇಪ್ಪತ್ತು ವರ್ಷ. ಸ್ಪೇನ್, ರೋಮ್, ಗ್ರೀಸ್ ಮತ್ತು ಕೈರೊದಲ್ಲಿ ಕ್ರಮವಾಗಿ ಸ್ಪ್ಯಾನಿಷ್, ಲ್ಯಾಟಿನ್ ಗ್ರೀಕ್ ಮತ್ತು ಅರೇಬಿಕ್ ಭಾಷೆಗಳನ್ನು ಕಲಿಯಬೇಕೆಂಬುದು ಅವನ ಮಹದಾಸೆಯಾಗಿತ್ತು. ಆದರೆ ಇದು ನನಸಾಗಲಿಲ್ಲ. ಒಂದು ರೀತಿಯಲ್ಲಿ ಅದೆಲ್ಲ ಒಳ್ಳೆಯದಕ್ಕೇ ಆಯಿತು. ಕಾರಣ, ಹೊರಗಿನ ಭಾಷೆಯನ್ನು ಎಷ್ಟು ಓದಿದರೂ ಅಂತರಂಗದ ಸ್ಪಂದನಕ್ಕೆ ಪಕ್ಕಾಗುವುದಿಲ್ಲ ಎಂಬ ಸತ್ಯ ಅವನಿಗೆ ಗೋಚರವಾಯಿತು.

ತನ್ನ ನಾಟಕಗಳು ಪ್ರದರ್ಶನಗೊಳ್ಳುತ್ತಿರುವಾಗ ಮಾಮ್ ಆಗಂತುಕನ ರೀತಿಯಲ್ಲಿ ಪ್ರೇಕ್ಷಕರಲ್ಲೊಬ್ಬನಾಗಿ ಕುಳಿತುಕೊಳ್ಳುತ್ತಿದ್ದ. ಸಂಭಾಷಣೆಯ ಸೊಗಸಿಗೊ, ಹಾಸ್ಯದ ಮಿಂಚಿಗೊ ಜನ ಕರತಾಡನ ಮಾಡುವಾಗ ಯಾಕೋ ಅವನಿಗೆ ಖುಷಿ ಎನಿಸುತ್ತಿರಲಿಲ್ಲ. ಇದಕ್ಕೆ ಕಾರಣ, ತನಗೆ ಅತ್ಯಂತ ಆಪ್ತವಾದ ನುಡಿಸಮೂಹ ತನ್ನ ಅಂತರಂಗದಿಂದ ಹೊರಬಿದ್ದು ಬಹಿರಂಗವಾಗಿ ಮುಜುಗರ ತರಲು ಶುರುವಾದುದ್ದರಿಂದ. ತೀರಾ ಖಾಸಗಿಯಾದ ಅನುಭವಗಳನ್ನು ಜನಜಂಗುಳಿಯೊಡನೆ ಹಂಚಿಕೊಳ್ಳಲು ಅವನ ಮನಸ್ಸು ಹಿಂಜರಿಯುತ್ತಿತ್ತು.

ಇನ್ನು ಅಭಿನಯ ಕಲೆಯ ಬಗ್ಗೆ ಮಾಮ್ ಹೇಳುವಂತೆ, ಸುಂದರಿಯರಾದ ಹೆಣ್ಣು ಮಕ್ಕಳೆಲ್ಲ ನಟಿಯರಾಗುವುದಾಗಲಿ, ಸುಂದರವಾದ ಅಂಗಸೌಷ್ಠವವುಳ್ಳ ತರುಣರೆಲ್ಲ ನಟರಾಗುವುದಾಗಲೀ ಸಾಧ್ಯವಿಲ್ಲದ ಮಾತು. ಅದೊಂದು ತಪಸ್ಸು; ಸಾಧನೆಗೆ ಅಗಾಧವಾದ ತಾಳ್ಮೆ ಅತ್ಯಗತ್ಯ. ನಿರಾಶೆ ಇಲ್ಲೆಲ್ಲ ತುಂಬಿರುತ್ತದೆ. ರಂಗದ ಮೇಲೆ ಮತ್ತೆ ಮತ್ತೆ ಕಾಣಿಸಿಕೊಂಡು ಖುಷಿಕೊಡುವವರೆಗೆ ಮಾತ್ರ ನಟನನ್ನು ಜನ ನೆನಪಿಸಿಕೊಳ್ಳುತ್ತಾರೆ. ಸ್ವಲ್ಪ ಮರೆಯಾದರೂ ಕೂಡಲೇ ಅವನನ್ನು ಮರೆಯುತ್ತಾರೆ.

ನಾಟಕವನ್ನು ಅಭಿನಯಿಸುವುದೆಂದರೆ ಅದೊಂದು ಟೀಮ್ ವರ್ಕ್. ನಾಟಕ ಮಾಧ್ಯಮ ಬಯಸುವ ಹೊಂದಾಣಿಕೆಯನ್ನು ಸಾಧಿಸುವುದು ತನ್ನಿಂದ ಆಗದು ಎಂದು ಮಾಮ್‌ಗೆ ಅರಿವಾಯಿತು. ನಿರ್ದೇಶಕನ ಜೊತೆ, ನಟರ ಜೊತೆ ರಾಜಿ ಮಾಡಿಕೊಂಡು ಅವರ ಪ್ರತಿಭೆಯೇ ಪರಮಶ್ರೇಷ್ಠ ಎಂದು ಒಪ್ಪಿಕೊಳ್ಳುವುದು ಆತನಿಗೆ ಕಷ್ಟವಾಯಿತು. ತನ್ನ ಅಂತರಾಳದ ಇಚ್ಛೆಯನ್ನು ತಪ್ಪು ತಪ್ಪಾಗಿ ನಿರ್ದೇಶಕ ವ್ಯಾಖ್ಯಾನ ಮಾಡುವಾಗಲೂ ತಾನೇನೂ ಮಾಡಲಾರದೆ ಅಸಹಾಯಕ

ನಾಗಿರಬೇಕಾಗಿತ್ತು. ನಟರ ಬಗ್ಗೆಯಂತೂ ಮಾತನಾಡುವುದೇ ಬೇಡ. ಕೆಲವು ಪಾತ್ರಗಳನ್ನು ಅವನ ಮನಸ್ಸೊಪ್ಪುವ ಹಾಗೆ ಕೆಲವು ನಟರು ಅಭಿನಯಿಸಿದ್ದರಾದರೂ ಎಲ್ಲ ಪಾತ್ರಗಳಿಗೂ ಅದೇ ಬಗೆಯಾದ ಪುಣ್ಯ ಲಭಿಸಿರುವುದೆಂದು ಹೇಳಲಾಗದು. ನುರಿತ ನಟರಿಗೆ ಹೆಚ್ಚು ಸಂಬಳ ಕೊಡಲಾರದ ಕಾರಣಕ್ಕೊ ಏನೊ ಮೇನೇಜರು ಕೈಗೆ ಸಿಕ್ಕ ನಟರನ್ನೊ ಅಥವಾ ಚೆನ್ನಾಗಿ ಪರಿಚಯವಿರುವ ನಟರನ್ನೊ ಕರೆದು ಆಡಿಸುವ ಚಾಳಿಗೆ ಒಳಗಾದ ಮೇಲೆ ಅಂಥ ನಾಟಕದಿಂದ ಏನನ್ನು ನಿರೀಕ್ಷಿಸುವುದು? ಇವೆಲ್ಲದರ ಬಗ್ಗೆ ಮಾಮ್‌ಗೆ ಎಷ್ಟು ಜಿಗುಪ್ಸೆಯಾಯಿತೆಂದರೆ ಯಾವುದಾದರೂ ಥಿಯೇಟರ್‌ನಲ್ಲಿ ತನ್ನ ನಾಟಕವೊಂದು ಪ್ರದರ್ಶಿಸಲ್ಪಡುತ್ತಿದೆ ಎಂದು ಗೊತ್ತಾದರೆ, ಆ ಬೀದಿಯನ್ನೇ ಬಿಟ್ಟು, ಬೇರೆ ಬೀದಿಯಲ್ಲಿ ನಡೆದು ಹೋಗುತ್ತಿದ್ದ. ಇನ್ನು ಪ್ರೇಕ್ಷಕರ ಬಗ್ಗೆ ಅವನ ಜಿಗುಪ್ಸೆ ಇನ್ನೂ ಹೆಚ್ಚಾಯಿತು. ಅವರ ನಿರೀಕ್ಷೆ, ಅಭಿರುಚಿ ಮತ್ತು ಸ್ಪಂದನ ಆತನಿಗೆ ಒಗ್ಗಲಿಲ್ಲ. ಯಾವ ಯಾವ ಸಂಭಾಷಣೆಯಲ್ಲಿ ಅವರು ಯಾವ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ ಎಂದು ಅವನಿಗೆ ಅರಿವಾಯಿತು. ಹಾಗಾಗಿ ಹೆಚ್ಚು ಯಶಸ್ವೀ ನಾಟಕಗಳನ್ನು ಬರೆಯುವುದು ಅವನಿಗೆ ನೀರುಕುಡಿದಷ್ಟು ಸುಲಭವಾಯಿತು. ಬೇರೆ ನಾಟಕಕಾರರ ಯಶಸ್ವೀ ನಾಟಕಗಳನ್ನೂ ಆತ ನೋಡುತ್ತಿದ್ದ. ಆದರೆ ಭಾರೀ ಜಯಭೇರಿ ಹೊಡೆಯುತ್ತಿದ್ದ ಆ ನಾಟಕಗಳನ್ನು ಯಾಕಾಗಿ ತಂಡೋಪ ತಂಡವಾಗಿ ನುಗ್ಗಿ ನೋಡುತ್ತಾರೆ ಎಂದು ಮಾತ್ರ ಆತನಿಗೆ ಅರ್ಥವಾಗಲಿಲ್ಲ.

ಈ ಎಲ್ಲ ಕಾರಣಗಳಿಂದ ಕಥಾ ಪ್ರಕಾರ ಕೊಡುವ ಸ್ವಾತಂತ್ರ್ಯಕ್ಕಾಗಿ ಅವನ ಮನಸ್ಸು ಹಂಬಲಿಸತೊಡಗಿತು. ಏಕಾಂತದಲ್ಲಿ ಕುಳಿತು ತಾನು ಹೇಳುವುದನ್ನೆಲ್ಲ ಕೇಳಿಸಿಕೊಳ್ಳುವ ಓದುಗನೊಡನೆ ತಾನು ಸಾಧಿಸುವ ಆಪ್ತತೆ ರಂಗದ ಬಹಿರಂಗ ಗದ್ದಲದಲ್ಲಿ ದೊರೆಯದೆಂದು ಅವನಿಗೆ ಮನದಟ್ಟಾಯಿತು. ತಮ್ಮ ಖ್ಯಾತಿ ಕ್ಷೀಣಿಸಿದ ಅನಂತರವೂ ಚಲಾವಣೆಗೆ ತವಕಪಡುತ್ತಾ ಮೇನೇಜರ್‌ರವರ ಬಳಿಗೆ ಶತಪಥ ಇಕ್ಕುವ ನಾಟಕಕಾರರನ್ನು ಮಾಮ್ ಕಂಡಿದ್ದ. ನಟರೂ ಮೇನೇಜರ್‌ಗಳೂ ಇಂಥ ನಾಟಕಕಾರರ ಬಗ್ಗೆ ಗೊಣಗುವುದನ್ನೂ ನೋಡಿದ್ದ. ಪರಿಸ್ಥಿತಿ ಚೆನ್ನಾಗಿರುವಾಗಲೇ ಜಾಗ ಖಾಲಿ ಮಾಡುವುದು ಒಳ್ಳೆಯದೆಂದು ಪ್ರಸಿದ್ಧ ನಾಟಕಕಾರರ ಕೊನೆಯ ದಿನಗಳನ್ನು ಗಮನಿಸಿದ್ದ ಮಾಮ್‌ಗೆ ಹೊಳೆಯಿತು.

ಈ ರೀತಿ ಪ್ರತಿಜ್ಞೆ ಮಾಡಿದ ಅನಂತರವೂ ಆತನ ಮನಸ್ಸಿನಲ್ಲಿ ಮೂರು ನಾಲ್ಕು ನಾಟಕಗಳು ಮನೆಮಾಡಿದ್ದವು. ಇವುಗಳನ್ನು ಬರೆಯದೇ ಆತ ನಿರ್ಗಮಿಸುವಂತೆ ಕಾಣಲಿಲ್ಲ. ಈ ದಿಶೆಯಲ್ಲಿ ಹೆಸರಿಸಬಹುದಾದ ನಾಟಕ 'ದಿ ಸೇಕ್ರೆಡ್

ಫ್ಲೇಮ್'. ೧೮೯೮ರಲ್ಲಿ ಮಾಮ್ ತನ್ನ ಪೂರ್ಣಪ್ರಮಾಣದ ಮೊದಲ ನಾಟಕವನ್ನು ಬರೆದ; ಅಂತೆಯೇ ೧೯೩೩ರಲ್ಲಿ ಕೊನೆಯ ನಾಟಕದ ರಚನೆ ಮಾಡಿದ. ಈ ಗಡುವಿನಲ್ಲಿ ನಾಟಕಗಳ ಸಂಭಾಷಣೆ ಪಿನೆರೊ ಮತ್ತು ಆಸ್ಕರ್ ವೈಲ್ಡ್ ಅವರ ಕೃತಕತೆಯನ್ನು ದಾಟಿ ಇಂದಿನ ಆಡುಭಾಷೆಗೆ ತೀರಾ ಹತ್ತಿರವಾಗಿ ಬಂದಿತ್ತು. ಆಡುಭಾಷೆಗೆ ಅತಿ ಸಮೀಪವಾಗುವ ಉತ್ಸಾಹದಲ್ಲಿ ನಾಟಕಕಾರರು ವ್ಯಾಕರಣರಹಿತವಾದ ಹರಕು ಮುರುಕು ಸಂಭಾಷಣೆಯನ್ನು ಯಥೇಚ್ಛವಾಗಿ ಬರೆಯತೊಡಗಿದರು. ಈ ಮಾರ್ಗದ ಅತಿಗೆ ವಿರುದ್ಧವಾಗಿ ಮಾಮ್ ಬರೆದ ಶಾಸ್ತ್ರೀಯ ರೀತಿಯ ಸಂಭಾಷಣೆಯನ್ನು ಕಂಡ ವಿಮರ್ಶಕರು ನಿಜಜೀವನದಲ್ಲಿ ಜನ ಹೀಗೆ ಮಾತನಾಡುತ್ತಾರೆಯೇ ಎಂದು ಮೂಗು ಮುರಿದರು.ಹಾಗಾಗಿ, ಕಡೆಯ ಎರಡು ನಾಟಕಗಳಲ್ಲಿ ಆರಂಭದಲ್ಲಿ ಅನುಸರಿಸಿದ್ದ ಸಂಭಾಷಣಾ ಶೈಲಿಯನ್ನು ಮತ್ತೆ ಅನುಸರಿಸಿದ. ಪರ್ವತ ಪ್ರದೇಶದಲ್ಲಿ ಅನೇಕ ದಿನಗಳ ಕಾಲ ಸಂಚರಿಸುತ್ತಿದ್ದು, ಬಯಲನ್ನು ಕಾಣಲು ತವಕಪಟ್ಟೂ ಕಾಣಲಾಗದೆ, ನಿರಂತರ ಸಂಚಾರದ ನಂತರ ಒಂದು ದಿನ ದಿಗ್ಗನೆ ಬಯಲು ಎದುರಾಗುವಂತೆ ಕಡೆಯ ನಾಟಕ ಬರೆದು ಮುಗಿಸುವಾಗ ಮಾಮ್‌ಗೆ ಪೂರ್ಣ ಬಿಡುಗಡೆ ದೊರಕಿದ ಅನುಭವವಾಯಿತು.

ಕಾಲದ ದೃಷ್ಟಿಯಿಂದ ಗ್ರೀಕ್‌ನಾಟಕಗಳು ಬಹಳ ಪೂರ್ವದಲ್ಲಿ ಸೃಷ್ಟಿಯಾದುದರಿಂದ ಅವುಗಳಲ್ಲಿನ ದೋಷಗಳು ಗೌಣವಾಗುತ್ತವೆ. ಆದರೆ ವ್ಯಕ್ತಿಪೂಜೆಯ ಮರುಳಿಗೆ ಈಡಾದವರನ್ನು ಬಿಟ್ಟು ಉಳಿದವರಿಗೆ ಶೇಕ್ಸ್‌ಪಿಯರ್ ಮತ್ತು ಇಬ್ಸನ್‌ರಂಥ ಮಹಾ ನಾಟಕಕಾರರಲ್ಲಿಯೂ ದೋಷಗಳಿರುವುದು ಗೋಚರವಾಗುತ್ತದೆ. ಆ ಕಾರಣದಿಂದಾಗಿ, ಪರಿಪೂರ್ಣವೂ, ನಿರ್ದುಷ್ಟವೂ ಆದ ನಾಟಕವನ್ನು ಬರೆಯುವುದು ಅಸಾಧ್ಯವೇ ಸರಿ. ಕಾದಂಬರಿ ಮತ್ತು ಸಣ್ಣಕತೆಗಳ ಮಾಧ್ಯಮದಲ್ಲಿ ನಾಟಕರಂಗಕ್ಕಿಂತ ಹೆಚ್ಚು ಪರಿಪೂರ್ಣತೆ ಸಾಧಿಸಲು ಸಾಧ್ಯ ಎಂದು ಮಾಮ್‌ಗೆ ಅನ್ನಿಸಿತು.

ಈ ಗುಂಗಿನಲ್ಲಿ ಮಾಮ್ ಬರೆದ ಮೊದಲನೆಯ ಕಾದಂಬರಿ ಲಿಜಾ ಆಫ್ ಲ್ಯಾಂಬೆತ್. ಮೊದಲನೆಯ ಪ್ರಕಾಶಕನೇ ಅದೃಷ್ಟವಶಾತ್ ಹಸ್ತಪ್ರತಿಯನ್ನು ಸ್ವೀಕರಿಸಿದ. ಮಾಮ್ ಕಳುಹಿಸಿದ್ದ ಎರಡು ಸಣ್ಣಕತೆಗಳನ್ನು ವಾಪಸ್ಸುಮಾಡಿ 'ಇದ್ದರೆ ಒಂದು ಕಾದಂಬರಿ ಕಳುಹಿಸು' ಎಂದು ಫಿಷರ್ ಅನ್‌ವಿನ್ ತಿಳಿಸಿದ ಕಾರಣ ಅವನಿಗೆ ಪ್ರೋತ್ಸಾಹ ಸಿಕ್ಕಂತಾಗಿ ದಿನವೆಲ್ಲ ಸೇಂಟ್‌ಥಾಮಸ್ ಆಸ್ಪತ್ರೆಯಲ್ಲಿ ಕೆಲಸಮಾಡಿ ಸಂಜೆ ಬೇಗ ಊಟ ಮುಗಿಸಿ ಬರೆಯಲು ಕುಳಿತುಕೊಳ್ಳು

ತ್ತಿದ್ದ. ಪುಸ್ತಕ ಪ್ರಕಟಣೆಯಾದ ಒಂದು ತಿಂಗಳಲ್ಲೇ ಎರಡನೆಯ ಮುದ್ರಣ ಕಂಡಿತು. ಆಗ ಸಿಕ್ಕ ಗೌರವಧನ ಕೇವಲ ಇಪ್ಪತ್ತು ಪೌಂಡುಗಳು. ಆ ಕಾಲದಲ್ಲಿ ಕೆಳವರ್ಗ ಎಂದು ಕರೆಸಿಕೊಳ್ಳುತ್ತಿದ್ದ ಜನರ ಜೀವನವನ್ನು ಕುರಿತ ಕತೆಗಳನ್ನು ಜನ ಓದಲು ಉತ್ಸಾಹ ತೋರಿದುದು ಮಾಮ್ ಕಾದಂಬರಿಯ ಜನಪ್ರಿಯತೆಗೆ ಕಾರಣವಾಯಿತು. ಈ ಬಗೆಯ ಅಭಿರುಚಿಯನ್ನು ಕೆರಳಿಸಲು ಆರ್ಥರ್ ಮಾರಿಸನ್‌ನ ಟೇಲ್ಸ್ ಆಫ್ ಮೀನ್ ಸ್ಟ್ರೀಟ್ಸ್ ಮತ್ತು ಎ ಚೈಲ್ಡ್ ಆಫ್ ದಿ ಜಾಗೊ ಬಹುತೇಕ ಕಾರಣವಾಗಿದ್ದವು.

ಬರೆಹದ ಬಗ್ಗೆ ಮಾಮ್‌ಗೆ ಹೆಚ್ಚೇನೂ ತಿಳಿದಿರಲಿಲ್ಲ. ವಯಸ್ಸಿಗೆ ಮೀರಿ ಓದಿಕೊಂಡಿದ್ದನಾದರೂ ವ್ಯವಸ್ಥಿತ ಅಧ್ಯಯನ ಆದಾಗಿರಲಿಲ್ಲ; ಕೈಗೆ ಸಿಕ್ಕಿದ್ದು ಓದಿ ಯಾರ್ಯಾರು ಏನೇನು ಹೇಳುತ್ತಾರೆ ಎಂದು ತಿಳಿದುಕೊಳ್ಳುವ ಕುತೂಹಲದ ಕಾಲ. ಅವುಗಳಿಂದ ಅಷ್ಟಿಷ್ಟು ದಕ್ಕಿತು ಎನ್ನುವ ಮಾತು ನಿಜ, ಆದರೆ ಮಾಮ್ ಬರೆಯಲು ಪ್ರಾರಂಭಮಾಡಿದ ಕಾಲಕ್ಕೆ ಅವನ ಮೇಲೆ ಹೆಚ್ಚು ಪ್ರಭಾವ ಬೀರಿದವೆಂದರೆ ಗೈ ಡಿ ಮೊಪಾಸೊನ ಕಾದಂಬರಿ ಮತ್ತು ಸಣ್ಣಕಥೆಗಳು. ಮಾಮ್‌ಗೆ ಆಗ ಕೇವಲ ಹದಿನಾರು ವರ್ಷ. ಪ್ಯಾರಿಸ್‌ಗೆ ಹೋದಾಗಲೆಲ್ಲ ಓಡಿಯೋನ್ ಗ್ಯಾಲರಿಯ ಲೈಬ್ರರಿಯಲ್ಲಿ ಕಾಲ ಕಳೆಯುತ್ತಿದ್ದ. ಅಲ್ಲಿ ಲಭ್ಯವಿದ್ದ ಮೊಪಾಸೊನ ಎಲ್ಲ ಗ್ರಂಥಗಳನ್ನು ಓದಿ ಮುಗಿಸಿದ. ಹೊರಗಡೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅವನಲ್ಲಿ ಹಣವಿರಲಿಲ್ಲ. ತರುವಾಯದಲ್ಲಿ ಮೊಪಾಸೊ ಅಷ್ಟು ಪ್ರಭಾವಶಾಲಿ ಲೇಖಕನಾಗಿ ಉಳಿಯಲಿಲ್ಲವಾದರೂ ಆ ಕಾಲಕ್ಕೆ ಇಂಗ್ಲೀಷ್ ಲೇಖಕರಿಗಿಂತ ಹೆಚ್ಚು ಮೊಪ್ರೊಸೊ ಮಾಮ್‌ನ ಗಮನ ಸೆಳೆಯುವುದಕ್ಕೆ ಮುಖ್ಯ ಕಾರಣ ಸರಳವಾಗಿ, ನೇರವಾಗಿ ಕಥೆ ನಿರೂಪಿಸುವ ಅವನ ವಿಧಾನ ಮತ್ತು ಒಂದು ಸಂದರ್ಭದ ನಾಟಕೀಯತೆಯನ್ನು ಸಮಗ್ರವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ.

ಕೊಳಚೆ ಪ್ರದೇಶವನ್ನು ವಸ್ತುವಾಗುಳ್ಳ ಇನ್ನೊಂದು ದೀರ್ಘವಾದ ಕಾದಂಬರಿ ಬರೆಯಬೇಕೆಂದು ಮಾಮ್‌ನನ್ನು ಅನಿವಿನ್ ಫಿಷರ್ ಒತ್ತಾಯಿಸಿದ. ಲಿಜಾ ಆಫ್ ಲ್ಯಾಂಬೆತ್‌ನಲ್ಲಿ ಅಂಥ ಬದುಕನ್ನು ಕುರಿತು ತಾನು ಹೇಳಬೇಕಾದುದನ್ನೆಲ್ಲ ಹೇಳಿಯಾಗದೆ ಎಂದು ಮಾಮ್‌ಗೆ ಅನ್ನಿಸಿದ್ದರಿಂದ ಫಿಷರ್‌ನ ಒತ್ತಾಯಕ್ಕೆ ಮಣಿಯಲಿಲ್ಲ. ಬದಲಾಗಿ ಮ್ಯಾಕಿಯಾವೆಲ್ಲಿಯ ಫ್ಲಾರೆನ್ಸಿನ ಚರಿತ್ರೆಯನ್ನು ಓದಿ ಅದರಲ್ಲಿನ ಕಥೆಯೊಂದರ ಆಧಾರದ ಮೇಲೆ ಇಟಲಿಯನ್ನು ಕುರಿತಾದ ಒಂದು ಕಾದಂಬರಿ ಬರೆದ. ಕಾದಂಬರಿ ಕಲೆಯ ಬಗ್ಗೆ ಆ್ಯಂಡ್ರೂ ಲ್ಯಾಂಗ್ ಬರೆದ ಕೆಲವು

ಲೇಖನಗಳು ಈ ಕಾದಂಬರಿಗೆ ಸ್ಫೂರ್ತಿ ನೀಡಿದ್ದವು. ಲ್ಯಾಂಗ್‌ನ ಪ್ರಕಾರ ಉದಯೋನ್ಮುಖ ಬರಹಗಾರ ಬದುಕಿನಲ್ಲಿ ಅನುಭವವನ್ನು ಗಳಿಸುವವರೆಗೆ ಐತಿಹಾಸಿಕ ಕಾದಂಬರಿಗಳನ್ನು ಬರೆಯುವುದು ಒಳ್ಳೆಯದು, ಕಾರಣ ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ವಸ್ತು, ಸನ್ನಿವೇಶ ಮತ್ತು ಪಾತ್ರಗಳು ಸಿದ್ಧವಾಗಿ ದೊರೆಯುತ್ತವೆ. ಆದರೆ ಮಾಮ್‌ನ ಅನುಭವಕ್ಕೆ ಬಂದ ರೀತಿಯಲ್ಲಿ ಬರಹಗಾರ ಬದುಕಿನಲ್ಲಿ ಮಾಗಿದ ನಂತರವೇ ಐತಿಹಾಸಿಕ ಕಾದಂಬರಿಗಳನ್ನು ಬರೆಯಬೇಕಾದದ್ದು, ಏಕೆಂದರೆ ತನ್ನ ಬದುಕಿನ ಪರಿಣಿತಗಳು ಮತ್ತು ಆಲೋಚನೆಗಳು ಪರಕಾಯಪ್ರವೇಶಕ್ಕೆ ಅನುಕೂಲ ಮಾಡಿಕೊಡುವುದರಿಂದ ಗತಕಾಲದ ಚಿತ್ರವನ್ನು ಕಂಡರಿಸಲು ತುಂಬಾ ಸಹಾಯವಾಗುವುದು.

ತನ್ನ ಮೊದಲ ಪುಸ್ತಕ ಅಷ್ಟು ಶೀಘ್ರವಾಗಿ ಪ್ರಕಟವಾಗಬಾರದಿತ್ತು ಎಂದು ಮಾಮ್ ಹೇಳುತ್ತಾನೆ. ಅವನ ಪ್ರಕಾರ ಪ್ರಕಾಶಕರಿಂದ ಪ್ರಕಾಶಕರಿಗೆ ಅಲೆಯುವ ಪರಿಸ್ಥಿತಿ ತಲೆದೋರಿದ್ದ ಪಕ್ಷದಲ್ಲಿ ತಾನು ಇನ್ನೂ ಹೆಚ್ಚು ಪರಿಪೂರ್ಣವಾದ ರೀತಿಯಲ್ಲಿ ಬರೆಯಬಹುದಿತ್ತೇನೊ ಎಂದು ಅವನ ಶಂಕೆ. ಮೊಪಾಸೊ ಬಹಳ ಕಾಲದವರೆಗೆ ತಾನು ಬರೆದದ್ದನ್ನೆಲ್ಲ ಫ್ಲೊಬೊಗೆ ತೋರಿಸುತ್ತಿದ್ದನಂತೆ. ಹಾಗಾಗಿ ಮೊಪಾಸೊನ ಮೊದಲಕೃತಿ ಪ್ರಕಟವಾದದ್ದು ಬಹಳ ನಿಧಾನವಾಗಿ. ಸಾರ್ವಜನಿಕರ ಮುಂದೆ ಪ್ರತ್ಯಕ್ಷವಾಗುವುದಕ್ಕೆ ಮೊದಲು ಮೊಪಾಸೊನ ಹಾಗೆ ಬರಹದ ಕೃಷಿಯನ್ನು ತಾಳ್ಮೆಯಿಂದ ಮಾಡುವ ಜನ ಕಡಿಮೆ ಮತ್ತು ಫ್ಲೊಬೊನಂಥ ದೊಡ್ಡ ಲೇಖಕರನ್ನು ಮಾರ್ಗದರ್ಶಿಗಳಾಗಿ ಪಡೆಯುವ ಭಾಗ್ಯವಂತರಂತೂ ತೀರ ವಿರಳ. ಮಾಮ್‌ಗೆ ಯಾರೂ ಮಾರ್ಗದರ್ಶಿಗಳು ದೊರೆಯಲಿಲ್ಲ. ಹಲಕೆಲವು ಲೇಖಕ ಗೆಳೆಯರು ಆತನಿಗೆ ಇದ್ದರಾದರೂ ಅವರಿಂದ ಅವನಿಗೆ ಹೆಚ್ಚು ಲಾಭವಾಗುವುದು ಎಂದನಿಸಲಿಲ್ಲ. ಇದರ ಜೊತೆಗೆ ಮಾಮ್, ಹಿಂಜರಿಕೆಯ ಸಂಕೋಚ ಮತ್ತು ಒಂದು ಬಗೆಯ ಅಹಂಕಾರದ ಮಿಶ್ರಣವಾಗಿದ್ದ. ಇಂಗ್ಲೀಷ್ ಕಾದಂಬರಿಕಾರರಿಗಿಂತ ಮಾಮ್ ಫ್ರೆಂಚ್ ಕಾದಂಬರಿಕಾರರಿಂದ ಹೆಚ್ಚು ಪಡೆದು, ಮೊಪಾಸೊನಿಂದ ತನ್ನ ಶಕ್ತ್ಯಾನುಸಾರ ಲಾಭ ಗಳಿಸಿಯಾದ ಮೇಲೆ, ಸ್ಟೆಂಡಾಲ್, ಬಾಲ್‌ಝಾಕ್, ಫ್ಲೊಬೊ ಮತ್ತು ಅನತೋಲಿ ಫ್ರಾನ್ಸ್‌ರ ಕಡೆ ತಿರುಗಿದ.

> "ಒಂದು ದೇಶದ ಸಾಹಿತ್ಯವನ್ನು ಸಮೃದ್ಧಿಗೊಳಿಸುವವರು ಆ ದೇಶದ ವೃತ್ತಿಪರ ಬರಹಗಾರರೇ ಹೊರತು ಹವ್ಯಾಸೀ ಬರಹಗಾರರಲ್ಲ. ಹವ್ಯಾಸೀ ಬರಹಗಾರರು ಸೃಷ್ಟಿಸುವ ಒಂದೊ ಎರಡೊ ಪುಸ್ತಕಗಳಿಂದ ಸಾಹಿತ್ಯ

ನಿರ್ಮಾಣವಾಗುವುದಿಲ್ಲ. ಬದುಕನ್ನು ನಡೆಸುವುದಕ್ಕೆ ಕಷ್ಟಕರವಾದರೂ ಸಾಹಿತ್ಯವನ್ನು ಬಿಡದೆ ಕೃಷಿ ಮಾಡುವ ಮಂದಿಯಿಂದ ಮಾತ್ರ ದೊಡ್ಡ ಸಾಹಿತ್ಯ ನಿರ್ಮಾಣವಾಗಿದೆ. ಈ ವೃತ್ತಿಪರ ಲೇಖಕನಿಗೂ ಸಹ ಒಂದೋ ಎರಡೋ ಮಹತ್ತರವಾದ ಕೃತಿಯನ್ನು ಜಗತ್ತಿಗೆ ಕೊಡಲು ಸಾಧ್ಯ. ಜೀವನದುದ್ದಕ್ಕೂ ಅವನು ಮಾಡುವ ಕೃಷಿಯ ಫಲವಾಗಿ ಈ ಬೆರಳೆಣಿಕೆಯ ಗ್ರಂಥಗಳು ಹುಟ್ಟುದಾಳುತ್ತವೆ. ಹಾಗಾಗಿ, ಅವನ ಬದುಕೇ ಒಂದು ತರಬೇತಿ ಶಾಲೆ; ಮಾರ್ಗದಲ್ಲಿ ಅನುಭವಿಸುವ ಸೋಲು ಅನಿವಾರ್ಯ. ಸಾಹಿತ್ಯ ಅವನ ಜೀವನದ ಉಸಿರಾಗಿರಬೇಕು. ಅವನು ವೃತ್ತಿಪರ ಲೇಖಕನಾಗಿರಬೇಕು.

ವೃತ್ತಿಪರ ಬರಹಗಾರನಿಗಿರುವ ತೊಂದರೆಗಳನ್ನು ತಿಳಿದ ಮೇಲೆ ಅವನಿಗೆ ಎದುರಾಗುವ ಅಪಾಯದ ಬಗ್ಗೆ ತಿಳಿಯಬೇಕು. ಅತ್ಯಂತ ಭಯಂಕರವಾದ ಅಪಾಯವೆಂದರೆ ಯಶಸ್ಸು. ಯಶಸ್ಸಿನೊಡನೆ ಹೊಂದಾಣಿಕೆ ಮಾಡಿಕೊಳ್ಳುವುದು ಬರಹಗಾರನಿಗೆ ಕಷ್ಟದ ಕೆಲಸ. ಕೆಲವೇ ಕೆಲವರು ಅದರ ಬಿಗಿಮುಷ್ಟಿಯಿಂದ ಪಾರಾಗಿದ್ದಾರೆ. ಜನರ ಮಟ್ಟಿಗೆ ಯಶಸ್ಸು ಸುಖದ ಸೋಪಾನವಾಗಬಹುದೇ ವಿನಹ ಒಬ್ಬ ಬರಹಗಾರನ ವಿಷಯದಲ್ಲಿ ಅದು ಸರ್ವನಾಶದ ಬೀಜವಾಗಬಹುದು. ಯಾವ ವಸ್ತುವಿನ ಮುಖಾಂತರವಾಗಿ ಬರಹಗಾರ ಯಶಸ್ಸು ಸಾಧಿಸಿದನೊ ಆ ವಸ್ತುವಿನಿಂದ ಅವನು ದೂರ ಸರಿಯುವಂತೆ ಯಶಸ್ಸೇ ಕಾರಣವಾಗಬಹುದು. ಆರ್ನಾಲ್ಡ್ ಬೆನೆಬ್‌ಗೆ ಹೀಗಾಯಿತು. ತಾನು ಹುಟ್ಟಿ ಬೆಳೆದಿದ್ದ ಪೈವ್‌ಟೌನ್ಸ್‌ನ ಬದುಕನ್ನು ಬಿಟ್ಟು ಉಳಿದ ಯಾವ ವಿಚಾರವೂ ಅವನಿಗೆ ಆಪ್ತವಾಗಿ ತಿಳಿದಿರಲಿಲ್ಲ. ಅವುಗಳ ಬಗ್ಗೆ ಬರೆದಾಗ ಅವನ ಕೃತಿಗೆ ಒಂದು ವಿಧವಾದ ಘನತೆ ಒದಗಿತ್ತು. ಅನಂತರ ಬಂದ ಯಶಸ್ಸು ಅವನನ್ನು ಸಾಹಿತಿಗಳು, ಶ್ರೀಮಂತರು ಮತ್ತು ಸುಂದರವಾದ ಹೆಂಗಸರ ಬಳಿಗೆ ಕರೆದೊಯ್ಯಿತು; ಅವರನ್ನು ಕುರಿತು ಬರೆಯಲು ಪ್ರಯತ್ನಪಟ್ಟ; ಸೃಷ್ಟಿಯಾದ ಕೃತಿ ಅತ್ಯಂತ ಕಳಪೆಯಾಗಿತ್ತು. ಯಶಸ್ಸಿನಿಂದ ಅವನ ನಾಶವಾಗಿತ್ತು.

ಇಷ್ಟಾದರೂ ಒಬ್ಬ ಲೇಖಕನ ವೃತ್ತಿಯಲ್ಲಿ ಅನಿವಾರ್ಯವಾಗಿ ಬರುವ ನಿರಾಸೆ, ಎದುರಿಸುವ ಅಪಾಯ ಎಲ್ಲ ಅಮುಖ್ಯವಾಗಿ ಬಿಡುವುದು ಅವನ

ವೃತ್ತಿ ಅವನಿಗೆ ಕೊಡುವ ಆಂತರಿಕ ಸ್ವಾತಂತ್ರ್ಯದಲ್ಲಿ. ಬರಹಗಾರನಿಗೆ ಬದುಕು ದುರಂತವಾದದ್ದು: ತನ್ನ ಸೃಷ್ಟಿಯ ಮೂಲಕ ಅವನಿಗೆ ಅರಿಸ್ಟಾಟಲ್ ಪ್ರತಿಪಾದಿಸುವ ಅನುಕಂಪೆ ಮತ್ತು ಭಯವನ್ನು ಹೋಗಲಾಡಿಸಿಕೊಳ್ಳುವ ಸಾಮರ್ಥ್ಯವಿದೆ. ತಾನು ಎಸಗಿದ ಪಾಪ, ಮಾಡಿದ ತಪ್ಪುಗಳು, ಎದುರಾಗುವ ಅಸಂತೋಷ, ಪ್ರತಿಫಲಿತವಾಗದ ಪ್ರೇಮ, ಶಾರೀರಿಕ ದೋಷ, ರೋಗ, ಸಂಕಟ, ನಿರಾಶೆ, ದುಃಖ, ಅವಮಾನ, ಪ್ರತಿಯೊಂದೂ ವಸ್ತುವಾಗಿ ಪರಿಣಮಿಸಿ ಅದನ್ನು ಬರೆಯುವುದರ ಮೂಲಕ ಅವನು ಗೆಲ್ಲುತ್ತಾನೆ. ಪ್ರತಿಯೊಂದೂ ಅವನ ಯಂತ್ರಕ್ಕೆ ಆಹಾರ; ಜನಜಂಗುಳಿಯಲ್ಲಿ ಮಿಂಚಿ ಮರೆಯಾಗುವ ಒಂದು ಮುಖದಿಂದ ಹಿಡಿದು, ನಾಗರೀಕ ಜಗತ್ತನ್ನೇ ತಲ್ಲಣಿಸುವ ಯುದ್ಧದವರೆಗೆ, ಗುಲಾಬಿ ಹೂವಿನ ಪರಿಮಳದಿಂದ ಹಿಡಿದು ಸ್ನೇಹಿತನ ಸಾವಿನ ತನಕ—ಅವನ ಅನುಭವಕ್ಕೆ ಬಂದುದು ಒಂದು ಪದ್ಯವಾಗಿಯೊ, ಒಂದು ಹಾಡಾಗಿಯೊ ಅಥವಾ ಒಂದು ಕಥೆಯಾಗಿಯೊ ಮಾರ್ಪಾಡಾಗದೆ ಉಳಿಯುವುದಿಲ್ಲ; ಅದು ಸೃಷ್ಟಿಯಾದ ಅನಂತರ ಅವನು ಅವರ ಗೊಡವೆಗೆ ಹೋಗುವುದಿಲ್ಲ. ಮುಕ್ತನಾದ ವ್ಯಕ್ತಿಯೆಂದರೆ ಕಲಾವಿದನೊಬ್ಬನೇ.'

ನಾಟಕಕಾರನಾಗಿ ಮಾಮ್ ಯಶಸ್ಸಿನ ಪರಾಕಾಷ್ಠೆಯಲ್ಲಿರುವಾಗಲೇ ತನ್ನ ಗತಕಾಲದ ಬದುಕಿನ ಚಿತ್ರ ಅವನನ್ನು ಬಹಳವಾಗಿ ಕಾಡಲು ಶುರುವಾಯಿತು. ಅವನ ತಾಯಿಯ ಸಾವು, ಪರಿಣಾಮವಾಗಿ ಒಡೆದ ಕುಟುಂಬ, ಅವನ ಶಾಲೆಯ ಪ್ರಾರಂಭಿಕ ದಿನಗಳ ದಾರುಣತೆ (ಫ್ರೆಂಚ್ ಬಾಲ್ಯವನ್ನು ಅನುಭವಿಸಿದ್ದ ಅವನಿಗೆ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ) ಅವನ ಉಗ್ಗುವಿಕೆಯಿಂದಾಗಿ ಇಮ್ಮಡಿಯಾಗಿತ್ತು; ಹೈಡಲ್‌ಬರ್ಗ್‌ನ ಹರ್ಷೋಲ್ಲಾಸದ ಕ್ಷಣಗಳು, ಲಂಡನ್‌ನ ಖುಷಿ ಜೀವನ; ಈ ಎಲ್ಲ ಅನುಭವಗಳು ನಿದ್ದೆಯಲ್ಲಿ, ನಡೆಯುವಾಗ, ನಾಟಕಗಳ ಅಭ್ಯಾಸದಲ್ಲಿದ್ದಾಗ, ಪಾರ್ಟಿಯಲ್ಲಿದ್ದಾಗ, ಬಂದು ಬಂದು ಕಾಡತೊಡಗಿದವು. ಇವಿಷ್ಟನ್ನು ಕಾದಂಬರಿ ರೂಪದಲ್ಲಿ ಬರೆದು ಹೊರೆ ಇಳಿಸಿಕೊಳ್ಳದೆ ತನಗೆ ಮನಶ್ಶಾಂತಿಯಿಲ್ಲ ಎಂದು ಅವನಿಗೆ ಮನವರಿಕೆಯಾಯಿತು. ಆಗ ಆಫ್ ಹ್ಯೂಮನ್ ಬಾಂಡೇಜ್ ರಚಿತವಾಯಿತು. ಈ ಕಾದಂಬರಿ ಬರೆದಾಗ ಮಾಮ್‌ಗೆ ನಲವತ್ತು ವರ್ಷ. ಮದುವೆಯಾಗಿ ಸಂಸಾರ ಹೂಡಲು ಇದೇ ಸರಿಯಾದ ವಯಸ್ಸು ಎಂದು ಅವನಿಗೆ ತಿಳಿದಿತ್ತು. ಜೀವನದಲ್ಲಿ ಯಶಸ್ಸು ಸಿಕ್ಕಿತ್ತು, ಯಶಸ್ಸು ತಂದ

ಐಶಾರಾಮವುಟ್ಟಿತ್ತು ; ಆದರೆ ಬಾಳಿಗೆ ಘನತೆ ಮತ್ತು ಗಾಂಭೀರ್ಯವನ್ನು ಕೊಡುವ ಕುಟುಂಬ ಇರಲಿಲ್ಲ. ಇದರ ಸಾಧನೆಗಾಗಿ ಮದುವೆ ಯೋಚನೆ ಅವನನ್ನು ಗಾಢವಾಗಿ ತಬ್ಬಿತು. ಮನಸ್ಸಿನಲ್ಲೇ ಈ ಬಗ್ಗೆ ಲೆಕ್ಕ ಹಾಕುತ್ತಿದ್ದ ಸಂದರ್ಭದಲ್ಲಿ ತನ್ನ ನಿಯಂತ್ರಣಕ್ಕೊಳಪಡದ ಘಟನೆಯೊಂದರಿಂದ ಸಮಸ್ಯೆಯ ಪರಿಹಾರವಾಯಿತು. ಮಹಾಯುದ್ಧ ಆರಂಭವಾಯಿತು. ಅವನ ಜೀವನದ ಒಂದು ಅಧ್ಯಾಯ ಮುಗಿದು ಹೊಸ ಅಧ್ಯಾಯ ಪ್ರಾರಂಭವಾಗಿತ್ತು.

ಆ ನಂತರ ರಕ್ಷಣಾ ಇಲಾಖೆಯಲ್ಲಿದ್ದ ಗೆಳೆಯನೊಬ್ಬನ ಸಹಾಯದಿಂದ ಫ್ರಾನ್ಸ್‌ಗೆ ಹೋದ; ಒಂದು ವರ್ಷ ಸ್ವಿಟ್ಸರ್ಲೆಂಡಿನಲ್ಲಿ ಇದ್ದ ಬಳಿಕ ಮಾಮ್‌ನ ಆರೋಗ್ಯಸ್ಥಿತಿ ಹದಗೆಟ್ಟಿತು. ಅಮೆರಿಕಕ್ಕೆ ಪ್ರಯಾಣ ಬೆಳೆಸಿದ. ಹರ್‌ಮನ್ ಮೆಲ್‌ವಿಲ್ ಮತ್ತು ಪಿಯರಿ ಲೋಟಿ ಮುಂತಾದವರು ಚಿತ್ರಿಸಿದ್ದ ದ್ವೀಪಗಳ ಸೌಂದರ್ಯ ಅವನನ್ನು ಸೆರೆಹಿಡಿಯಿತು. ಅಲ್ಲಿನ ಜನರ ಜೀವನ ವಿಧಾನ, ಬದುಕುವ ಬಗೆ ಅವನಿಗೆ ಬಹಳವಾಗಿ ಹಿಡಿಸಿತು. ಅವರ ವೇಷಭೂಷಣಗಳು, ಹಾವಭಾವ, ನಡಾವಳಿಗಳ ಬಗ್ಗೆ ಟಿಪ್ಪಣಿ ಪುಸ್ತಕಗಳಲ್ಲಿ ಬರೆದುಕೊಂಡ. ಇವುಗಳ ಸುತ್ತ ಕಥೆಗಳು ಕಣ್ಣೊಡೆಯ ತೊಡಗಿದವು.

ಯುದ್ಧ ಕಾಲದಲ್ಲಿ ಹವಾಮಾನದ ವೈಪರೀತ್ಯದಿಂದಾಗಿ ಮಾಮ್ ಕ್ಷಯ ರೋಗಕ್ಕೆ ಗುರಿಯಾದ. ಲಂಡನ್‌ನಲ್ಲೇ ತುಂಬಾ ಪ್ರಸಿದ್ಧರಾದ ವೈದ್ಯರೊಬ್ಬರ ಬಳಿ ಹೋದಾಗ ಕೂಡಲೇ ಅವರು ಅವನನ್ನು ಉತ್ತರ ಸ್ಕಾಟ್‌ಲ್ಯಾಂಡಿನ ಸ್ಯಾನಿಟೋರಿಯಂ ಒಂದಕ್ಕೆ ಕಳಿಸಿದರು. ಆಸ್ಪತ್ರೆಯ ಏಕಾಂತ ಹೊಸ ಪ್ರಪಂಚವನ್ನೇ ಅವನ ಕಣ್ಣ ಮುಂದೆ ತೆರೆದು ತೋರಿತು. ನಿಜವಾಗಿ ವಿಶ್ರಾಂತಿ ಎಂದರೇನು ಎಂದು ಆಗ ಆತನಿಗೆ ತಿಳಿಯಿತು. ಮಾಮ್ ಪೂರ್ತಿ ಗುಣಮುಖನಾದಾಗ ಯುದ್ಧ ಮುಗಿದಿತ್ತು.

ಸಣ್ಣ ಕಥೆಗಳನ್ನು ಬರೆಯಲು ಮತ್ತೆ ಅವನಿಗೆ ಆಸೆಯಾಯಿತು. ಪ್ರತಿಯೊಬ್ಬ ಸಣ್ಣ ಕಥೆಗಾರನೂ ಚೆಕಾಫ್‌ನಂತೆ ಬರೆಯಲು ಹೆಣಗುತ್ತಿದ್ದ ಕಾಲ ಅದು. ಮಾಮ್ ಮಾತ್ರ ಚೆಕಾಫ್‌ನಂತೆ ಬರೆಯಲು ಎಂದೂ ಪ್ರಯತ್ನಿಸಲಿಲ್ಲ. ಆ ಮಾರ್ಗ ಮೊದಲಿನಿಂದಲೂ ಅವನಿಗೆ ಒಗ್ಗದಾಗಿತ್ತು. ಮಾಮ್‌ನ ಸಣ್ಣ ಕಥೆಗಳಲ್ಲಿ ಒಂದು ಬಗೆಯ ಆರಂಭ, ಮಧ್ಯ ಮತ್ತು ಅಂತ್ಯ ಇರುವುದರಿಂದಲೊ ಏನೊ ಇಂಗ್ಲೆಂಡಿಗಿಂತ ಹೆಚ್ಚಾಗಿ ಅವು ಫ್ರಾನ್ಸ್‌ನಲ್ಲಿ ಹೆಚ್ಚು ಓದುಗರನ್ನು ಪಡೆದವು. ಫ್ರೆಂಚ್ ಕಲ್ಪನೆಗೆ ಇದು ಆಪ್ತವಾಗಿರುವುದರಿಂದ ಈ ಕಥೆಗಳು ಅಲ್ಲಿ ಹೆಚ್ಚು ಬೇಡಿಕೆಗೊಳಗಾಗಿರಬಹುದು. ಅತಿಭಾವುಕತೆಯಾಗಲಿ, ಶಬ್ದಾಡಂಬರ

ವಾಗಲಿ ಮಾಮ್‌ನಲ್ಲಿ ಇಲ್ಲದಿರುವುದು ಕೂಡ ಅವನ ಕಥೆಗಳ ಆಕರ್ಷಣೆಗೆ ಇನ್ನೊಂದು ಪ್ರಮುಖವಾದ ಕಾರಣವಿರಬಹುದು.

ಬದುಕು ಯಾವಾಗಲೂ ಸಿದ್ಧವಾದ ಪಾತ್ರವೊಂದನ್ನು ನೀಡುವುದಿಲ್ಲ. ಕೆಲವರಿಗೆ ಮಾಮ್‌ನ ಪಾತ್ರಗಳು ಬದುಕಿನಿಂದ ತೆಗೆದ ಜನರ ನೇರ ಪಡಿಯಚ್ಚು ಎಂಬ ತಿಳುವಳಿಕೆ ಇವೆ. ಇದು ತೀರಾ ಸುಳ್ಳು. ಕಾರಣ, ಸಾಹಿತ್ಯದ ಆರಂಭ ಕಾಲದಿಂದಲೂ ಬರಹಗಾರರು ನಿಜಜೀವನದಿಂದ ಪ್ರೇರಣೆ ಪಡೆಯುತ್ತಲೇ ಬಂದಿದ್ದಾರೆ. ಈ ಮಾತಿಗೆ ಶೇಕ್ಸ್‌ಪಿಯರ್, ಸ್ಕಾಟ್, ಸ್ಟೆಂಡ್ಹಾಲ್, ಡಿಕನ್ಸ್, ಲೀ ಹಂಟ್, ಟರ್ಜನೇಫ್ ಇವರೂ ಹೊರತಲ್ಲ. ಇವರಲ್ಲಿ ಬರುವ ಪಾತ್ರಗಳನ್ನು ಗಮನಿಸಿದರೆ, ಅವುಗಳಿಗೆ ಪ್ರೇರಕರಾದ ನಿಜ ಜೀವನದ ಪಡಿಯಚ್ಚುಗಳನ್ನು ಎಲ್ಲಿಂದ ಹುಡುಕಿ ತರುವುದು? ನಿಜಜೀವನದಿಂದ ಪ್ರೇರಣೆ ಪಡೆಯುವುದು ಸಾರ್ವತ್ರಿಕವಷ್ಟೇ ಅಲ್ಲ ಅದು ಅತ್ಯಗತ್ಯ ಕೂಡ. ಇದನ್ನು ಒಪ್ಪಿಕೊಳ್ಳಲು ಏಕೆ ನಾಚಿಕೊಳ್ಳಬೇಕು? ಟರ್ಜನೇಫ್ ಹೇಳಿದಂತೆ ಗೊತ್ತಾದ ವ್ಯಕ್ತಿಯ ರೂಪು ಮನಸ್ಸಿನಲ್ಲಿ ಇದ್ದಾಗಲೇ ನಿಮ್ಮ ಸೃಷ್ಟಿಗೆ ಚೈತನ್ಯ ಮತ್ತು ವೈಶಿಷ್ಟ್ಯ ಬರಲು ಸಾಧ್ಯ.

ಲೇಖಕನಾಗಿ ತನ್ನ ಸ್ಥಾನಮಾನಗಳೇನು ಎಂಬುದು ಮಾಮ್‌ಗೆ ಗೊತ್ತಿತ್ತು. ಇತ್ತೀಚಿನ ವಿಮರ್ಶಕರು ಸಮಕಾಲೀನ ಸಾಹಿತ್ಯ ವಿಮರ್ಶೆ ಮಾಡುವಾಗ ಅವನ ಕೃತಿಗಳ ಬಗ್ಗೆ ಮಾತನಾಡುವುದಿಲ್ಲ. ಮಾಮ್ ಮಾತ್ರ ಎಂದೂ ಜಾಹಿರಾತಿಗೆ ತೊಡಗಿದವನಲ್ಲ. ತಾಂತ್ರಿಕವಾಗಿ ಏನಾದರೊಂದು ಹೊಸ ವಿಧಾನ ಬೆಳಕಿಗೆ ಬಂದರೆ ಕೂಡಲೆ ಜನ ಆ ಕಡೆ ಮುತ್ತು ಹಾಕಿಕೊಳ್ಳುವುದು ಸ್ವಾಭಾವಿಕ. ಹೆನ್ರಿ ಜೇಮ್ಸ್ ಸೃಷ್ಟಿಸಿದ ನಾಟಕೀಯವಾದ ನಿರೂಪಣಾ ತಂತ್ರ ಜನರನ್ನು ಆಕರ್ಷಿಸಿತು; ಹಾಗೆಯೇ ಸುಪ್ತಪ್ರಜ್ಞೆಯ ಚಲನವಲನವನ್ನು ಹಿಡಿಯುವ ಪ್ರಜ್ಞಾಪ್ರವಾಹದ ತಂತ್ರ ಕೂಡ. ಹತ್ತೊಂಬತ್ತನೆಯ ಶತಮಾನದಲ್ಲಿ ಚಲಾವಣೆಯಲ್ಲಿದ್ದದ್ದು ಮಾಮ್ ಕಾಲಕ್ಕೆ ಮೂಲೆಗುಂಪಾಗುತ್ತಿತ್ತು.

ಈ ಕಾರಣದಿಂದ ಸಾರಸ್ವತಲೋಕ ಮಾಮ್‌ನ ಕೃತಿಗಳನ್ನು ಬದಿಗೊತ್ತಿದ್ದು ಅತ್ಯಂತ ಸಹಜವೆಂದು ತೋರುತ್ತದೆ. ನಾಟಕರಂಗದಲ್ಲಿ ಆತ ಸಾಂಪ್ರದಾಯಿಕವಾದ ಮಾದರಿಯನ್ನೇ ಅನುಸರಿಸಿದ. ಕಥನ ಸಾಹಿತ್ಯದಲ್ಲಾದರೆ ಶತಶತಮಾನಗಳಷ್ಟು ಹಳೆಯದಾದ ಗುಹೆಯಲ್ಲಿ ಬೆಂಕಿಯ ಸುತ್ತ ಕುಳಿತ ಹೊಸ ಶಿಲಾಯುಗದ ಮನುಷ್ಯರಿಗೆ ಕಥೆ ಹೇಳುವ ವಿಧಾನವನ್ನೇ ರೂಢಿಸಿಕೊಂಡ. ಏನೋ

ಹೇಳಲು ಒಂದು ಕಥೆ ಅವನಲ್ಲಿದೆ, ಅದನ್ನು ಹೇಳಲು ಅವನಿಗೆ ಇಷ್ಟವಾಗಿದೆ, ಅಷ್ಟೆ. ಈ ವಿಧಾನ ಮಾಮ್‌ಸದು.

ಮಾಮ್ ಇಪ್ಪತ್ತರಲ್ಲಿದ್ದಾಗ ವಿಮರ್ಶಕರು ಅವನನ್ನು ಕ್ರೂರಿ ಎಂದರು, ಮೂವತ್ತರಲ್ಲಿದ್ದಾಗ ಬೇಜವಾಬ್ದಾರಿಯುವ ಎಂದರು, ನಲವತ್ತರಲ್ಲಿದ್ದಾಗ ಸಿನಿಕಲ್ ಎಂದರು, ಐವತ್ತರಲ್ಲಿ ಸಮರ್ಥ ಎಂದರು, ಅರವತ್ತರಲ್ಲಿ ಟೊಳ್ಳಿನ ಮನುಷ್ಯ ಎಂದರು. ಮಾಮ್ ಮಾತ್ರ ಇದಾವುದಕ್ಕೂ ಸೊಪ್ಪು ಹಾಕದೆ ತಾನು ಹಾಕಿಕೊಂಡು ಬಂದಿದ್ದ ನಕ್ಷೆಯ ಪ್ರಕಾರ ತನ್ನ ಮನಸ್ಸಿನಲ್ಲಿ ಮೊದಲಿ ನಿಂದಲೂ ಸಿದ್ಧವಾಗಿದ್ದ ವಿನ್ಯಾಸವನ್ನು ರಚಿಸತೊಡಗಿದ. ಇಂಗ್ಲಿಷ್ ವಿಮರ್ಶೆಯ ಜಾಡನ್ನು ಗಮನಿಸಿದಾಗ ಮಾಮ್‌ಗೆ ಸೆಂಟ್-ಬೊವ್, ಮ್ಯಾಥ್ಯೂ ಆರ್ನಾಲ್ಡ್, ಬ್ರೂನೆಟಿಯರ್ ವರ್ಗಕ್ಕೆ ಸೇರಿದ ವಿಮರ್ಶಕರು ನೆನಪಾಗುತ್ತಾರೆ. ವಿಮರ್ಶಕನಾದವನು ಒಬ್ಬ ತತ್ವಜ್ಞಾನಿಯಾಗಿರಬೇಕು, ಮನಸ್ಸಿನ ಪ್ರಶಾಂತತೆಯನ್ನು ಹೊಂದುವುದಕ್ಕೆ; ನಿಷ್ಪಕ್ಷಪಾತಿಯಾಗಿರಲಿಕ್ಕೆ, ಜಗತ್ತಿನ ಕ್ಷಣಭಂಗುರತೆಯನ್ನು ಅರಿಯಲಿಕ್ಕೆ. ಅವನು ಮನಶಾಸ್ತ್ರಜ್ಞನಾಗಿರ ಬೇಕು, ಶರೀರಶಾಸ್ತ್ರಜ್ಞನಾಗಿರಬೇಕು, ಸಾಹಿತ್ಯದ ಮೂಲಭೂತ ಅಂಶಗಳು ಜನರ ದೇಹ ಮತ್ತು ಮನಸ್ಸಿನೊಡನೆ ಹೇಗೆ ಸಂಬಂಧ ಕಲ್ಪಿಸಿಕೊಂಡಿವೆ ಎಂಬುದನ್ನು ತಿಳಿಯಲಿಕ್ಕೆ. ತನ್ನ ದೇಶದ ಸಾಹಿತ್ಯ ಪರಂಪರೆಯನ್ನು ತಿಳಿಯು ವುದರ ಜೊತೆಗೆ ಇತರ ದೇಶಗಳ ಸಮಕಾಲೀನ ಸಾಹಿತ್ಯದ ಬೆಳವಣಿಗೆಯ ಬಗ್ಗೆಯೂ ಕೂಡ ಅವನಿಗೆ ಅರಿವಿರಬೇಕು. ಇದರಿಂದ ತನ್ನ ಜನರ ಸಾಹಿತ್ಯ ಯಾವ ದಿಕ್ಕು ಹಿಡಿಯಬೇಕು ಎಂದು ಮಾರ್ಗದರ್ಶನ ಮಾಡಲು ಅವನಿಗೆ ಅನುಕೂಲವಾಗುವುದು. ದೊಡ್ಡ ವಿಮರ್ಶಕ ದೊಡ್ಡ ವ್ಯಕ್ತಿಯೂ ಕೂಡ ಆಗಿರಬೇಕು, ಏಕೆಂದರೆ ತನ್ನ ಕೃತಿ ಎಷ್ಟೇ ಘನವಾಗಿದ್ದರೂ ಕಾಲದ ಪ್ರವಾಹಕ್ಕೆ ಸಿಕ್ಕಿರುವುದು ಎಂಬ ಅರಿವಿನ ನಿರ್ಲಿಪ್ತತೆ ಅವನಿಗೆ ಇರಬೇಕಾಗು ತ್ತದೆ.

ನಾಟಕ ಮತ್ತು ಕಥನ ಸಾಹಿತ್ಯದ ಬಗ್ಗೆ ಮಾಮ್ ಈ ಗ್ರಂಥದಲ್ಲಿ ಮಾತ ನಾಡುವಾಗ ಆ ಅನುಭವಗಳು ಹೆಚ್ಚು ಸತ್ಯವಾಗಿ ಕಾಣುತ್ತವೆ. ತತ್ವಶಾಸ್ತ್ರದ ಬಗ್ಗೆ ಮಾತನಾಡುವಾಗ ಓದುಗರು ತನ್ನಿಂದ ಹೆಚ್ಚಿನ ತಿಳಿವಳಿಕೆಯನ್ನು ನಿರೀಕ್ಷಿಸಬಾರದು ಎಂದು ಕೋರಿಕೊಳ್ಳುತ್ತಾನೆ. ಕನ್‌ಫ್ಯೂಷಿಯಸ್‌ನ ಭಾಷಣ ಗಳ ಮೂಲಕ ಮಾಮ್‌ಗೆ ಷೊಪನ್‌ಹರ್‌ರವರ ತತ್ವಜ್ಞಾನಕ್ಕೆ ಪ್ರವೇಶ ವಾಯಿತು. ಅನಂತರ ಹೆಗಲ್‌ನನ್ನು ಓದಿದ. ಷೊಪನ್‌ಹರ್ ಹೆಗಲ್‌ನನ್ನು

ಮೆಚ್ಚದಿದ್ದರಿಂದಲೋ ಏನೊ ಹೆಗೆಲ್‌ನ ಬಗ್ಗೆ ಆತನಿಗೆ ಮೊದಲೇ ಪೂರ್ವಗ್ರಹ ತಲೆದೋರಿತು. ಆದರೂ ಹೆಗೆಲ್‌ನ ಮಾದರಿ ತನಗೆ ಸರಿಬೀಳುವಂಥದಲ್ಲ ಎಂದು ಬಹಳ ಶೀಘ್ರವಾಗಿ ತಿಳಿದುಹೋಯಿತು. ಇವರುಗಳನ್ನು ದಾಟಿ ಡೆಕಾರ್ಟ್‌ರ ಹತ್ತಿರ ಬರುವ ಹೊತ್ತಿಗೆ ಮಾಮ್‌ನ ಪ್ರಯಾಣ ಹಗುರವಾಗಿತ್ತು. ಹೆಗೆಲ್‌ನ ಬಗ್ಗೆ ಬರೆಯುತ್ತ, ವಿಚಿತ್ರವಾದ ತೀರ್ಮಾನಕ್ಕೆ ಬರುವುದರಲ್ಲಿ ಅವನು ಎತ್ತಿದ ಕೈಯೆಂದು, ಆದರೂ ಅವನ ನುಡಿಯ ಪಾರದರ್ಶಕತೆ ತನ್ನನ್ನು ಬೆರಗುಗೊಳಿಸಿತೆಂದೂ ಮಾಮ್ ತಿಳಿಸುತ್ತಾನೆ. ಅವನ ಪ್ರಕಾರ ಹೆಗೆಲ್‌ನನ್ನು ಓದುವುದೆಂದರೆ ತಳದವರೆಗೂ ಸ್ಪಷ್ಟವಾಗಿ ಕಾಣುವ ಸರೋವರದಲ್ಲಿ ಈಜಿದ ಅನುಭವ; ಸ್ಪಟಿಕದಂಥ ಜಲ ಅದ್ಭುತವಾದ ರೀತಿಯಲ್ಲಿ ಆಹ್ಲಾದವನ್ನುಂಟು ಮಾಡುವಂಥದು. ಮೊಟ್ಟ ಮೊದಲಬಾರಿಗೆ ಸ್ಪಿನೋಜಾನನ್ನು ಓದಿದ್ದು ಆತನಿಗೆ ಮರೆಯಲಾಗದ ಅನುಭವ. ಎತ್ತರದ ಶಿಖರಾವಳಿಯನ್ನು ಕಂಡಾಗ ಅಂತರಂಗ ಅರಳುವಂತೆ ಆಗ ಮಾಮ್‌ಗೆ ಭಾಸವಾಯಿತು. ಈಗ ಹೆಸರಿಸಿದ ತತ್ತ್ವಜ್ಞಾನಿಗಳಿಗೆ ಇಂಗ್ಲಿಷ್ ತತ್ತ್ವಜ್ಞಾನಿಗಳು ಸರಿಸಾಟಿಯಾಗಲಾರರಾದರೂ ಹ್ಯೂಮ್, ಹಾಬ್ಸ್ ಮತ್ತು ಲಾಕ್‌ರವರ ಭಾಷೆಯ ಸೊಬಗಿಗಾದರೂ ಅವರನ್ನು ಓದುವುದು ಅತ್ಯಾವಶ್ಯಕ. ಯಾವನೇ ತತ್ತ್ವಜ್ಞಾನಿ ತನ್ನ ತತ್ತ್ವ ಇತರರಿಗೆ ಅರ್ಥವಾಗದಷ್ಟು ಕ್ಲಿಷ್ಟವಾಗಿ ಬರೆಯಲು ಹೋದರೆ ಅವನು ನಿಜವಾದ ಅರ್ಥದಲ್ಲಿ ತತ್ತ್ವಜ್ಞಾನಿಯಲ್ಲ. ಒಬ್ಬ ತತ್ತ್ವಜ್ಞಾನಿ ಇನ್ನೊಬ್ಬ ತತ್ತ್ವಜ್ಞಾನಿಗಷ್ಟೇ ಬರೆಯುವುದಿಲ್ಲ. ಅವನು ಬರೆದದ್ದನ್ನು ಸಮಸ್ತರೂ ಓದುತ್ತಾರೆ. ಹಾಗಾಗಿ ಅವನ ಅರ್ಥ, ಭಾಷೆ ಸ್ಪಷ್ಟವಾಗಿರಬೇಕಾಗುತ್ತದೆ.

ಬದುಕಿಗೆ ಅರ್ಥವಿದೆಯೋ ಅಥವಾ ಅದಕ್ಕೆ ಅರ್ಥವನ್ನು ಕೊಡಬೇಕಾದವರು ನಾವೋ ಎನ್ನುವ ಪ್ರಶ್ನೆ ಕಾಡಲು ಶುರುವಾದಾಗ ಮಾಮ್ ಇದಕ್ಕೆ ಉತ್ತರ ಹುಡುಕುತ್ತಾ ಕೈಗೆ ಸಿಕ್ಕಿದುದನ್ನೆಲ್ಲಾ ಓದತೊಡಗಿದ. ಆಗ ಮೊದಲು ಎದುರಾದದ್ದು ಧರ್ಮ. ಧಾರ್ಮಿಕ ವ್ಯಕ್ತಿಗಳೆಂದು ಕರೆಸಿಕೊಳ್ಳುವವರು ಸಾಮಾನ್ಯವಾಗಿ ಐಷಾರಾಮದ ಜೀವನ ನಡೆಸುತ್ತ, ಅದಕ್ಕೆ ತದ್ವಿರುದ್ಧವಾದ ತತ್ತ್ವವನ್ನು ಬೋಧಿಸುತ್ತ ಕಾಲಕಳೆಯುವುದು ಆತನಿಗೆ ಅರಿವಾಯಿತು. ನುಡಿಗೂ ನಡೆಗೂ ಇದ್ದ ಅಗಾಧವಾದ ಕಂದಕ ಗೋಚರಿಸಿತು. ಆತನ ಕಣ್ಣಮುಂದೆ ನಡೆದ ಅನೇಕ ಘಟನೆಯಿಂದಾಗಿ ದೇವರ ಬಗ್ಗೆ ಆತನಲ್ಲಿ ಯಾವ ನಂಬಿಕೆಯೂ ಉಳಿಯಲಿಲ್ಲ. ಆ ಸಂದರ್ಭದಲ್ಲಿ ಹೊಸ ಬಗೆಯ ಸ್ವಾತಂತ್ರ್ಯ ಲಭಿಸಿದ

ಅನುಭವವಾಯಿತು. ದೇವರ ಬಗ್ಗೆ ನಂಬಿಕೆ ಹೋಯಿತಾದರೂ, ದೆವ್ವದ ಬಗ್ಗೆ ಭಯ ಮಾತ್ರ ಹೋಗಿರಲಿಲ್ಲ.

ಮುಂದೆ ಒಳಿತು ಮತ್ತು ಕೆಡುಕುಗಳ ನಡುವೆ ನಿರಂತರವಾಗಿ ನಡೆದಿರುವ ಸಂಘರ್ಷದ ಬಗ್ಗೆ ಮನಸ್ಸು ತೀವ್ರವಾಗಿ ಆಲೋಚಿಸಲು ತೊಡಗಿತು. ಬಹಳ ಜನ ತತ್ತ್ವಜ್ಞಾನಿಗಳು ಕೆಡುಕು ಇರುವುದರಿಂದಲೇ ಒಳಿತಿಗೆ ಮೌಲ್ಯ ಎನ್ನುವ ರೀತಿಯಲ್ಲಿ ವಾದಮಾಡಿರುವುದು ಸರ್ವವಿಧಿತವಾಗಿದೆ. ಯಾಕೊ ಏನೊ ಈ ವಾದದ ಬಗ್ಗೆ ಗಾಢವಾದ ಅನುಮಾನ ಮಾಮ್‌ನಲ್ಲಿ ತಲೆದೋರಿತಂತೆ. ಸಬಲರು ದುರ್ಬಲರನ್ನು ಮೆಟ್ಟುವುದು ಮತ್ತು ಬಡತನ ಸಿರಿತನದ ಜೊತೆ ಜೊತೆಗೇ ಏಗುವುದನ್ನು ಕಂಡಾಗ ಇವಕ್ಕೆಲ್ಲ ಅರ್ಥವಿದೆಯೆ ಎನ್ನಿಸುತ್ತದೆ. ಕೆಡುಕಿಗಂತೂ ಅರ್ಥ ವಿವರಣೆ ಇಲ್ಲವೆಂದೇ ತೋರುತ್ತದೆ. ಇದನ್ನು ಕಡೆಗಣಿಸುವುದು ಬಾಲಿಶವಾದರೆ, ಇದರ ಬಗ್ಗೆ ದುಃಖಿಸುವುದು ಮೂರ್ಖತನವಾಗುತ್ತದೆ

ಮಾಮ್ ತನ್ನ ಮಟ್ಟಿಗೆ ಹೇಳಿಕೊಳ್ಳುತ್ತಾ, ಬದುಕಿನಲ್ಲಿ ತನಗೆ ಪ್ರಾಪ್ತವಾಗಿರುವುದೆಲ್ಲ ತನ್ನ ಸಾಮರ್ಥ್ಯದ ದೆಸೆಯಿಂದ ಎಂದು ತಿಳಿಯಲಾರೆ ಎನ್ನುತ್ತಾನೆ. ಯಾವ ಸಂದರ್ಭಗಳು ಇವೆಲ್ಲ ತನಗೆ ಲಭಿಸುವಂತೆ ಮಾಡಿದುವು ಎನ್ನುವುದನ್ನೂ ಸಹ ಅವನು ಅರ್ಥೈಸಲಾರ. ತನ್ನ ಮಾನಸಿಕ ಮತ್ತು ದೈಹಿಕ ಇತಿಮಿತಿಗಳನ್ನು ಮನಗಂಡೂ ಸಹ ಆತ ಬದುಕನ್ನು ಹೆಚ್ಚು ಪ್ರೀತಿಸಿದ್ದಾನೆ. ಆದರೆ ಯಾರಾದರೂ ಮತ್ತೊಮ್ಮೆ ಬದುಕುವೆಯಾ ಎಂದು ಪ್ರಶ್ನಿಸಿದರೆ ಇಲ್ಲ ಎನ್ನುವುದೇ ನನ್ನ ಉತ್ತರ ಎನ್ನುತ್ತಾನೆ. ಏಕೆಂದರೆ ಬದುಕಿಗೆ ಅರ್ಥವಿಲ್ಲ; ಹಾಗೆಯೇ ಜೀವನದಲ್ಲಿ ಒಮ್ಮೆ ಅನುಭವಿಸಿರುವ ದುಃಖದುಮ್ಮಾನಗಳನ್ನು ಮತ್ತೊಮ್ಮೆ ಅನುಭವಿಸಲಾರ. ತನ್ನ ಪ್ರಕೃತಿಯ ಜಾಯಮಾನವೊ ಏನೊ ತಾನು ಜೀವನದಲ್ಲಿ ದೊರೆತ ಸುಖವನ್ನು ದಿವಿನಾಗಿ ಅನುಭವಿಸುವುದಕ್ಕಿಂತ ಹೆಚ್ಚಾಗಿ ಎದುರಾದ ಸಂಕಟಗಳಿಂದ ಜರ್ಜರಿತನಾದವ ಮಾಮ್.

ಆತ್ಮಹತ್ಯೆಯ ಬಗ್ಗೆ ಮೂಗುಮುರಿಯುವ ಜನರು ಸಹಾನುಭೂತಿಗೆ ಪಾತ್ರರಲ್ಲ. ಒಬ್ಬ ವ್ಯಕ್ತಿಯ ಬದುಕಿಗೆ ಭವಿಷ್ಯವೇ ಇಲ್ಲ ಎಂದು ತೀರ್ಮಾನವಾದ ಮೇಲೆ ಆ ವ್ಯಕ್ತಿ ತನ್ನ ಅಂತರಂಗ ಬೋಧಿಸುವ ರೀತಿಯಲ್ಲಿ ನಡೆಯುವ ಸ್ವಾತಂತ್ರ್ಯವನ್ನು ಪಡೆದೇ ಇರುತ್ತಾನೆ. ಆ ಪ್ರಕಾರ ಆತ್ಮಹತ್ಯೆ ಅವನಿಗೆ ಪರಿಹಾರವಾಗಿ ಕಂಡುಬಂದದ್ದರಿಂದಲೇ ಆತ ಆ ಮಾರ್ಗವನ್ನು ಹಿಡಿದಿರುತ್ತಾನೆ. ಮಾನವನಲ್ಲಿ ಇರುವ ಅತ್ಯಂತ ಮುಖ್ಯವಾದ ಮೂಲಗುಣವಾದ ಬದುಕುವಿಕೆಯನ್ನೇ

ಕೆಲವರು ಗಾಳಿಗೆ ತೂರಿ ನಡೆದುಬಿಡುತ್ತಾರಲ್ಲ ಎನ್ನುವುದು ಕೆಲವರ ವಿಷಾದ; ಈ ವಿಷಾದಕ್ಕೆ ಕಾರಣವಿಲ್ಲ.

ವೃದ್ಧಾಪ್ಯದ ಬಗ್ಗೆ ಹೆದರಿ ಮಧ್ಯವಯಸ್ಸಿನಿಂದ ಚಂಗನೆ ಅದೃಶ್ಯರಾಗಿ ಬಿಡಬೇಕು ಎಂದುಕೊಳ್ಳುವವರು ಅನೇಕರಿದ್ದಾರೆ. ಆದರೆ ಮಾಮ್ ಮಾತ್ರ ಎಂದೂ ಆ ತರಹದ ಚಿಂತೆಗೆ ಒಳಗಾದವನಲ್ಲ. ಹಂತಹಂತವಾಗಿ ಬದುಕಿನ ಮಜಲುಗಳನ್ನು ಏರಬೇಕಾಗಿರುವುದರಲ್ಲೇ ಆತನಿಗೆ ಹೆಚ್ಚು ಖುಷಿ. ಉಳಿದ ಅವಸ್ಥೆಗಳ ಸುಖದುಃಖಗಳನ್ನು ಅನುಭವಿಸಿದ ಹಾಗೆಯೇ ವೃದ್ಧಾಪ್ಯದ ನೋವು ನಲಿವುಗಳನ್ನೂ ಸ್ವೀಕರಿಸುವುದು ಸೂಕ್ತ, ಅಪೇಕ್ಷಣೀಯ. ವಿಪರ್ಯಾಸವಾಗಿ ಕಂಡರೂ ವೃದ್ಧಾಪ್ಯದಲ್ಲೇ ಸಮಯ ಹಾಸಿಹೊದೆಯುವಷ್ಟು ಯಥೇಚ್ಛವಾಗಿ ಲಭಿಸುವುದು. ತಾರುಣ್ಯದಲ್ಲಿ ನೂರೆಂಟು ಚಟುವಟಿಕೆಗಳಿಗೆ ಹರಿದು ಹಂಚಿ ಹೋಗುವ ಕಾಲ ಕಡೆಯ ಅವಸ್ಥೆಯಲ್ಲಿ ಕಾಲುನೀಡಿ ಮಲಗಿರುತ್ತದೆ. ಕೇಟೊ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಗ್ರೀಕ್ ಭಾಷೆ ಕಲಿಯತೊಡಗಿದ್ದನ್ನು ಪ್ಲೂಟಾರ್ಕ್ ದಾಖಲು ಮಾಡಿಲ್ಲವೆ? ಸಮಯಾಭಾವದಿಂದ ತನ್ನ ವ್ಯಕ್ತಿತ್ವದ ಉಳಿದ ಮಗ್ಗಲುಗಳ ಪೂರ್ಣಪ್ರಮಾಣದ ಬೆಳವಣಿಗೆ ಈ ಜನ್ಮದಲ್ಲಿ ಸಾಧ್ಯವಾಗ ಲಿಲ್ಲವಾಗಿ ಇನ್ನೊಂದು ಜನ್ಮ ಬೇಕೆಂದು ಗಯಟೆ ಕೇಳಿಕೊಂಡ. ಆದರೆ, ಕ್ಷುಲ್ಲಕ ವಿಷಯಗಳ ಮೇಲೆ ಅವನು ಚೆಲ್ಲಿದ ಸಮಯವನ್ನು ಸಮರ್ಪಕವಾದ ರೀತಿಯಲ್ಲಿ ಬಳಸಿಕೊಂಡಿದ್ದರೆ ಪ್ರಾಯಶಃ ಅವನಿಗೆ ಸಮಯಾಭಾವದ ಸಮಸ್ಯೆ ಉದ್ಭವ ವಾಗುತ್ತಿರಲಿಲ್ಲ ಎಂದು ಮಾಮ್ ಹೇಳುತ್ತಾನೆ.

ಸಾವಿನ ಬಗ್ಗೆ ವಿಚಾರ ಮಾಡುವುದು ಅಸಗತ್ಯವೆಂದು ಅನಿಸಿದರೂ ಆ ಆಲೋಚನೆಯಿಂದಲೇ ದೂರ ಸರಿಯುವುದು ಕೂಡ ದಡ್ಡತನವಾಗುತ್ತದೆ. ವಾಸ್ತವವಾಗಿ ಸಾವಿಗೆ ಸಮೀಪವಾದಾಗ ಮಾತ್ರ ಅದರ ನಿಜವಾದ ಚಿತ್ರ ನಮಗೆ ಗೋಚರವಾಗುತ್ತದೆ ಎನ್ನುವ ಮಾತು ಸುಳ್ಳಲ್ಲ. ಆ ಭಯದ ರೂಪುರೇಷೆಯನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸಿ ಸೋತಿದ್ದೇನೆ ಎನ್ನುತ್ತಾನೆ ಮಾಮ್. ಒಮ್ಮೆ ಮಾತ್ರ ಕಾಯಿಲೆಯಿಂದ ಬಹಳವಾಗಿ ಬಳಲಿದ್ದ ಸಂದರ್ಭ ದಲ್ಲಿ ಸಾವಿನ ಅತ್ಯಂತ ಸಮೀಪದರ್ಶನ ಆದ ಅನುಭವ ತನಗಾಯಿತೆನ್ನುತ್ತಾನೆ. ತುಂಬಾ ನಿತ್ರಾಣನಾಗಿದ್ದುದರಿಂದ ಭಯದ ಅನುಭವವಾಗಲಿಲ್ಲ: ಸದ್ಯ ಈ ರಗಳೆ ಮುಗಿದರೆ ಸಾಕು ಎಂದಷ್ಟೇ ಕಾತರನಾಗಿದ್ದ.

ಭವಿಷ್ಯದಲ್ಲೇ ಸದಾ ವಿಹರಿಸುತ್ತಿದ್ದ ಮಾಮ್‌ಗೆ ತಾನು ರಚಿಸಿಕೊಂಡಿದ್ದ ವಿನ್ಯಾಸದ ಅಂತ್ಯವನ್ನು ಕಾಣುವುದರಲ್ಲೂ ಒಂದು ಬಗೆಯ ಉತ್ಸಾಹ

ಮೂಡುತ್ತಿತ್ತು. ಸಾವಿನ ಆಲೋಚನೆಯು ಅವನಲಿನಲ್ಲಿ ಎಷ್ಟೋ ಬಾರಿ ತೇಲಿದ್ದ. ಆಗಲೇ ಸಂಪೂರ್ಣವಾದ ಬಿಡುಗಡೆ ಲಭಿಸುವುದು ಎಂದು ಅವನ ನಂಬಿಕೆ. ಅವನ ಪ್ರಕಾರ ವಿಸ್ವಾಸ ಪೂರ್ತಿಯಾದ ಮೇಲೆ ಅದರ ಅಂದ ಹೆಚ್ಚಿಸುವ ಮತ್ತೇನನ್ನೂ ಹೊಸದಾಗಿ ಅದಕ್ಕೆ ಸೇರಿಸಲು ಸಾಧ್ಯವಿಲ್ಲವೆಂದು ಮನದಟ್ಟಾದಾಗ ನಿರ್ಗಮಿಸುವುದು ಲೇಸು.


ಬದುಕಿಗೆ ಅರ್ಥವಿಲ್ಲವೆಂದರೆ ನಮ್ಮಲ್ಲಿರುವ ಅಹಂ ಅದನ್ನು ಒಪ್ಪುವುದಿಲ್ಲ. ಮಾನವಕೋಟಿ ಅನಾದಿಕಾಲದಿಂದ ತನಗೆ ಮುಖ್ಯವೆಂದು ತೋರಿರುವ ಮೌಲ್ಯಗಳನ್ನು ಬಹಳ ಶ್ರೇಷ್ಠವೆಂದು ನಂಬಿಕೊಂಡು ಬಂದಿದೆ. ಶಾರೀರಿಕ ಉಪಯುಕ್ತತೆಯಿಂದಲೇ ಇವು ಒಡಮೂಡಿರುವುದಾದರೂ, ಇವುಗಳನ್ನು ಅನುಸರಿಸುವುದರಿಂದ ಐಹಿಕ ಕ್ಲೇಶಗಳಿಂದ ಪಾರಾಗಿ ಪಾರಮಾರ್ಥಿಕದೆಡೆಗೆ ನಡೆಯಬಹುದು ಎಂದೂ ಜನ ತಿಳಿದಿದ್ದಾರೆ. ಸತ್ಯ, ಸೌಂದರ್ಯ ಮತ್ತು ಶಿವವೇ ಆ ಮೂರು ಮೌಲ್ಯಗಳು. ಈ ಗ್ರಂಥದ ಮುಕ್ತಾಯವನ್ನು ಮಾಮ್ ಹೀಗೆ ಮಾಡಿದ್ದಾನೆ.

> ನನ್ನ ಜೀವನ ಒಂದು ಮರೀಚಿಕೆ: ಈ ಮರೀಚಿಕೆಯಲ್ಲಿ ಅದು ಇದು ಮಾಡುತ್ತಾ—ಹಾಗೆ ಮಾಡುವುದು ಅನಿವಾರ್ಯವಾಗಿ ಕಂಡದ್ದರಿಂದ—ಏನೊ ಒಂದು ಪಾತ್ರ ವಹಿಸಿದ್ದೇನೆ—ಎಂದು ಮಾತ್ರ ಯಾವಾಗಲೂ ಅನಿಸಿದೆ. ಹಾಗೆ ಪಾತ್ರ ವಹಿಸುವಾಗಲೂ ನನ್ನಿಂದ ದೂರ ನಿಂತು ನನ್ನ ಬದುಕೆಂಬ ಮರೀಚಿಕೆಯನ್ನು ಪೂರ್ಣವಾಗಿ ವೀಕ್ಷಿಸಲೂ ಸಮರ್ಥನಾಗಿದ್ದೇನೆ. ಇಂದು ನಿಂತು ಒಮ್ಮೆ ಹಿನ್ನೋಟ ಹರಿಸಿದರೆ, ನನಗಾದ ಯಶಸ್ಸು ಅಪಯಶಸ್ಸು, ನೋವು, ನಲಿವು, ತೃಪ್ತಿ, ಮೋಸ, ಇವೆಲ್ಲ ಯಾಕೊ ಏನೊ ವಾಸ್ತವ ಅನ್ನಿಸುವುದೇ ಇಲ್ಲ. ಎಲ್ಲ ಛಾಯೆಯಂತೆ, ತಿರುಳಿಲ್ಲದಂತೆ ಗೋಚರಿಸುತ್ತದೆ. ಪ್ರಾಯಶಃ ಎಲ್ಲೂ ಶಾಂತಿ ಲಭಿಸಿಲ್ಲವಾಗಿ ಪುರಾತನ ತುಡಿತವಾದ ದೈವ ಸಾಕ್ಷಾತ್ಕಾರ ಮತ್ತು ಅಮರತ್ವವನ್ನು ಹೊಂದಲು ನನ್ನ ಹೃದಯ ತುಡಿದಿರಬೇಕು, ಆದರೆ ಬದ್ಧಿ ಇದರೊಡನೆ ಪೂರ್ಣ ಸಹಕಾರ ನೀಡದೆ ತೊಂದರೆಗಿಟ್ಟುಕೊಂಡಿರಬೇಕು. ಇದಕ್ಕಿಂತ ಒಳ್ಳೆಯದು ಬದುಕಿನಲ್ಲಿ ಸಿಕ್ಕದ ಕಾರಣಕ್ಕಾಗಿ—ನಾನು ಎದುರಾದ ಯಾವ ವ್ಯಕ್ತಿಗಳಲ್ಲಿಯೂ ಇದು ಗೋಚರಿಸಲಿಲ್ಲವಾಗಿ—ನಾವು ಶಿವ ಎಂದು ಕರೆಯುವುದನ್ನೇ ನಿಜವೆಂದು ನಟನೆಮಾಡಿದೆ. ಸೌಂದರ್ಯಕ್ಕೆ ವಕ್ಕದ ರೀತಿಯಲ್ಲಿ ಅಲಸ್ಯವನ್ನುಂಟುಮಾಡದೆ ಪ್ರೇಮವನ್ನೂ ವಿಹಾರಿ ಇದು

ಸದಾ ಸುಖ ಕೊಡಲ್ಲದು. ಸಾತ್ವಿಕವಾದ ಕ್ರಿಯೆಯಲ್ಲಿ ಶಿವವು ಗೋಚರವಾಗುವುದೆಂದು ತಿಳಿಯುವುದಾದರೆ, ಈ ಅರ್ಥಹೀನ ಬದುಕಿನಲ್ಲಿ ಯಾವುದು ಸಾತ್ವಿಕವಾದ ಕ್ರಿಯೆಯೆಂದು ಯಾರು ಹೇಳಬಲ್ಲರು? ಕ್ರಿಯೆ ಸುಖವನ್ನು ಗುರಿಯಾಗಿ ಹೊಂದಿರುವುದಿಲ್ಲ; ಸುಖ ಲಭಿಸುವುದಾದರೆ ಅದೊಂದು ಅದೃಷ್ಟವೇ ಸರಿ. ಜ್ಞಾನಿಯಾದವನು ಧ್ಯಾನದಿಂದ ಕೂಡಿದ ಪ್ರಶಾಂತ ಬದುಕಿಗಿಂತ ಹೆಚ್ಚಾಗಿ ಜೀವನದ ಜಂಜಾಟಕ್ಕೆ ಈಡುಮಾಡಿಕೊಂಡು ಸುಖದ ಆಸೆಗಿಂತ ಯಾವಾಗಲೂ ಕರ್ತವ್ಯದ ಹಿರಿಮೆಯನ್ನು ಪರಿಗಣಿಸಬೇಕೆಂದು ಪ್ಲೇಟೊ ತಿಳಿಸಿದ್ದಾನೆ.

ಈ ಪುಸ್ತಕವನ್ನು ಮುಕ್ತಾಯ ಮಾಡುತ್ತಾ ಮಾಮ್ ಮನುಷ್ಯನ ಮಟ್ಟಿಗೆ ಸರಿಯಾದ ಕ್ರಿಯೆ ಎಂದರೇನು ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಾನೆ. ಅವನ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಹಜ ಧರ್ಮ ಮತ್ತು ವ್ಯವಹಾರಗಳಿಗೆ ಅನುಸಾರವಾಗಿ ನಡೆಯುವುದರಲ್ಲಿ ಬದುಕಿನ ಸೌಂದರ್ಯವಿರುವುದು. ಇದನ್ನು ಮಾಮ್ ತನ್ನ ಬದುಕಿನಲ್ಲಿ ಸಾಕ್ಷಾತ್ಕಾರ ಮಾಡಿಕೊಂಡಿರುವ ಸತ್ಯ ಅವನ ಕೃತಿಗಳನ್ನು ಓದಿದವರಿಗೆ ಮನದಟ್ಟಾಗದೇ ಇರದು.

ಸಿ. ನಾಗಣ್ಣ



ನೀರಿನಲ್ಲಿ ದೋಣಿ ಇರಬಹುದು. ಆದರೆ ದೋಣಿಯಲ್ಲಿ ನೀರಿರಬಾರದು. ಆದರೆ ಸಾಧಕನಲ್ಲಿ ಪ್ರಾಪಂಚಿಕತೆ ಇರಬಾರದು.

—ರಾಮಕೃಷ್ಣ ಪರಮಹಂಸ

ಬಲಿಷ್ಠ ಕರ್ನಾಟಕಕ್ಕೆ ಭದ್ರ ಬುನಾದಿ

ರಾಜ್ಯೋತ್ಸವ ದಿನಾಚರಣೆ, ಹಳೆಯ ಮೈಸೂರು ರಾಜ್ಯ ಕರ್ನಾಟಕ ಎಂದು ನಾಮಾಂಕಿತಗೊಂಡು, ಅಪಾರ ಪ್ರಗತಿಯನ್ನು ಪ್ರತಿಬಿಂಬಿಸುವ ಸುದಿನ. ಶತಮಾನಗಳಿಂದ ಅನೇಕ ಧರ್ಮಗಳು ಮತ್ತು ವಿಭಿನ್ನ ಸಂಸ್ಕೃತಿಗಳಿಗೆ ಆಸರೆ ನೀಡಿರುವ ನಾಡಿದು. ಕಲೆಯ ಬೀಡು.

ಈ ಸುಂದರನಾಡಿನ ನವನಿರ್ಮಾಣಕ್ಕೆ ಪ್ರೇರಣೆ ನೀಡಿದ್ದ ಆದರ್ಶಗಳನ್ನು ನೆನಪಿಸಿಕೊಂಡು ಪರಿಪಾಲಿಸುವ ಪಣವನ್ನು ನಾವೆಲ್ಲರೂ ಸ್ವೀಕರಿಸಬೇಕಾದ ಸಮಯ ಇದಾಗಿದೆ. ನಮ್ಮ ಹಿರಿಯರ ಪರಂಪರೆಯನ್ನು ಕಾಪಾಡಿ, ನಾಡಿನ ತರುಣರ ಆಶೋತ್ತರಗಳನ್ನು ಈಡೇರಿಸುವ ಸಮಯ ಮರುಕಳಿಸಿದೆ.

ಸ್ವಾತಂತ್ರ್ಯನಂತರ ಒಂದು ನವರಾಜ್ಯವಾಗಿ ಅಂಕುರಗೊಂಡ ಕರ್ನಾಟಕ ಇಂದು ಸಮೃದ್ಧವಾಗಿ ಬೆಳೆದಿದೆ. ಇಲ್ಲಿ ಪ್ರಬುದ್ಧ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಆಳವಾಗಿ ಬೇರೂರಿ ಶ್ರೀಸಾಮಾನ್ಯನಿಗೆ ಅಧಿಕಾರದ ಫಲವನ್ನು ದಕ್ಕಿಸಿಕೊಟ್ಟಿದೆ. ಸ್ವಚ್ಛ ಮತ್ತು ಮುಚ್ಚುಮರೆ ಇಲ್ಲದ ಆಡಳಿತವನ್ನು ಒದಗಿಸಿ, ಜನರ ನಂಬಿಕೆಗಳಿಗೆ ಇಂಬು ನೀಡಿದೆ. ಆಡಳಿತದಲ್ಲಿ ದಕ್ಷತೆ ಮತ್ತು ನಿಸ್ಪೃಹ ಸೇವೆಯನ್ನು ತಂದಿದೆ.

೧೯೯೩-೯೪ನೆಯ ಸಾಲಿಗಾಗಿ ಆಯೋಜನಾ ಗಾತ್ರವನ್ನು ೩೦೨೫ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದ್ದು, ಇದು ಕಳೆದ ವರ್ಷದ ಬಂಡವಾಳಕ್ಕಿಂತ ಶೇಕಡಾ ೫೮ರಷ್ಟು ಹೆಚ್ಚಾಗಿದೆ.

* ಮುಂದಿನ ೪ ವರ್ಷಗಳಲ್ಲಿ ವಿದ್ಯುತ್ ಕ್ಷೇತ್ರಕ್ಕಾಗಿ ೧೬ ಸಾವಿರ ಕೋಟಿ ರೂ.ಗಳ ಪ್ರಾರಂಭ ಬಂಡವಾಳ ೩೦೦೦ ಮೆಗಾವಾಟ್‌ಗಳ ಪ್ರಸ್ತುತ ಸ್ಥಾಪಿತ ಸಾಮರ್ಥ್ಯವನ್ನು ೭೦೦೦ ಮೆಗಾವಾಟ್‌ಗಳಿಗೆ ಹೆಚ್ಚಿಸುವ ಕ್ರಮ.
* ಅರ್ಥವ್ಯವಸ್ಥೆಯನ್ನು ವೈವಿಧ್ಯಗೊಳಿಸಿ, ಕೃಷಿಕರಿಗೆ ಇತರ ಕ್ಷೇತ್ರಗಳ ಕಸುಬಿಗಾಗಿ ಪ್ರೋತ್ಸಾಹ.
* ಕೈಗಾರಿಕಾ ಬಂಡವಾಳಕ್ಕೆ ಪೂರಕವಾದ ಕೈಗಾರಿಕಾ ಧೋರಣೆ ಮತ್ತು ಪ್ರೋತ್ಸಾಹದ ಕ್ರಮಗಳು.
* ಕೈಗಾರಿಕಾ ಕ್ಷೇತ್ರದಲ್ಲಿ ಈಗಾಗಲೇ ೧೦ ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಿದೆ. ಶತಮಾನದ ಅಂತ್ಯದ ವೇಳೆಗೆ ಅದು ೬೦ ಸಾವಿರ ಕೋಟಿ ರೂ.ಗಳಿಗೆ ಹೆಚ್ಚಲಿದೆ. ೨೬ ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗಾವಕಾಶಗಳು
* ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕಾಗಿ ಪಂಚಾಯತ್ ರಾಜ್ ಶಾಸನವನ್ನು ಅನುಷ್ಠಾನಕ್ಕೆ ತಂದು, ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ.
* ೨೦೦೦ ಇಸವಿಯ ವೇಳೆಗೆ ಪ್ರತಿ ತರಗತಿಗೆ ಒಬ್ಬ ಶಿಕ್ಷಕರನ್ನು ನೇಮಿಸುವ ಕಾರ್ಯಕ್ರಮ.
* ೧೯೯೩ನೆಯ ವರ್ಷವನ್ನು ಕನ್ನಡ ಜಾಗೃತಿ ವರ್ಷವಾಗಿ ಘೋಷಿಸಿ, ಅಧಿಕಾರ ಮಟ್ಟದಲ್ಲಿ ಕನ್ನಡಕ್ಕೆ ಆದ್ಯತೆ.
* ಮುಂದಿನ ೨ ವರ್ಷಗಳಲ್ಲಿ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯ ಸಾಧನೆ

— ಒಗ್ಗೂಡಿ ಬೆಳೆಸೋಣ —

—ಕರ್ನಾಟಕ ವಾರ್ತೆ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: **ಮೂರು ರೂಪಾಯಿ**

ವಾರ್ಷಿಕ ಚಂದಾ : **೩೦ ರೂಪಾಯಿ**

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳು ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ನಂ. ೫/೧, ವಿನೋಬಾ ರಸ್ತೆ

ಮಾನಸ ಗಂಗೋತ್ರಿ ಆವರಣ : : ಮೈಸೂರು-೫೭೦ ೦೦೬

Reg. No. KRNN. 29 / WPP 6

LICENSE No. 21
LICENSED TO POST WITH PAYMENT

Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council Mysore city (India)